೧೯೮೩-೮೪ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) — ಮಾನ್ಯ ಉಪಾಧ್ಯಕ್ಷರೇ, ಅರ್ಥ ಸಚಿವ ಖಾತೆಯನ್ನು ಕೂಡ ಹೊಂದಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ೧೯೮೩-೮೪ನೇ ಸಾಲಿನ ಆಯವ್ಯಯವನ್ನು ಸಭೆಯ ಮುಂದೆ ಮಂಡನೆ ಮಾಡಿದ್ದಾರೆ. ಇದು ಬಹುಶಃ ಅವರು ಅರ್ಥ ಸಚಿವರಾಗಿ ಮಂಡನೆ ಮಾಡತಕ್ಕ ೬ನೇ ಆಯವ್ಯಯವೆಂದು ಭಾವಿಸಿದ್ದೇನೆ; ೧೯೭೦-೭೧ರಲ್ಲಿ ೫ನೇ ಆಯವ್ಯಯವನ್ನು ಮಂಡನೆ ಮಾಡಿರಬಹುದು. ಈಗ ಒಂದು ದಶಕದ ಮೇಲೆ ೬ನೇ ಆಯವ್ಯಯವನ್ನು ಅವರು ಈ ಸದನದ ಮುಂದೆ ಮಂಡನೆ ಮಾಡಿ ಅನೇಕ ವಿಚಾರಗಳನ್ನು ಪ್ರಚುರಪಡಿಸಿದ್ದಾರೆ; ಸಾಕಷ್ಟು ವಿಸ್ತಾರವಾಗಿ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ೫೧ ಪುಟಗಳನ್ನು ಹೊಂದಿರುವ ಈ ಆಯವ್ಯಯ ಭಾಷಣವನ್ನು ನಾನು ಕೂಡ ಪರಿಶೀಲನೆ ಮಾಡಿದೆ. ಯಾವುದೇ ಒಂದು ಆಯವ್ಯಯವನ್ನು ಮಂಡನೆ ಮಾಡಿದರೂ ಅದರ ಮುಖ್ಯ ಉದ್ದೇಶ ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಯಾಗಿರಬೇಕು.

(ಶ್ರೀ ಪಿ. ರಾಮದೇವ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ರಾಜ್ಯದ ಒಂದು ಸಮಗ್ರ ಅಭಿವೃದ್ಧಿಯನ್ನು ಬಯಸುವಾಗ ಅಥವಾ ಈ ಆಯವ್ಯಯದ ಮುಖೇನ ಸಾಧನೆ ಮಾಡಬೇಕೆಂದು ಮಾಡಿದಾಗ ಎರಡು ಪ್ರಮುಖ ವಿಚಾರಗಳನ್ನು ನೋಡಬೇಕಾದ ಅವಶ್ಯಕತೆ ಇದೆ. ಸಾಮಾಜಿಕ ಮತ್ತು ಆರ್ಥಿಕ ಸಮತೋಲನವನ್ನು ಬರೀ ಈ ರಾಜ್ಯದ ಬೇರೆ ಬೇರೆ ವರ್ಗದ ಜನರಲ್ಲಿ ಮೂಲಭೂತವಾಗಿ ನೋಡತಕ್ಕದ್ದು ಒಂದು ವಿಧವಾದರೆ, ಸಾಮಾಜಿಕ ಮತ್ತು ಆರ್ಥಿಕ ಸಮತೋಲನವನ್ನು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಕೂಡ ನೋಡತಕ್ಕದ್ದು ಮತ್ತೊಂದು ವಿಧಾನ. ಆದಾಯ ಸಂಪನ್ಮೂಲಗಳನ್ನು ಈ ಒಂದು ರಾಜ್ಯದ ಸಮಗ್ರ ಅಭಿವೃದ್ಧಿಗೆ ನಾವು ಮಾಡುವಾಗ (ಆದಾಯ ಶೇಖರಣೆ ಮಾಡುವಾಗ) ಕೂಡ ಸಾಕಷ್ಟು ವಿಚಾರಗಳನ್ನು ಮಾಡಬೇಕಾಗುತ್ತದೆ. ಇದರಲ್ಲಿ ಹೆಚ್ಚು ಶೇಖರಣೆಯನ್ನು ಸಿರಿವಂತ ವರ್ಗದಿಂದ ನಾವು ಮಾಡಬೇಕಾದ ಅವಶ್ಯಕತೆ ಕೂಡ ಅತಿ ಅಗತ್ಯವಾಗಿದೆ. ಕೆಲವು ಸಾರಿ ನಾನು ಹೇಳಿದಂತಹ ಕೆಲವು ಸಾಧನೆಗಳನ್ನು ಸಾಧನೆಯಾಗಿ ಮಾಡುವಾಗ ಆಕಸ್ಮಿಕ ಪ್ರಸಂಗಗಳು ಉದ್ಭವವಾಗಬಹುದು. ಕ್ಷಾಮ-ಡಾಮರಗಳು ಅಥವಾ ನೆರೆಯಿಂದ ಆಗತಕ್ಕ ಅನಾಹುತಗಳಿಂದ ಈ ಎಲ್ಲ ಪರಿಸ್ಥಿತಿ ಉದ್ಭವವಾಗಬಹುದು. ಆದರೆ ಮೂಲಭೂತವಾಗಿ ನಾವು ಯಾವುದನ್ನು ಸಾಧನೆ ಮಾಡಬೇಕೆಂದು ಹೊರಟಿದ್ದೇವೆ. ಅದನ್ನು ಬದಿಗೊತ್ತತಕ್ಕ ಪರಿಸ್ಥಿತಿ ಯಾವಾಗಲೂ ಬರಬಾರದು. ಇದರಲ್ಲಿ ಈ ಒಂದು ವಿಚಾರಧಾರೆಯನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿಗಳು ಅನೇಕ ಗುರಿಗಳನ್ನು ಇಟ್ಟುಕೊಂಡಿದ್ದಾರೆ. ಯಾವ ರೀತಿಯಲ್ಲಿ ಪ್ರಾಮಾಣಿಕವಾಗಿ ಸಾಧನೆಯ ಹೆದ್ದಾರಿಯಲ್ಲಿ ಹೋಗಿದ್ದಾರೆಂಬ ಬಗ್ಗೆ ನಾನು ಈ ಸಂದರ್ಭದಲ್ಲಿ ಸ್ವಲ್ಪ ವಿಶ್ಲೇಷಣೆ ಮಾಡಬೇಕಾಗುತ್ತದೆ. ನಾನು ಸಣ್ಣ ಭಾಷಣವನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಏಕೆಂದರೆ ಇನ್ನೂ ಅನೇಕ ಸದಸ್ಯರುಗಳು ಮಾತನಾಡುವವರಿದ್ದಾರೆ. ಆದ್ದರಿಂದ, ಅನೇಕ ವಿಚಾರಗಳನ್ನು ಸೂಕ್ಷ್ಮವಾಗಿ ಹೇಳಿಬಿಡೋಣ ಎಂದು ಪ್ರಯತ್ನ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಹೆಚ್ಚು ವಿಶ್ಲೇಷಣೆ ಮಾಡುವ ಹಾಗೆ ಇಲ್ಲ. ಏಕೆಂದರೆ ಪ್ರಥಮವಾಗಿ ಸರ್ಕಾರ ರಚನೆ ಮಾಡಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ಹೇಳಲಿಕ್ಕೆ ಅವಕಾಶ ಇಲ್ಲ. ಆದರೆ ಅವರು ಯಾವ ರೂಪುರೇಷೆಗಳನ್ನು ಹಾಕಿಕೊಂಡು ಅವನ್ನು ಸಾಧನೆ ಮಾಡಬೇಕೆಂದು ಇಚ್ಛೆಪಡುತ್ತಾರೆ ಅದರ ವಿಶ್ಲೇಷಣೆಗೆ ನನ್ನ ಭಾಷಣ ಸೀಮಿತವಾಗಿರಬೇಕಾಗುತ್ತದೆ. ೧೯೮೨-೮೩ನೇ ಸಾಲಿನ ಎಕನಾಮಿಕ್ ಸರ್ವೆಯನ್ನು ನೋಡಿದರೆ ಅದೇ ಉತ್ತರ ಕೊಡುತ್ತದೆ, ಯಾವ ರೀತಿಯಲ್ಲಿ ಹಿಂದಿನ ಸರ್ಕಾರ ನಡೆದುಕೊಂಡು ಬಂದಿದೆ ಎಂಬುದನ್ನು. ಇವತ್ತು ಈ ಆಯವ್ಯಯವನ್ನು ಇಲ್ಲಿ ಮಂಡಿಸತಕ್ಕಂಥ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ''ಹಿಂದಿನವರಿಂದ ಬಳುವಳಿಯಾಗಿ ಬಂದಿರುವ ಬಹುಮುಖ ಸಮಸ್ಯೆಗಳ ಅರಿವು ನನಗೆ ಇದೆ, ಅದೇನಿದ್ದರೂ. ರಾಜ್ಯದ ಜನತೆ ತೋರಿರುವ ಸದ್ಭಾವನೆಯಿಂದ, ನೀಡಿರುವ ಬೆಂಬಲದಿಂದ, ಎದುರು ಸಾಲಿನಲ್ಲಿರುವ ಮಿತ್ರ ಪಕ್ಷಗಳ ಸಹಕಾರದಿಂದ, ಜನತೆ ತೃಪ್ತರಾಗುವಂತೆ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸುತ್ತೇವೆಂಬ ವಿಶ್ವಾಸ ನನಗಿದೆ'' ಎಂದು ಹೇಳಿದ್ದಾರೆ. ''ಎದುರು ಇರುವ ಮಿತ್ರ ಪಕ್ಷಗಳ ಸಹಕಾರದಿಂದ'' ಅಂದರೆ ಅದರಲ್ಲಿ ನಾವು ಸೇರಿದ್ದೇವೆಂದು ತಿಳಿದುಕೊಂಡು ಹೇಳಿದ್ದಾರೆಯೋ ಇಲ್ಲವೇ ಎಂಬುದು ಗೊತ್ತಿಲ್ಲ. ಬಹುಶಃ ಸರ್ಕಾರದಲ್ಲಿ ಪಾಲುಗಾರರು ಯಾರಿದ್ದಾರೆ ಅವರನ್ನು ಮಾತ್ರ ತಮ್ಮ ಗಮನದಲ್ಲಿಟ್ಟುಕೊಂಡು ಹೇಳಿದ್ದಾರೆಂದು ಭಾವಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಎದುರುಗಡೆ ಕುಳಿತವರು ಶತ್ರು ಅಥವಾ ವೈರಿ ಎಂದು ತಿಳಿಯುವುದಿಲ್ಲ. ನಾವು ನಿಮ್ಮನ್ನು ಹೊರತುಪಡಿಸಿಲ್ಲ ; ಕೈ ಬಿಟ್ಟಿಲ್ಲ.

ಛೇರ್ಮನ್.—'ಫ್ರೆಂಡ್ಲಿ ಪಾರ್ಟಿ' ಎಂದು ಇಂಗ್ಲೀಷ್‌ನಲ್ಲಿದೆ ನೋಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಿದ್ದರೆ ನಾನು ಅದನ್ನು ಈ ಭಾಷಣಕ್ಕೆ ತಿದ್ದುಪಡಿ ಎಂದು ತಿಳಿದುಕೊಳ್ಳುತ್ತೇನೆ. ಈ ದೇಶದ ಹಿತಾಸಕ್ತಿಯ ದೃಷ್ಟಿಯಿಂದ ತಾವು ಇಡತಕ್ಕ ಪ್ರಗತಿಯ ಹೆಜ್ಜೆ ಯಾವುದಿದೆ ಅದರಲ್ಲಿ ನಮ್ಮನ್ನು ಹೊರಗಿಟ್ಟುಕೊಂಡು ಮಾತ್ರ ಕೆಲಸ ಮಾಡಬೇಡಿ.

SRI A. LAKSHMISAGAR.—We have stated 'friendly parties in the Opposition.'

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಪೋಸಿಷನ್ ಎಂದು ಹೇಳಿದ್ದರೆ ಸ್ಫೂರ್ತಿ ಬರುತ್ತಿತ್ತು. ಆದರೂ ಕೂಡ ಸಂತೋಷ ; ಮುಖ್ಯಮಂತ್ರಿಗಳು ನಿಮ್ಮನ್ನು ಹೊರತುಪಡಿಸಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನಮ್ಮ ಸಹಕಾರ ಕೂಡ ನೀವು ನಡೆಸತಕ್ಕ ಪ್ರಗತಿಪರವಾದ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಇದೆ. ನಾವು ಅದಕ್ಕೆ ಯಾವಾಗಲೂ ಸಿದ್ಧರಿದ್ದೇವೆಂದು ಮುಖ್ಯಮಂತ್ರಿಗಳಿಗೆ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಪ್ರಸಂಗಗಳು ಬಂದಾಗ ಅದರ ಬಗ್ಗೆ ತಾವು ಕೂಡ ಹೆಚ್ಚಿನ ತಿಳುವಳಿಕೆ ಕೊಟ್ಟು ವಿರೋಧ ಪಕ್ಷ ಜವಾಬ್ದಾರಿಯುತವಾಗಿ ಕೆಲಸ ಮಾಡುವುದಕ್ಕೆ ಸಹಾಯ ನೀಡುತ್ತೀರೆಂಬ ಭರವಸೆಯನ್ನು ಇಟ್ಟುಕೊಂಡಿದ್ದೇನೆ. ಹಿಂದಿನ ಸರ್ಕಾರದ ಯಾವ ಒಂದು ಪರಂಪರೆ ಎಂದು ತಾವು ಹೇಳುತ್ತಿದ್ದೀರಿ ಅದರ ವಿಚಾರವಾಗಿ ಹೇಳುತ್ತೇನೆ. ತಮ್ಮ ಪಕ್ಷ ಚುನಾವಣೆಯನ್ನು ಎದುರಿಸುವಾಗ ಕೆಲವು ವಿಚಾರಗಳನ್ನು ಹೇಳಿತ್ತು. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದೀರಿ. ಅದನ್ನು ತಮಗೆ ನೆನಪು ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಏತಕ್ಕೆಂದರೆ ಈ ವಿಚಾರಗಳನ್ನು ತಾವು ಚುನಾವಣೆಗೆ ಹೋದಾಗ ಜನತೆಯ ಮುಂದೆ ಇಟ್ಟಿದ್ದೀರಿ. ಜನತೆ ಅದನ್ನು ವಿಚಾರ ಮಾಡಿ ತಮಗೆ ಮತ ಕೊಟ್ಟರೇ ಅಥವಾ ಮಾಡದೇ ಕೊಟ್ಟರೇ ಎಂಬುದನ್ನು ತಮ್ಮ ಪಕ್ಷದವರು ಹೇಳುತ್ತಾರೆ. ಅದು ಪ್ರತ್ಯೇಕ. ಚುನಾವಣಾ ಪ್ರಣಾಳಿಕೆಯಲ್ಲಿ "ಕೂಲಿಗಾಗಿ ಕಾಳು, ಉದ್ಯೋಗ ದೃಢೀಕರಣ ಯೋಜನೆ ಈ ಎಲ್ಲ ಯೋಜನೆಗಳೂ ಭ್ರಷ್ಟಾಚಾರದ ಸಾಧನೆಗಳಾಗಿ ಹೋಗಿವೆ ; ಸಮಗ್ರ ಗ್ರಾಮಾಭಿವೃದ್ಧಿ ಯೋಜನೆಯಂತೂ ಲೂಟಿಯ ಸಾಧನವೇ ಸರಿ" ಎಂದು absolute terms ಬಳಸಿ ಹೇಳಿದ್ದೀರಿ. ಅಂದರೆ ಈ ಕೆಲಸ ಸಾಕಷ್ಟು ಆಗಿದೆ ಅಥವಾ ಆಗಿಲ್ಲ ಎನ್ನುವ ಪ್ರಶ್ನೆ ಇಲ್ಲ. ಎಲ್ಲಾ ಕಡೆ ಲೂಟಿಯಾಗಿದೆ it is a total dacoity committed or something like that—ಈ ರೀತಿ ತಮ್ಮ ಪ್ರಣಾಳಿಕೆಯಲ್ಲಿ ಕಾಣಿಸಿದ್ದೀರಿ. ಇದರ ಬಗ್ಗೆ ಪ್ರಸ್ತಾಪವನ್ನು ನಾನು ಆಮೇಲೆ ಬೇರೆ ಬೇರೆ ಮಾಡುತ್ತೇನೆ. ಈ ಸಾರಿ ತಾವು ಕೊರತೆ ಬಜೆಟ್ಟನ್ನು ಮಂಡನೆ ಮಾಡಿದ್ದೀರಿ. ಸುಮಾರು ೧೬೦.೭೪ ಕೋಟಿ ರೂಪಾಯಿಗಳ ಕೊರತೆ ಬಜೆಟ್ಟನ್ನು ಪ್ರಾರಂಭದಲ್ಲಿ ತಾವು ಮಂಡನೆ ಮಾಡಿದ್ದೀರಿ. ಗ್ರಾಸ್ ಡಿಫಿಸಿಟ್ ೧೭೧.೮೪ ಕೋಟಿ ರೂಪಾಯಿಗಳು. ಇದರಲ್ಲಿ ೧೧.೧೦ ಕೋಟಿ ರೂಪಾಯಿಗಳನ್ನು ಹೆಚ್ಚಿನ ತೆರಿಗೆಗಳ ಮೂಲಕ ಭರ್ತಿ ಮಾಡುತ್ತೇವೆಂದು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಬಹುಶಃ ನಮ್ಮ ಕರ್ನಾಟಕ ರಾಜ್ಯದ ಆರ್ಥಿಕ ಇತಿಹಾಸದಲ್ಲಿ ಇಷ್ಟು ಮೊತ್ತದ ಕೊರತೆ ಬಜೆಟ್ಟನ್ನು ಈ ಬಾರಿ ತಾವು ಮಂಡಿಸಿದ್ದೀರಿ. ಮುಂದೆ ಹೆಜ್ಜೆ ಇಟ್ಟುಕೊಂಡು ಹೋಗುವಾಗ ಸರಿಯಾಗಿ ದಿಟ್ಟ ಹೆಜ್ಜೆಯನ್ನು ಮುಂದೆ ಹಾಕಿಕೊಂಡು ಹೋಗುತ್ತೇವೆಂಬ ವಿಶ್ವಾಸವನ್ನು ಭರವಸೆಯನ್ನು ಇಟ್ಟುಕೊಂಡು ಈ ಕೊರತೆ ಬಜೆಟ್ಟನ್ನು ತಾವು ಮಂಡನೆ ಮಾಡಿರಬಹುದು. ನಾನು ತಮ್ಮ ವಿಚಾರಧಾರೆಗೆ ಆತಂಕಪಡುವುದಿಲ್ಲ. ಆದರೆ ಈ ಬಗ್ಗೆ ಸದನ ಒಪ್ಪಬೇಕಾಗುತ್ತದೆ. ಕರ್ನಾಟಕ ರಾಜ್ಯದ ಜನತೆ ಕೂಡ ಇಷ್ಟು ಅನ್‌ಪ್ರಿಸಿಡೆಂಟೆಡ್ ಕೊರತೆ ಬಜೆಟ್ಟನ್ನು ನಿರ್ವಹಿಸಿಕೊಂಡು ಮುಂದೆ ಹೋಗುವುದಕ್ಕೆ ಸಾಧ್ಯವೆ ಎಂದು ನೋಡುತ್ತಿದ್ದಾರೆ. ಇದನ್ನು ನಿರ್ವಹಿಸಿಕೊಂಡು ಮುಂದೆ ಹೋಗುವುದಕ್ಕೆ ತಾವು ಎಷ್ಟು ಸಮರ್ಥರಾಗುತ್ತೀರಿ ಎಂಬ ಪ್ರಶ್ನೆ ಪ್ರಶ್ನಾರ್ಥಕ ಚಿಹ್ನೆಯಾಗಿ ಉಳಿದುಕೊಂಡು ಬಂದಿದೆ. ನೀವು ಯಾವ ರೀತಿ ಸುಧಾರಿಸಿಕೊಂಡು ಮುಂದೆ ಹೋಗುತ್ತೀರಿ ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇವೆ. ಹಿಂದೆ ಕೂಡ ಈ ರೀತಿ ಕೊರತೆ ಬಜೆಟ್ ಬಂದಿದೆ. ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಈಗ ಸಚಿವರಾದ ಮೇಲೆ ಅನುಭವ ಆಗಿರಬಹುದು. ಏತಕ್ಕೆ ಕೊರತೆ ಬಜೆಟ್ ಬರುತ್ತಿದೆ ಎಂದು ವಿರೋಧಪಕ್ಷದಲ್ಲಿದ್ದಾಗ ಅವರು ಕೇಳು

ತ್ತಿದ್ದರು. ದೇವೇಗೌಡರೂ ಕೂಡ ಆ ಪ್ರಶ್ನೆ ಮಾಡುತ್ತಿದ್ದರೂ ಅಷ್ಟು ತೀವ್ರವಾಗಿ ಖಂಡಿಸಿರಲಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರಂತೂ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಪ್ರಗತಿಯ ಒಂದು ಸ್ಪಂದನ ರಾಜ್ಯದಲ್ಲಿ ಆಗುವಾಗ ಕೊರತೆ ಬಜೆಟ್ಟಿನ ಅವಶ್ಯಕತೆ ಇಲ್ಲ ಎಂಬ ವಾದವನ್ನು ನಾನು ಇಲ್ಲಿ ಕುಳಿತುಕೊಂಡು ಹೇಳಲಿಕ್ಕೆ ಸಿದ್ಧನಿಲ್ಲ. ಎರಡು ಮೂರು ವರ್ಷಗಳ ಕಾಲ ಕರ್ನಾಟಕ ರಾಜ್ಯದ ಅರ್ಥ ವ್ಯವಸ್ಥೆಯಲ್ಲಿ ನಾನೂ ಕೂಡ ಪಾಲ್ಗೊಂಡು, ಭಾಗವಹಿಸಿ ಈ ಆಯವ್ಯಯವನ್ನು ವಿಶ್ಲೇಷಣೆ ಮಾಡಿ ಮಂಡನೆ ಮಾಡದಂಥ ಜವಾಬ್ದಾರಿ ನನ್ನ ಪಾಲಿಗೂ ಇದ್ದುದರಿಂದ ಅದನ್ನು ತಿಳಿದುಕೊಂಡೇ ಹೇಳುತ್ತಿದ್ದೇನೆ, ಇಷ್ಟು ದೊಡ್ಡ ಕೊರತೆ ಬಜೆಟ್ಟನ್ನು ಮಂಡನೆ ಮಾಡಿದಾಗ ಒಂದು ವಿಷಯ ಎಂದರೆ ಇಷ್ಟು ದೊಡ್ಡ ಕೊರತೆ ಬಜೆಟ್ಟನ್ನು ಮಾಡಿಕೊಂಡು ನೀವು ದಾರಿ ತಪ್ಪಿದ್ದೀರಿ ಎಂದು ನನ್ನ ಅನುಭವದ ಆಧಾರದ ಮೇಲೆ, ಮತ್ತು ನಾನು ಅಭ್ಯಾಸ ಮಾಡಿದಂಥ ಆಯವ್ಯಯದ ಆಧಾರದ ಮೇಲೆ ಹೇಳಲಿಕ್ಕೆ ಬಯಸುತ್ತೇನೆ. ನೀವು ಹೇಳಿದ ಹಾಗೆ ತೀವ್ರವಾಗಿ ಕೊರತೆ ಬಜೆಟ್ ಮಾಡಿದ್ದೇ ತಪ್ಪು ಎಂದು ಹೇಳುವುದಿಲ್ಲ ಇಂಥ ಅನುಭವ ಬರಬೇಕು. It is good thing. a This transtormation is good. Under the sky anything could be criticised. ಈಗ ತಮಗೆ ಕಷ್ಟ ಇದೆ ಎಂಬುದು ಗೊತ್ತಾಗಿದೆ. ಕೆಲವು ಸಾರಿ ಅಲ್ಲಿ ಶ್ರೀ ಲಕ್ಷ್ಮೀಸಾಗರ್‌ರವರು ಕುಳಿತುಕೊಂಡು ವಿರೋಧಪಕ್ಷದ ನಾಯಕರಂತೆ ಮಾತನಾಡಿಬಿಟ್ಟು ನಮಗೆ ತಾಪತ್ರಯ ಮಾಡಿಬಿಡುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಭ್ಯಾಸ ಬಲ.

ಶ್ರೀ ಕೆ. ಎಚ್. ರಂಗನಾಥ್.—ಫರ್ನಾಂಡಿಸ್ ಅವರು ಮದುವೆಯಾಗಿದ್ದಾರೆ. ಅದೇ ರೀತಿ ಇವರೂ ಆದರೆ ಸ್ವಲ್ಪ ಸುಧಾರಿಸಬಹುದು ಎಂಬುದು ನನ್ನ ಸಲಹೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ವಿಶ್ವಾಸ ನನಗಿದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಈ ಕಡೆಯಿಂದ ಆ ಕಡೆ ಹೋಗಿದ್ದಾರೆ. ಆ ಕಡೆ ಹೋದಾಗ ಸ್ವಲ್ಪ ಸಮಾಧಾನವಾಗಿರಬೇಕಾಗುತ್ತದೆ. ಆ ವೇದಿಕೆ ಕೂಡ ತಯಾರಾಗಬೇಕು. ರಾಮದೇವ್ ಅವರು ಮತ್ತು ತಾವೆಲ್ಲಾ ಮೀಟಿಂಗ್ ಮಾಡಿಕೊಂಡು ಸುಧಾರಿಸಿಕೊಂಡು ನಮ್ಮನ್ನೂ ನೆಮ್ಮದಿಯಲ್ಲಿಡಬಹುದು. ನಮ್ಮನ್ನು ನೆಮ್ಮದಿಯಲ್ಲಿ ಇಡುವಂತೆ ಏರ್ಪಾಡು ಮಾಡುತ್ತೀರಿ ಎಂದು ನಾನಂದುಕೊಂಡಿದ್ದೇನೆ. ೧೯೮೦-೮೧ರಲ್ಲಿ ನಾವೂ ಕೂಡ ಕೊರತೆ ಬಜೆಟ್ಟನ್ನು ಮಂಡನೆ ಮಾಡಿದ್ದೆವು. ೭೯ ಕೋಟಿ ರೂಪಾಯಿಯ ಕೊರತೆ ಬಜೆಟ್ಟನ್ನು ನಾವು ಆಗ ಮಂಡನೆ ಮಾಡಿದ್ದೆವು. ಟ್ರೆಜರಿ ಬಿಲ್ಸ್ ಕೂಡ ಆ ಪರಿಸ್ಥಿತಿಯಲ್ಲಿ ಮೈನಸ್ ಆಗಿತ್ತು. ೨೪ ಕೋಟಿ ರೂಪಾಯಿ ಟ್ರೆಜರಿ ಬಿಲ್ಸ್ ಕೂಡ ಇರಲಿಲ್ಲ. ಅದು ಮಿನಿಮಂ ಇರಬೇಕಾಗಿತ್ತು. ಓವರ್ ಡ್ರಾಫ್ಟ್ ಕೂಡ ಸಾಕಷ್ಟು ಬೆಳೆದಿದ್ದ ಸಂದರ್ಭದಲ್ಲಿ ನಾವು ಕೊರತೆ ಬಜೆಟ್ಟನ್ನು ಮಂಡನೆ ಮಾಡಬೇಕಾದ ಸಂದರ್ಭ ಬಂತು. ೧೯೮೧-೮೨ರಲ್ಲಿ ಅದನ್ನು ಕಡಿಮೆ ಮಾಡಿದ್ದೇವೆ. ೩೭.೨೯ ಕೋಟಿ ರೂಪಾಯಿಗೆ ಅದನ್ನು ಇಳಿಸಿದ್ದೇವೆ. ೧೯೮೨-೮೩ಕ್ಕೆ ಬರುವಾಗ ೮.೯೦ ಕೋಟಿ ರೂಪಾಯಿ ಆಯಿತು. ಸನ್ಮಾನ್ಯ ಸಚಿವರಾದ ದೇವೇಗೌಡರು ದಯಮಾಡಿ ಇದನ್ನು ನೋಡಬಹುದು. ಕೊರತೆ ಬಜೆಟ್ಟನ್ನು ೭೯ ಕೋಟಿ ರೂಪಾಯಿಗಳಿಂದ ೮.೯೦ ಕೋಟಿ ರೂಪಾಯಿಗೆ ಇಳಿಸಿದ್ದೇವೆ. ಅಂದರೆ ಯಾವ ರೀತಿ ಪ್ರಗತಿಯಾಗಿದೆ ಎಂಬುದನ್ನು ನೋಡಬೇಕು. ಆರ್ಥಿಕ ವ್ಯವಸ್ಥೆಯಲ್ಲಿ ಹಿಡಿತ ಬಂದಂಥ ಸಂದರ್ಭದಲ್ಲಿ ಪುನಃ ೧೬೦ ಕೋಟಿ ರೂಪಾಯಿಗೆ ಕೊರತೆ ಬಂದಿದೆ. ಈ ಬಗ್ಗೆ ಯಾವ ರೀತಿಯ ತೀರ್ಮಾನ ಕೂಡ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿ ವಿಪರೀತವಾಗಿ ಆರ್ಥಿಕ ಪರಿಸ್ಥಿತಿ ಹತೋಟಿ ತಪ್ಪಿದಂಥ ಪರಿಸ್ಥಿತಿಯಲ್ಲಿ ಹತೋಟಿಯಲ್ಲಿ ಇಟ್ಟುಕೊಂಡು ಮುಂದುವರೆಸಿಕೊಂಡು ಹೋಗತಕ್ಕ ಕೆಲಸ ಹೇಗೆ ಮಾಡುತ್ತಾರೆ ನೋಡಬೇಕು. ಒಳ್ಳೆಯ ಅನುಭವ ಪಡೆದ, ಪರಿಣಿತರಾದ, ರಾಜ್ಯದ ಮಟ್ಟಿಗೆ ಮತ್ತು ರಾಷ್ಟ್ರದ ಮಟ್ಟಿಗೆ ಹೆಚ್ಚಿನ ಅನುಭವ ಪಡೆದಂಥ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದ ಆರ್ಥಿಕ ಹತೋಟಿಯನ್ನು ಇಟ್ಟುಕೊಂಡು ಆರ್ಥಿಕ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುತ್ತಾರೆಂಬ ಆಶಾಭಾವನೆ ಕರ್ನಾಟಕದ ಜನರಲ್ಲಿತ್ತು. ನಮ್ಮ ಸದಸ್ಯರ ಆಶಾಭಾವನೆ ಕೂಡ ಅದೇ ಆಗಿತ್ತು. ಆ ದೃಷ್ಟಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ನಮ್ಮನ್ನೆಲ್ಲಾ ನಿರಾಶೆ ಮಾಡಿದ್ದಾರೆ. ಇದಕ್ಕೆ ಕಾರಣ ಕೂಡ ಇರಬಹುದು. Probably, he might have not got the grip of the situation, ಅಥವಾ ಹೊರ ವಲಯದಲ್ಲಿ, ರಾಜಕೀಯವಾಗಿ ಅಭದ್ರತೆ ಸರ್ಕಾರದಲ್ಲಿದೆ, ಸಾಮಾಜಿಕವಾಗಿ ಅಭದ್ರತೆ ಇದೆ ಎಂದು ಏನು ಮಾತುಕತೆ ನಡೆಯುತ್ತಿದೆ ಹಾಗೆ ರಾಜ

ಕೀಯ ಮತ್ತು ಸಾಮಾಜಿಕ ಅಭದ್ರತೆಯ ಹಿನ್ನೆಲೆಯಲ್ಲಿ ಆರ್ಥಿಕ ಅಭದ್ರತೆ ಕೂಡ ಇದೆ ಎಂಬಂದನ್ನು ಆಯವ್ಯಯ ಪಟ್ಟಿ ಸ್ಪಷ್ಟವಾಗಿ ನಿರೂಪಣೆ ಮಾಡಿದೆಯೆಂದು ಹೇಳದೇ ನಿರ್ವಾಹವೇ ಇಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೩ ಪಿ. ಎಂ.

ಬಹುಶಃ ತಾವು ಸರಿಯಾದ ಒಂದು ಆರ್ಥಿಕ ವ್ಯವಸ್ಥೆಯನ್ನು ಹತೋಟಿಯಲ್ಲಿ ಇಟ್ಟುಕೊಂಡು ಮುಂದು ವರಿಸಿಕೊಂಡು ಹೋಗುತ್ತೀರಿ ಎಂದು ಅಂದುಕೊಂಡಿದ್ದೇನೆ. ಈವತ್ತು ಈ ರಾಜ್ಯದ ರಥದ ಸಾರಥಿ ಯಾಗಿರುವ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ರಥದ ಹಗ್ಗವನ್ನು ಬಿಟ್ಟುಬಿಟ್ಟಿದ್ದಾರೆಂದೆನಿಸುತ್ತದೆ. ಅಥವಾ ತಾನು ಹಿಡಿದುಕೊಂಡಿರಬೇಕಾದ ಹಗ್ಗವನ್ನು ಬೇರೆ ಯಾರ ಕೈಗೋ ಕೊಟ್ಟು ರಥವನ್ನು ಸಾಗಿಸುತ್ತಿದ್ದಾರೆನ್ನುವ ಅನುಮಾನ ರಾಜ್ಯದ ಅನೇಕ ಜನತೆಗೆ ಬಂದಿದೆ. ಅವರು ಹಗ್ಗವನ್ನು ಮಿತ್ರರಾದ ಬಿ.ಜೆ.ಪಿ. ಪಕ್ಷದವರ ಹತ್ತಿರ ಕೊಟ್ಟಿದ್ದಾರೋ. ಅಥವಾ ಸಿ.ಪಿ ಎಂ.ರವರ ಕೈಗೆ. ಅಥವಾ ಸಿ.ಪಿ.ಐ. ರವರ ಕೈಗೆ ಕೊಟ್ಟಿದ್ದಾರೋ ಅಥವಾ ಯಾವ ಸಿದ್ಧಾಂತವೂ ಇಲ್ಲದೆ ಸ್ವತಂತ್ರರಾಗಿ ಗೆದ್ದುಬಂದ ಅಭ್ಯರ್ಥಿಗಳ ಕೈಯಲ್ಲಿ ಕೊಟ್ಟಿದ್ದಾರೋ ಗೊತ್ತಿಲ್ಲ. ಆದರೆ ಆ ಹಗ್ಗ ರಾಮಕೃಷ್ಣ ಹೆಗ್ಗಡೆಯವರ ಜನತಾ ಪಕ್ಷದ ಉರುಳು ಆಗುತ್ತದೇನೊ ಎಂಬುದು ನಮ್ಮ ಚಿಂತೆ. ಈ ಬಗ್ಗೆ ನಾವು ಸಹಜವಾಗಿ ಒಂದು ಪ್ರಶ್ನೆ ಇಟ್ಟಿದ್ದೇವೆ. The party in power is in grip of the situation. You are not holding the reigns: Somebody else is holding the reigns. ಇನು ವಿಜಿಬಲ್ ಪರ್ಸನ್ನೇ ಅಥವಾ ಇನ್‌ವಿಜಿಬಲ್ ಪರ್ಸನ್ನೇ ದಯಮಾಡಿ ಹೇಳಿ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಅಟ್ಯಾಕ್ ಮಾಡುವುದಕ್ಕೆ ಇದೊಂದೇ ವೆಪನ್.

ಶ್ರೀ ಎ. ಲಕ್ಷ್ಮೀಸಾಗರ.—ಈ ಹುಲ್ಲುಕಡ್ಡಿಯನ್ನು ಹಿಡಿದುಕೊಂಡು ತಾವು...

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಳುಗುವವರಿಗೆ ಹುಲ್ಲುಕಡ್ಡಿ ಕೂಡಾ ಸಹಾಯಕ್ಕೆ ಬರುತ್ತದೆ. ಅಧ್ಯಕ್ಷರೇ, ಈ ರೀತಿಯ ಒಂದು ದೊಡ್ಡ ಕೊರತೆಯ ಬಡ್ಜೆಟ್ಟನ್ನು ಮಂಡಿಸಬೇಕಾದ ಅವಶ್ಯಕತೆ ಏನು ಎಂಬುದನ್ನು ಸರ್ಕಾರ ಇವತ್ತು ಬಗೆಹರಿಸಬೇಕಾದಂದು ಅವಶ್ಯ ಇದೆ. ೩೧-೩-೧೯೮೨ರಲ್ಲಿ ನಾವು ಯಾವುದೇ ರೀತಿಯಲ್ಲಿ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ನಿಲ್ಲಿಸದೇ ಅವಕ್ಕೆ ನೂರಕ್ಕೆ ನೂರ ನಾಲ್ಕು ಪಟ್ಟು, ನೂರು ಹತ್ತು ಪಟ್ಟು ಪ್ಲಾನ್ ಸ್ಕೀಮ್‌ನಲ್ಲಿ ಯೋಜನಾಪರವಾದ ಮತ್ತು ಅಭಿವೃದ್ಧಿಪರ ವಾದ ಕಾರ್ಯಕ್ರಮಗಳನ್ನು ಹಾಕಿ ಉತ್ತಮವಾದ ಪರಂಪರೆಯನ್ನು ಹಾಕಿದ್ದು ನಮ್ಮ ರಾಜ್ಯದಲ್ಲಿ ಇದೆ. ಇದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಈ ಸದನದಲ್ಲಿ ಹಿಂದೆ ಕೂಡಾ ಹೇಳಿದ್ದೆ. ಇದನ್ನು ಪುನಃ ನೆನಪು ಮಾಡಿಕೊಳ್ಳುವುದು ಒಳ್ಳೆಯದು. ಯಾವ ಒಂದು ಹಿನ್ನೆಲೆಯಲ್ಲಿ, ಪರಂಪರೆಯಲ್ಲಿ ತಾವು ಅಧಿಕಾರವನ್ನು ವಹಿಸಿಕೊಂಡಿದ್ದೀರೋ ಆ ಬಗ್ಗೆ ತಾವು ಯೋಚನೆ ಮಾಡಬೇಕು. ತಾವೂ ಕೂಡಾ ಬಡ್ಜೆಟ್ ಭಾಷಣಗಳನ್ನು ಮಾಡುವಾಗ ಪ್ರಸ್ತಾಪ ಮಾಡಿದ್ದೀರಿ. ತಾವು ಆಗ ವಿರೋಧ ದೃಷ್ಟಿಯಿಂದ ಹೇಳಿದಿರೋ, ಪೂರಕ ದೃಷ್ಟಿಯಿಂದ ಹೇಳಿದಿರೋ ಅದು ತಮಗೆ ಬಿಟ್ಟಿದ್ದು. ೩೧-೩-೧೯೮೨ರಲ್ಲಿ ೮.೯೦ ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ ಮಂಡಿಸಿದ್ದರೆ ಈ ವರ್ಷ ಎಷ್ಟು ಆಗಿದೆ ಸ್ವಾಮಿ? ೧೯೮೧-೮೨ರಲ್ಲಿ ನಿಮಗೇ ಗೊತ್ತಿದೆ over and above the planned expenditure Rs. 39.74 crores ನಾವು. ಆರ್ಥಿಕ ವ್ಯವಸ್ಥೆಯಲ್ಲಿ ತೊಡಗಿಸಿದ್ದೇವೆ, Surplus out of transactions in 1981-82 ಇದು ಪ್ಲಾನಿಂಗ್ ಕಮಿಷನ್‌ಗೆ ಸಂಬಂಧಪಟ್ಟಿದ್ದು. ಆರ್ಥಿಕ ವ್ಯವಸ್ಥೆಯನ್ನು ಹತೋಟಿಯಲ್ಲಿ ಇಟ್ಟುಕೊಂಡು ಅಭಿವೃದ್ಧಿ ಪರ ಕಾರ್ಯಕ್ರಮದಲ್ಲಿ ಹೆಚ್ಚು ಖರ್ಚು ಮಾಡುವುದರಲ್ಲಿ ಇಡೀ ರಾಷ್ಟ್ರದಲ್ಲಿ ನಾವು ಪ್ರಥಮ ಸ್ಥಾನವನ್ನು ಪಡೆದಿದ್ದೆವು ಎನ್ನುವುದನ್ನು ಸೂಚ್ಯವಾಗಿ ಹೇಳುತ್ತೇನೆ. ಇದರಲ್ಲಿ ೨ನೇ ಸ್ಥಾನ ತಮಿಳುನಾಡಿಗೆ ಬಂದಿದೆ. ತಮಿಳುನಾಡಿನ ಸರ್ಕಾರ ೧೭.೫೩ ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಿದರೆ ನಾವು ೩೯.೭೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಾಗೂ ಬೇರೆ ರಾಜ್ಯಗಳ ವಿವರ ಕೂಡಾ ನನ್ನಲ್ಲಿ ಇದೆ. ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಿಲ್ಲ. ಈ ಬಗ್ಗೆ ಇಡೀ ರಾಷ್ಟ್ರದ ಆರ್ಥಿಕ ಸಚಿವರು ಹೇಳಿದ್ದಾರೆ. This is the best financially managed

State. ಎಂದು ಕೂಡಾ ಇದರ ಆಧಾರದ ಮೇಲೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇದು ಎಲ್ಲರಿಗೂ ತಿಳಿದ ಒಂದು ವಿಚಾರವಾಗಿದೆ. ಇದಲ್ಲದೇ ೧೯೮೨-೮೩ರ ಎಕನಾಮಿಕ ಸರ್ವೇ ರೀಪೋರ್ಟ್‌ನನ್ನು ನೋಡಿದಾಗ ಕೂಡಾ ಅದರಲ್ಲಿ ಎಸ್.ಆರ್.ಇ.ಪಿ. ಬಗ್ಗೆ ಐ.ಆರ್.ಡಿ ಪಿ. ಬಗ್ಗೆ ಪ್ರಸ್ತಾಪ ಮಾಡಿದ್ದೀರಿ.

> "There has been a marked progress in the implementation of N.R.E.P. The indications are that by the end of this year more than two lakhs persons may be employed for about 100 days under the scheme compared to 1.5 lakhs persons in the year 1981-82.

೧೯೮೧-೮೨ರ ಸಾಧನೆ ಬಗ್ಗೆ, ಎಲ್ಲಿ ಭ್ರಷ್ಟಾಚಾರ ನಡೆದಿದೆ, ಎಲ್ಲಿ ತೊಂದರೆ ಆಗಿದೆ ಅದನ್ನು ಗುರುತಿಸಿ ತನಿಖೆ ಮಾಡುವ ಬಗ್ಗೆ ಹೇಳಿದ್ದೀರಿ. ಆದರೆ ಒಂದು ವ್ಯವಸ್ಥೆಯಿಂದ ಜಾರಿಯಾದ ಒಂದು ಕಾರ್ಯಕ್ರಮದ ಬಗ್ಗೆ ಮಾತನಾಡುವಾಗ ಯೋಚನೆ ಮಾಡಬೇಕು. ಏಕೆಂದರೆ ತಾವೂ ಕೂಡಾ ಮುಂದೆ ಮಾಡಬೇಕಾಗುತ್ತದೆ. ಆರ್ಥಿಕವಾಗಿ ಹೊಸ ಕ್ರಾಂತಿಯನ್ನು ತರತಕ್ಕದ್ದರಲ್ಲಿ ತಾವು ಗ್ರಾಮಾಂತರ ಪ್ರದೇಶದ ಉದ್ಯೋಗದ ಬಗ್ಗೆ ಅವಕಾಶವನ್ನು ಹೆಚ್ಚು ಮಾಡುವುದರಲ್ಲಿ ಆದಂಥ ಕಾರ್ಯಕ್ರಮಗಳು ತೃಪ್ತಿಕರವಾಗಿದೆಯೆಂದು. ಸಾಕಷ್ಟು ಆಗಿದೆಯೆಂದು ತಾವೇ ಹೇಳಿರುವುದರಿಂದ ತಾವು ಮ್ಯಾನಿಫೆಸ್ಟೋದಲ್ಲಿ ಕಾಣಿಸಿದ ಆಪಾದನೆಗಳಿಗೆ ಅಷ್ಟು ಶಕ್ತಿ ಬರುವುದಿಲ್ಲವೆಂಬುದನ್ನು ತಾವೇ ತಿಳಿದು ಕೊಂಡಿದ್ದೀರಿ. ಯಾರೇ ಆಗಲಿ ಚುನಾವಣೆ ಕಾಲದಲ್ಲಿ ಆಪಾದನೆ ಮಾಡುತ್ತಾರೆ. ಅದು ಸರಿಯೋ ತಪ್ಪೋ ಎನ್ನುವುದು ಅಧಿಕಾರಕ್ಕೆ ಬಂದಮೇಲೇನೇ ಗೊತ್ತಾಗುವುದು. ನನ್ನ ವಿಚಾರ ಇಷ್ಟೇ. ೧೯೮೧-೮೨ರಲ್ಲಿ ೧.೫ ಲಕ್ಷ ಮಂದಿಗೆ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಕೊಡುವುದು ಮಾತ್ರ ಅಲ್ಲದೆ, ಗ್ರಾಮಾಂತರ ಪ್ರದೇಶದಲ್ಲಿ ವಿಶೇಷವಾಗಿ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮ ಇದು ಆಗಿದ್ದು ೧೯೮೨-೮೩ರಲ್ಲಿ ೨ ಲಕ್ಷ ಜನಕ್ಕೆ ಕೆಲಸ ಕೊಟ್ಟ ಹಿನ್ನೆಲೆಯಲ್ಲಿ, ಪರಂಪರೆಯಲ್ಲಿ ತಾವು ೩ ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸತಕ್ಕ ಕಾರ್ಯಕ್ರಮವನ್ನು ಮಾಡಿದಾಗ ಮಾತ್ರ ನಾವು ಅದನ್ನು ಮೆಚ್ಚುವುದಕ್ಕಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಕೂಡ ವಿಶೇಷವಾದ ಗಣನೆಯನ್ನು ತೆಗೆದು ಕೊಳ್ಳಬೇಕು. ಇದರಲ್ಲಿ ಯಾವ ಗುರಿಯನ್ನು ಹಿಂದಿನ ಸರ್ಕಾರ ಹಾಕಿಕೊಂಡಿತ್ತೆಂಬುದು ಎಕಾನಾಮಿಕ್ ಸರ್ವೆ ಪುಟ ೮೩ರಲ್ಲಿ ಇದೆ.

> "During the year 1980-81, Rs. 834.35 lakhs was spent. During the year 1981-82 an amount of Rs. 1144.00 lakhs was spent. This has helped 1.04 lakh persons to get the benefit of the programme. During the year 1982-83, Rs. 2018.00 lakhs is provided and the entire amount is expected to be spent. A higher target of 1.93 lakh persons to be benefitted has been fixed on account of the unspent balance which will be utilised during the year and it is anticipated that the target will be reached during the current year."

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಡತನದ ರೇಖೆಯಿಂದ ಕೆಳಗೆ ಇರತಕ್ಕ ಕುಟುಂಬ ಗಳನ್ನು ಮೇಲಕ್ಕೆ ಎತ್ತತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತು. ತಾವು ತಮ್ಮ ಭಾಷಣ ದಲ್ಲಿ "ಅಂತ್ಯೋದಯ" ಎಂದು ಹೆಸರು ಕೊಟ್ಟಿದ್ದೀರಿ. ಒಂದು ಬ್ಲಾಕ್ ಅಂದರೆ ಒಂದು ತಾಲ್ಲೂಕಿಗೆ ೬೦೦ ಜನರನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತುವಂಥ ಕಾರ್ಯಕ್ರಮ. ತಾವು ಪ್ರತಿ ಗ್ರಾಮ ದಲ್ಲಿ ೫-೬ ಕುಟುಂಬಗಳನ್ನು ಗುರುತಿಸಿ, ಅಂತ್ಯೋದಯ ಯೋಜನೆ ಮೂಲಕ ಬಡತನದ ರೇಖೆಯಿಂದ

ಮೇಲಕ್ಕೆ ಎತ್ತುವಂಥ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇದರಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸ ಬೇಕು. ಸಮಗ್ರ ಗ್ರಾಮೀಣ ಯೋಜನೆಯ ಜೊತೆಗೆ ಅಂತ್ಯೋದಯ ಯೋಜನೆಯೂ ಮುಂದು ವರಿಯುವುದೆ ? ಒಂದು ವೇಳೆ ಹಾಗಿದ್ದರೆ ಪ್ರತಿ ಗ್ರಾಮದಲ್ಲಿ ೧೨-೧೫ ಕುಟುಂಬಗಳನ್ನು ಗುರುತಿಸಿ ಬಡತನದ ರೇಖೆಯಿಂದ ಮೇಲೆತ್ತುವಂಥ ಕಾರ್ಯಕ್ರಮ ಹಾಕಿಕೊಂಡಂತಾಗುತ್ತದೆ. ಇದಕ್ಕಾಗಿ ಸುಮಾರು ೨೦ ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಇಡಬೇಕಾಗುತ್ತದೆ. ಆದರೆ, ತಮ್ಮ ಆಯವ್ಯಯ ಭಾಷಣದಲ್ಲಿ ಅಂತ್ಯೋದಯ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ೨೦-೨೫ ಕೋಟಿ ರೂಪಾಯಿಗಳನ್ನು ಎಲ್ಲೂ ಕೂಡ ಇಟ್ಟಿಲ್ಲ ಅಂದಮೇಲೆ ಅಂತ್ಯೋದಯ ಕಾರ್ಯಕ್ರಮವೂ ಕೂಡ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಒಂದು ಅಂಶ ಎಂದು ನಾವು ಭಾವನೆಯನ್ನು ತಾಳಬೇಕಾಗುತ್ತದೆ. ತಮ್ಮ ಸಮಂಧಾನಕೋಸ್ಕರ ಹೆಸರಂ ಬದಲಾಯಿಸಿ ಕೊಂಡಿದ್ದರೆ ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಏತಕ್ಕೆಂದರೆ ಇದು ಯೋಜನಾ ಆಯೋಗದವರು ಹಾಕಿಕೊಂಡಿರುವಂಥ ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ಕೇಂದ್ರದಿಂದ ಅರ್ಧ ಪಾಲು ಸಹಾಯ ಬರುತ್ತದೆ. ೨೦ ಕೋಟಿಯನ್ನು ತಾವು ಖರ್ಚು ಮಾಡಬೇಕಾದರೆ ೮೨-೮೩ರಲ್ಲಿ ತಮ್ಮ ಅಂತ್ಯೋದಯ ಯೋಜನೆಯನ್ನು ಸೇರಿಸಿದರೆ ಸುಮಾರು ೬೦ ರಿಂದ ೭೫ ಕೋಟಿ ರೂಪಾಯಿಗಳವರೆಗೆ ಹಣ ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಮೂರು ಪಾಲು ಬ್ಯಾಂಕಿನ ಸಹಾಯ ಕೂಡ ಬೇಕಾಗುತ್ತದೆ ಬಡತನದ ರೇಖೆಯಿಂದ ಕೆಳಗೆ ಇರತಕ್ಕ ಹರಿಜನರನ್ನು ಮೇಲಕೆತ್ತತಕ್ಕಂಥ ಕಾರ್ಯಕ್ರಮಕ್ಕೆ ಇಷ್ಟು ಮೊತ್ತದ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈ ರೀತಿಯಾಗಿ ಖರ್ಚು ಮಾಡಿದಂಥ ಹಣ ಸಂಪೂರ್ಣವಾಗಿ ಲೂಟಿಯಾಗಿದೆ ಎನ್ನುವ ಆಪಾದನೆಯನ್ನು ತಾವು ಮಾಡಿದರೆ. ಇದರ ಲಾಭ ಪಡೆದಂಥ ಜನ ತಮ್ಮ ಹೇಳಿಕೆಯನ್ನು ಮೆಚ್ಚಲಾರರು. ತಮ್ಮ ಹೇಳಿಕೆ ಯನ್ನು ಬದಲಾವಣೆ ಮಾಡಿಕೊಂಡು, ಎಲ್ಲೆಲ್ಲಿ ತೊಂದರೆಗಳು ಇವೆ ಅವುಗಳನ್ನು ನೋಡಿಕೊಂಡು ಕಾರ್ಯಕ್ರಮಗಳನ್ನು ಜಾರಿಗೆ ತನ್ನಿ. ಬಡವರ ಹೆಸರಿನಲ್ಲಿ ಲೂಟಿ ಮಾಡುವವರಿದ್ದಾರೆ. ಅಂಥವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಿ. ಆದರೆ, ಕಾರ್ಯಕ್ರಮದ ದೋಷಾರೋಪಣೆ ಮಾಡುವುದಾಗಲೀ ಬಡ ಜನರ ಮೇಲೆ ದೋಷಾರೋಪಣೆ ಮಾಡುವುದು ಆಗಲೀ ಸರಿಯಲ್ಲ. ಬಡವರ ಸುಧಾರಣೆಯಂ ಕಾರ್ಯಕ್ರಮಗಳಿಗೆ ಕೊಡಲಿ ಏಟು ಹಾಕತಕ್ಕಂಥ ಬಡವರಿಗೆ ಕಾರ್ಯಕ್ರಮಗಳಲ್ಲಿ ವಿಶ್ವಾಸ ಹುಟ್ಟದ ಹಾಗೆ ಕಲ್ಪನೆಯ ಸ್ವರೂಪವನ್ನು ಮಾಡಿದರೆ ತಾವು ಮಾಡತಕ್ಕ ಕಾರ್ಯಕ್ರಮಗಳ ಬಗ್ಗೆಯೂ ಕೂಡ ಜನ ವಿಶ್ವಾಸ ತಾಳುವುದಿಲ್ಲ. ಅದಕೋಸ್ಕರ ಬಡವರಿಗಾಗಿ ಇರತಕ್ಕ ಕಾರ್ಯಕ್ರಮಗಳನ್ನು ಪ್ರಾಮಾಣಿಕ ವಾಗಿ ಅನುಷ್ಠಾನಕ್ಕೆ ತರಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ತಾವು ಯಾವುದೇ ರೀತಿಯ ದೋಷಾರೋಪದಿಂದ ಹೋದರೆ ಕರ್ನಾಟಕದ ಪ್ರಗತಿಯ ದೃಷ್ಟಿಯಿಂದ, ದುರ್ಬಲವರ್ಗ ದವರನ್ನು ಮೇಲಕ್ಕೆ ಎತ್ತತಕ್ಕಂಥ ಕಾರ್ಯಕ್ರಮದ ದೃಷ್ಟಿಯಿಂದ ಆಘಾತವಾದಂಥ ಕೆಲಸವಾಗುತ್ತ ದೆಂದಂ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಕಾನಾಮಿಕ್ ಸರ್ವೆನಲ್ಲಿರತಕ್ಕ ಅನೇಕ ಕಾರ್ಯಕ್ರಮ ಗಳನ್ನು ನೋಡಿದರೆ ಹಿಂಜರಿತವಾಗಿಲ್ಲ ಮುಂದೆ ಹೋಗಿದ್ದೇವೆನ್ನುವುದನ್ನು ಹೇಳಿದ್ದಾರೆ. ತಾವೇ ಕೊಟ್ಟಂಥ ಡಾಕ್ಯುಮೆಂಟ್ಸ್‌ನ್ನು ನಮ್ಮ ಸದಸ್ಯರು ಅಲ್ಲಗಳೆಯುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ರಾಜ್ಯದ ಯೋಜನೆಯಲ್ಲಿ ಕೂಡ ಹೇಳಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ೫೦೪ ಕೋಟಿ ರೂಪಾಯಿಗಳನ್ನು ಯೋಜನಾ ನೆಲೆಯಲ್ಲಿ ನಾವು ಖರ್ಚು ಮಾಡಿದ್ದೇವೆ. There is no shortfall as far as the Plan performance is concerned, ಎಂದು ಹೇಳಿದೆ.

ಇನ್ನು ಕೈಗಾರಿಕೆಗಳ ಬಗ್ಗೆ, ಸಕ್ಕರೆ ಉತ್ಪಾದನೆ ಬಗ್ಗೆ, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಬಗ್ಗೆ ಮತ್ತೆ ಡಿ.ಪಿ.ಎ.ಪಿ. ವಿಚಾರವನ್ನು ನೋಡಿದರೂ ಕೂಡ ಪ್ರಗತಿಯಲ್ಲಿ ಕೂಡ ಹಿಂದಿಲ್ಲ. ಮುನ್ನಡೆ ಯನ್ನು ಸಾಧಿಸಿದ್ದೇವೆ ಎನ್ನುವ ಬಗ್ಗೆ ಯಾವ ಅನುಮಾನ ಕೂಡ ಉಳಿದಿಲ್ಲ.

ಸಮಗ್ರ ಗ್ರಾಮೀಣ ಉದ್ಯೋಗ ಯೋಜನೆಗೆ ಹಣವನ್ನು ಬಿಡುಗಡೆ ಮಾಡುವಾಗ ಅತಿ ಹಿಂದುಳಿದ ಜಿಲ್ಲೆಗಳಾದಂಥ ಗುಲ್ಬರ್ಗ ಜಿಲ್ಲೆಗೆ ಹೆಚ್ಚು ಹಣ ಕೊಟ್ಟಿದ್ದೇವೆ. ವಿಶೇಷವಾಗಿ ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗೆ ಹಣವನ್ನು ಒದಗಿಸಿ ಅಲ್ಲಿ ಕೆಲಸ ಆಗತಕ್ಕಂಥ ಪರಿಸ್ಥಿತಿಯನ್ನು ನೋಡಿದ್ದೇವೆ. ತಾವು ಆಯವ್ಯಯನ್ನು ಮಂಡಿಸುವಾಗ ಓವರ್‌ಡ್ರಾಫ್ಟ್ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಅದನ್ನು ನಾವು ಮನಸ್ಸಿ ನಲ್ಲಿಟ್ಟುಕೊಂಡು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆಂದು ಪ್ರಸ್ತಾಪ ಮಾಡಿದ್ದೀರಿ ತಮಗೆ ಗೊತ್ತಿದೆ. ೩೧-೩-೧೯೮೧ಕ್ಕೆ ನಮ್ಮ ರಾಜ್ಯದಲ್ಲಿ ಯಾವರೀತಿಯಾದಂಥ ಓವರ್‌ಡ್ರಾಫ್ಟ್ ಕೂಡ

ಇರಲಿಲ್ಲ. ಓವರ್‌ಡ್ರಾಫ್ಟ್ ರಹಿತವಾದಂಥ ರಾಜ್ಯ ಇದ್ದರೆ ಅದು ಕರ್ನಾಟಕ ರಾಜ್ಯ ಮಾತ್ರ. ಸನ್ಮಾನ್ಯ ಮುಖ್ಯಮಂತ್ರಿಯವರು ೧೯೭೦–೭೧ರಲ್ಲಿ ಅಂದಿನ ಅರ್ಥಮಂತ್ರಿಗಳಾಗಿದ್ದು ಅಧಿಕಾರವನ್ನು ಬಿಟ್ಟು ಹೋದ ಕಾಲದಲ್ಲಿ ಸುಮಾರು ೭೭ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಇತ್ತು. ತಪ್ಪಿದ್ದರೆ ಸರಿ ಮಾಡಿ ನಾನು ಅರ್ಥಮಂತ್ರಿಯಾಗಿ ಇದ್ದಂಥ ಸಂದರ್ಭದಲ್ಲಿ ಎಂಥ ಕಠಿಣ ಪ್ರಸಂಗ ಬಂದರೂ ಕೂಡ ಓವರ್ ಡ್ರಾಫ್ಟನ್ನು ಕಂಟ್ರೋಲ್ ತೆಗೆದುಕೊಂಡಿದ್ದೆ. ೨೯ನೇ ಡಿಸೆಂಬರ್ ೮೨ರಲ್ಲಿ ನಮ್ಮ ಸರ್ಕಾರ ಬಿಟ್ಟು ಹೋಗ ತಕ್ಕಂಥ ಸಂದರ್ಭದಲ್ಲಿ ಯಾವುದೇ ರೀತಿಯ ಓವರ್‌ಡ್ರಾಫ್ಟ್ ಇರಲಿಲ್ಲ. ಆದರೆ, ೩೦ ಡಿಸೆಂಬರ್ ೮ ರಲ್ಲಿ ಓವರ್‌ಡ್ರಾಫ್ಟ್ ೨.೫೨ ಕೋಟಿ. ಇದು ವೇಸ್ ಅಂಡ್ ಮೀನ್ಸ್ ಇರಬಹುದು. ಇದರ ಒಳಗೆ ಅತಿ ಕಡಿಮೆ ಸಮಯದಲ್ಲಿ ೩೦ನೇ ಡಿಸೆಂಬರ್ ೧೯೮೨ಕ್ಕೆ ಇಷ್ಟಿತ್ತು. ಇವತ್ತು ಪರಿಸ್ಥಿತಿ ಏನಾಗಿದೆ ೪ನೇ ಮಾರ್ಚಿ ೧೯೮೩ಕ್ಕೆ ನಮ್ಮ ಓವರ್‌ಡ್ರಾಫ್ಟ್ ೫೯.೬೯ ಕೋಟಿ ಇದೆ.

ಅಧ್ಯಕ್ಷರೇ, ಇವೊತ್ತು ಓವರ್ ಡ್ರಾಫ್ಟ್ ಬೆಳೆಯಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಅದನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾದರೆ ಸರ್ಕಾರದ ಆಡಳಿತ ಯಂತ್ರವನ್ನು ಎಚ್ಚರಿಕೆಯಿಂದ ನಡೆಸ ಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯ ಮೊದಲಿನಿಂದಲೂ ಉತ್ತಮ ಪರಂಪರೆಯನ್ನು ಹಾಕಿ ಕೊಂಡು ಬಂದಿದೆ. ಈಗ ಇಲ್ಲಿ ಆರ್ಥಿಕ ವ್ಯವಸ್ಥೆ ಚೆನ್ನಾಗಿಲ್ಲ ಎಂಬ ಸರ್ಟಿಫಿಕೇಟ್ ಕರ್ನಾಟಕ ರಾಜ್ಯ ಪಡೆದುಕೊಳ್ಳಬಾರದೆಂದು ನಾನು ವಿಶೇಷವಾಗಿ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಈ ಸರ್ಕಾರ ಬಂದ ಪ್ರಥಮದಲ್ಲೇ ಮಾನ್ಯ ಸಚಿವರಾದ ಬೊಮ್ಮಾಯಿಯವರು, ಮುಖ್ಯ ಮಂತ್ರಿಗಳು ಈ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಬಹಳ ಓವರ್‌ಡ್ರಾಫ್ಟ್ ನಮ್ಮ ತಲೆಮೇಲೆ ಹಾಕಿಹೋಗಿದ್ದಾರೆಂದು ಹೇಳುತ್ತಿದ್ದರು. ಪ್ಲಾನಿಂಗ್ ಕಮಿಷನ್ ಡಿಸ್‌ಕಷನ್‌ಗೆ ಹೋಗುವವರೆಗೆ ಹಾಗೆ ಆಪಾದನೆ ಮಾಡು ತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಹೋಗಿ ಚರ್ಚೆ ಮಾಡಿದಾಗ ಕರ್ನಾಟಕದ ರಿಸೋರ್ಸ್ ಮೊಬಲೈಸೇಷನ್ ಚೆನ್ನಾಗಿದೆ ಎಂದು ಅಲ್ಲಿ ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಮ್ಯಾನಿಫೆಸ್ಟೋನಲ್ಲಿ ಹಾಕಿಕೊಳ್ಳದೇ ಹೋದರೆ, ಸರ್ಕಾರದಿಂದ ಆರ್ಥಿಕ ವ್ಯವಸ್ಥೆ ಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಸರ್ಕಾರ ಪ್ರಗತಿಪರ ಕಾರ್ಯಕ್ರಮವನ್ನು ಹಾಕಿಕೊಂಡರೆ ಮಾತ್ರ ಆರ್ಥಿಕ ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು. ಇವೊತ್ತು ರಾಜಕೀಯ ಇಚ್ಛಾಶಕ್ತಿ ಸಡಿಲವಾಗಿದೆ ಎಂಬ ಅನುಮಾನ ಕರ್ನಾಟಕ ರಾಜ್ಯದಲ್ಲಿ ಆಗಿದೆ. ಈ ವಿಚಾರದಲ್ಲಿ ಹೆಚ್ಚಿನ ವಿಶ್ಲೇಷಣೆಯನ್ನು ಸದನದ ಮುಂದೆ ಕೊಡದೇ ಇದ್ದರೆ ಅನುಮಾನ ನಮ್ಮಲ್ಲಿ ಖಾಯಂ ಆಗಿ ಉಳಿ ಯುತ್ತದೆ. ಈ ಬಗ್ಗೆ ಮಾನ್ಯ ದೇವೇಗೌಡರು ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷ 575 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದೀರಿ. ಇದರ ಬಗ್ಗೆ ನಮಗೆ ಸ್ಪಷ್ಟವಾದ ತಿಳುವಳಿಕೆಯನ್ನು ಕೊಡಬೇಕು. ಏಕೆಂದರೆ ಬಹಳ ದೊಡ್ಡ ಕೊರತೆಯ ಬಡ್ಜೆಟ್ಟನ್ನು ರಾಜ್ಯದ ಮುಂದಿಟ್ಟಿದ್ದೀರಿ. ಇದನ್ನು ಯಾವರೀತಿ ಭರ್ತಿ ಮಾಡುತ್ತೀರಾ ತಿಳಿಸಬೇಕು. ತಾವು 575 ಕೋಟಿ ರೂಪಾಯಿಗಳ ಯೋಜನೆಯನ್ನು ಜಾರಿ ಮಾಡುತ್ತೇವೆಂದು ಹೇಳಿದರೆ ಇದು ಜಾರಿ ಮಾಡಲಿಕ್ಕೆ ಅಸಾಧ್ಯವಾಗುತ್ತದೆ, ಇದರ ಬಗ್ಗೆ ನಾನು ಹೊರಗಡೆ ಪ್ರತಿಕ್ರಿಯೆ ಕೊಟ್ಟಾಗ ಹೇಳಿದ್ದೇನೆ. ಇದು 171 ಕೋಟಿ ರೂಪಾಯಿಯ ಪ್ರಶ್ನೆಯಲ್ಲ 1983–84ರ ಅಂತ್ಯಕ್ಕೆ ಸುಮಾರು 250 ಕೋಟಿ ರೂಪಾಯಿಗೂ ಹೆಚ್ಚು ಕೊರತೆಯಾಗುತ್ತದೆ. ಇದರಿಂದ ನಮ್ಮ ಆರ್ಥಿಕ ಕ್ಷೇತ್ರದಲ್ಲಿ ದೊಡ್ಡ ಕೋಲಾ ಹಲವಾಗುತಕ್ಕ ಭಯ, ಶಂಕೆ ಕರ್ನಾಟಕ ರಾಜ್ಯದ ಮುಂದೆ ತಾಂಡವವಾಡುತ್ತಿದೆ. ಇದರ ಬಗ್ಗೆ ಸರ್ಕಾರ ಗಮನವಿಟ್ಟು ತಿಳಿದುಕೊಳ್ಳಬೇಕು. ತಾವು ಸರ್ಕಾರ ನಡೆಸತಕ್ಕದ್ದು ಮುಖ್ಯ ಪ್ರಶ್ನೆ ಅಲ್ಲ. ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸತಕ್ಕದ್ದು ಬಹಳ ಮುಖ್ಯ. ಇವೊತ್ತು ಕರ್ನಾಟಕ ರಾಜ್ಯದ ಜನತೆ ತಮ್ಮಿಂದ ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಿರೀಕ್ಷೆ ಮಾಡುತ್ತಿದ್ದಾರೆನ್ನುವುದನ್ನು ತಾವು ಸ್ಪಷ್ಟ ವಾಗಿ ತಿಳಿದುಕೊಳ್ಳಬೇಕು. 575 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಏನು ತಯಾರು ಮಾಡಿದ್ದೀರಿ, ಇದು ಮಹತ್ವಾಕಾಂಕ್ಷೆಯ ಯೋಜನೆ ಎಂದು ನಾನು ಹೇಳಲಿಕ್ಕೆ ಬಯಸುವುದಿಲ್ಲ. ಹಿಂದೆ ದಾಪುಗಾಲಿನ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಗತಿಪರ ಕಾರ್ಯಕ್ರಮಗಳು ನಡೆದಿರುವುದನ್ನು ನೋಡಿದ್ದೇವೆ. 1972ನೇ ಇಸವಿಯಿಂದ ಪ್ರಗತಿಯ ದಾರಿಯಲ್ಲಿ ಹೋಗುತ್ತಿರುವ ಕರ್ನಾಟಕ ರಾಜ್ಯವನ್ನು ವಿಮುಕ್ತಗೊಳಿಸತಕ್ಕ ಪ್ರಯತ್ನ ಮಾತ್ರ ಕರ್ನಾಟಕ ರಾಜ್ಯದಲ್ಲಿ ಆದೀತೆಂಬ ಆತಂಕದಿಂದ ಮಾತನಾಡುತ್ತಿದ್ದೇನೆ. ಈಗ ತಾವು 575 ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿದ್ದೀರಿ. ಈಗ ಅದರಿಂದ ತಮ್ಮ ಇಂಟರ್‌ನಲ್ ರಿಸೋರ್‌ಸಸ್ ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುತದೆಯೇ ?

1982–83 ರಲ್ಲಿ 257 ಕೋಟಿ ರೂಪಾಯಿ ನಾವು ನಮ್ಮ ಇಂಟರ್‌ನಲ್ ಸೋರ್ಸಸ್‌ನಿಂದ ಲೆಕ್ಕ ಹಾಕಿಕೊಂಡಿದ್ದೆವು. ಅದನ್ನೇ ತೆಗೆದುಕೊಂಡರೂ ಕೂಡ ಇನ್‌ಫ್ಲೇಷನ್ ಕಡಿಮೆಯಾಗುತ್ತಿದೆ. ಕಳೆದ ಬಾರಿ ಹೋಲ್‌ಸೇಲ್ ಇಂಡೆಕ್ಸ್ ಪ್ರಕಾರ 8 ಪರ್‌ಸೆಂಟ್ ಮಾತ್ರ ಇನ್‌ಫ್ಲೇಷನ್ ಆಗಿದೆ. ಇನ್ನು ನಾರ್ಮಲ್ ಸೆಂಟ್ರಲ್ ಅಸಿಸ್ಟೆನ್ಸ್ ಮತ್ತಿತರ ಮೂಲಗಳಿಂದ 1982–83 ರಲ್ಲಿ ಲೆಕ್ಕಾಚಾರ ಹಾಕಿದ ಪ್ರಕಾರ ನಿಮಗೆ 404.69 ಕೋಟಿ ರೂಪಾಯಿ ಬರಬಹುದು. ಈಗ 575 ಕೋಟಿ ರೂಪಾಯಿಗಳಲ್ಲಿ 404.69 ಕೋಟಿ ರೂಪಾಯಿ ಕಳೆದರೆ ಸುಮಾರು 160 ಕೋಟಿ ರೂಪಾಯಿ ಇನ್ನೂ ಕೂಡ ಕೊರತೆಯಾಗುತ್ತದೆ. ಇದನ್ನು ಹೇಗೆ ಸುಧಾರಿಸಿಕೊಂಡು ಹೋಗುತ್ತೀರಾ ಎಂಬ ಮೂಲಭೂತವಾಗಿರತಕ್ಕ ಪ್ರಶ್ನೆ ನಮ್ಮ ಮುಂದಿದೆ. ಅದರ ಬಗ್ಗೆ ತಾವು ದಯಮಾಡಿ ತಿಳಿಸಬೇಕು. ಈ 250 ಕೋಟಿ ರೂಪಾಯಿ ಕೊರತೆ ಬಡ್‌ಜಟ್ ಪರಿಣಾಮವಾಗಿ ಅನೇಕ ಯೋಜನಾ ಕಾರ್ಯಕ್ರಮಗಳು, ಅದು ನೀರಾವರಿ ಯೋಜನೆ ಇರಬಹುದು, ಪವರ್ ಪ್ರಾಜೆಕ್ಟ್ ಇರಬಹುದು, ಅಥವಾ ಬೇರೆ ಅನೇಕ ರೀತಿಯ ಕಾರ್ಯಕ್ರಮಗಳು ಇರಬಹುದು. ತಾವು ಯಾವುದೇ ರೀತಿಯಲ್ಲಿ ಆಘಾತದಿಂದ ತೊಂದರೆಗೆ ಸಿಕ್ಕಬಾರದೆಂದು ಹೇಳಲಿಕ್ಕೆ ಬಯಸುತ್ತೇನೆ. ಇವೊತ್ತು ಮ್ಯಾನಿಫೆಸ್ಟೋನಲ್ಲಿ ಅನೇಕ ಹೊಸ ಕಾರ್ಯಕ್ರಮಗಳನ್ನು ಕಾಣಿಸಿದ್ದೀರಿ. ತಾವು ಹಾಕಿರತಕ್ಕ ಕಾರ್ಯಕ್ರಮಗಳನ್ನು ಮಾಡುತ್ತೀರಾ ಎಂದು ಜನತೆ ನಿರೀಕ್ಷಣೆ ಮಾಡುತ್ತಿದ್ದಾರೆ. ಅದರಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ ಜನತಾ ಹೌಸಿಂಗ್ ಪ್ರೋಗ್ರಾಂನಲ್ಲಿ ಪ್ರತಿ ವರ್ಷ ಎರಡು ಲಕ್ಷ ಮನೆಗಳ ನಿರ್ಮಾಣ ನಮ್ಮ ಗುರಿ ಎಂದು ಹೇಳಿದ್ದೀರಿ. ಇದನ್ನು ತಮ್ಮ ಮ್ಯಾನಿಫೆಸ್ಟೋನಲ್ಲಿ ಕಾಣಿಸಿದ್ದೀರಿ. ಇವೊತ್ತು ತಮ್ಮ ಬಡ್ಜೆಟ್‌ನಲ್ಲಿ ಕಾಣಿಸಿದಂಥ ವಿವರ ನೋಡಿದರೆ ನಾವು ಕೊಟ್ಟಿದ್ದಕ್ಕಿಂತಲೂ ಕಡಿಮೆ ಇದೆ. ಜನತಾ ಮನೆಗಳನ್ನು ಕಟ್ಟಲಿಕ್ಕೆ ತಾವು ಏನು ಹಣ ಇಟ್ಟಿದ್ದೀರಿ ಇದರಲ್ಲಿ ಎರಡು ಲಕ್ಷ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವೇ ತಿಳಿಸಬೇಕು. ಅದೇ ಪ್ರಕಾರ ತಾವು ಬೇರೆ ಅನೇಕ ರೀತಿಯಾದಂಥ ವಿಚಾರಗಳನ್ನು ಇಲ್ಲಿ ತಂದಿದ್ದೀರಿ. ಒಂದು ವಿಚಾರವನ್ನು ಜಾರಿಗೆ ತಂದಿದ್ದೀರಿ. ಅದೇನೆಂದರೆ ಸತ್ತ ರೈತರ ಕುಟುಂಬಗಳಿಗೆ ಮಾಸಿಕ ವೇತನ ಕೊಡುವುದು. ಅದನ್ನು ಸ್ವಾಗತ ಮಾಡುತ್ತೇನೆ. ಅದನ್ನು ಬಿಟ್ಟರೆ, ಭೂಸುಧಾರಣೆ ವಿಚಾರದಲ್ಲಿ ಭೂಮಿ ಕಳೆದುಕೊಂಡವರಿಗೆ 20 ಎಕರೆಗಿಂತಲೂ ಕಡಿಮೆ ಇದ್ದರೆ ಒಂದೇ ವರ್ಷದಲ್ಲಿ ಕೊಡುತ್ತೇವೆಂದು ತಮ್ಮ ಮ್ಯಾನಿಫೆಸ್ಟೋನಲ್ಲಿ ಕಾಣಿಸಿದ್ದೀರಿ. ಬಹುಶಃ ಇದನ್ನು ಪೂರ್ತಿ ಮಾಡುತ್ತೀರಾ ? ಯಾವರೀತಿ ಕೊಡುತ್ತೀರಾ ? ಪ್ರಾಮಾಣಿಕ ಭಾವನೆಯಿಂದ ಹೇಳುವುದಾದರೆ ಬಡ್ಜೆಟ್‌ನಲ್ಲಿ ಇದರ ಬಗ್ಗೆ ನಮೂದಿಸಿಲ್ಲ. ಈ ವಿಚಾರವನ್ನು ಬಡ್ಜೆಟ್‌ನಲ್ಲಿ ಕೈಬಿಟ್ಟಿದ್ದೀರಾ ಎಂದು ಕಾಣುತ್ತದೆ.

3–30 ಪಿ.ಎಂ.

ಇಲ್ಲಿ ತಾವು ಹೇಳಿದ್ದೀರಿ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟಿನ ವಿಚಾರ ದುರ್ವ್ಯವಹಾರದ ಮಟ್ಟಕ್ಕೆ ಮುಟ್ಟಿದೆ. ಸೀಟು ಶುಲ್ಕ ಅಥವಾ ಪ್ರವೇಶ ಶುಲ್ಕವನ್ನು ನಿರ್ದಾಕ್ಷಿಣ್ಯವಾಗಿ ರದ್ದುಗೊಳಿಸಲಾಗುವುದು ಎಂದು. ಆದರೆ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಇಲ್ಲಿ ಉದ್ಭವವಾಗಿದೆ. 5 ವರ್ಷದೊಳಗೆ ಈ ಸೀಟು ಶುಲ್ಕವನ್ನು ರದ್ದು ಮಾಡಬೇಕೆಂದು ನಾವು ಆಜ್ಞೆ ಹೊರಡಿಸಿದ್ದು ಹೈಕೋರ್ಟನಲ್ಲಿದೆ, ನಾವು ಆಜ್ಞೆ ಹೊರಡಿಸಿದ ಪ್ರಕಾರ 3 ವರ್ಷದೊಳಗೆ ಕ್ಯಾಪಿಟೇಷನ್ ಶುಲ್ಕದ ವ್ಯವಹಾರ ಮುಗಿಯಬೇಕಾಗಿತ್ತು. ಆದರೆ ಜನರಿಗೆ ಕೊಟ್ಟಂಥ ವಚನವನ್ನು ಪಾಲಿಸಬೇಕಾದ್ದು ನಿಮ್ಮ ಕರ್ತವ್ಯವಾಗಿದೆ. ಅದನ್ನು ಮರೆಯುವುದು ಸರಿಯಲ್ಲ. ಈ 5 ವರ್ಷಕಾಲ ಅಧಿಕಾರವನ್ನು ಅನುಭವಿಸಿ ಅನಂತರ ಈ ಆಜ್ಞೆಯನ್ನು ಜಾರಿಗೊಳಿಸಬೇಕೆಂಬ ಭಾವನೆ ಏನಾದರೂ ನಿಮ್ಮ ಮನಸ್ಸಿನಲ್ಲಿದ್ದರೆ ಅದನ್ನೂ ಸ್ಪಷ್ಟವಾಗಿ ತಿಳಿಸಬೇಕು.........

ಒಬ್ಬ ಮಾನ್ಯ ಸದಸ್ಯರು.—ಹೈಕೋರ್ಟ್‌ನಲ್ಲಿ ಇದು ಪೆಂಡಿಗ್ ಇರುವುದಕ್ಕೆ ನೀವೇ ಕಾರಣವೆಂದು ಪ್ರತೀತಿ ಇದೆ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಹೈಕೋರ್ಟ್ ಮೇಲೆ ಮಾಡತಕ್ಕ ಆಪಾದನೆ ಎಂದು ನಾನು ಹೇಳಬೇಕಾಗಿದೆ. ಆದರೆ ತಾವು ಏನು ಈ ಮಾತನ್ನು ಹೇಳಿದಿರಿ ಇದನ್ನು ವಾಪಸು ತೆಗೆದುಕೊಳ್ಳಬೇಕು ತಾವು ಹೇಳುವುದನ್ನು ನೋಡಿದರೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಮಾಲೀಕರ ಜೊತೆ ನೀವೂ ಸಾಮೀಲು ಆಗಿದ್ದೀರಿ ಎನ್ನುವ ಮಾತನ್ನು ಯಾವ ಕಾರಣದಿಂದ ಆಡಿದ್ದೀರಿ ಎನ್ನುವುದನ್ನು

ಮಾನ್ಯ ಹಿರಿಯ ಸದಸ್ಯರಾದ ಮಹೇಶ್ವರಪ್ಪನವರು ಹೇಳಬೇಕು. ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡುವ ನಿಲುವನ್ನು ಹಿಂದಿನ ಸರ್ಕಾರ ತಳೆದಿತ್ತು. ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಂಥ ನೀವು ಇನ್ನೂ 5 ವರ್ಷದವರೆಗೆ ನೋಡುತ್ತೇವೆ, ಮಾಡುತ್ತೇವೆಂದು ಹೇಳುವುದನ್ನು ನೋಡಿದರೆ ಇದು ಪೊಳ್ಳು ಆಶ್ವಾಸನೆಯಾಗಿಯೇ ಉಳಿಯುತ್ತದೆಂದು ನೀವು ಕೊಟ್ಟಿರತಕ್ಕ ಬಡ್ಜೆಟನ್ನು ಓದಿದಮೇಲೆ ನಾನು ಅಂದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈ ಹಿಂದುಳಿದವರ ಅಭಿವೃದ್ಧಿಯ ಬಗ್ಗೆ.........

ಶ್ರೀ ವಿ. ಎಸ್. ಆಚಾರ್.—ಕ್ಯಾಪಿಟೇಶನ್ ಶುಲ್ಕದ ಬಗ್ಗೆ ತಾವು ತಮ್ಮ ಕಾಲದ ನಿಲುವುಯನ್ನು, ನೀತಿಯನ್ನು ಹೇಳಿದಿರಿ. ಆದರೆ ನಿಮ್ಮ ಕಾಲದಲ್ಲಿ ಹೊಸದಾಗಿ ಕ್ಯಾಪಿಟೇಷನ್ ಶುಲ್ಕವನ್ನು ಪಡೆದು ಕೊಳ್ಳುವ ಎಷ್ಟು ಕಾಲೇಜುಗಳಿಗೆ ಪರ್ಮಿಷನ್ ಕೊಟ್ಟಿರಿ ಎಂಬುದು ಜ್ಞಾಪಕ ಇದೆಯೆ ? ಇದು ನಿಮ್ಮ ನೀತಿಗೂ, ಬೋಧನೆಗೂ ವಿರೋಧವಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರೈವೇಟ್ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವಿಚಾರದಲ್ಲಿ ತಮ್ಮ ಒಂದು ನೀತಿಯನ್ನು ಹೇಳಬೇಕು. ಯಾರೂ ಖಾಸಗೀ ಕಾಲೇಜನ್ನು ಮಾಡಬಾರದೆಂದು ನಾವು ಇಟ್ಟುಕೊಂಡಿಲ್ಲ. ಆದರೆ ಖಾಸಗಿಯಾಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಮಾಡಿದರೆ ಕ್ಯಾಪಿಟೇಷನ್ ಶುಲ್ಕವನ್ನು ಮುಂದುವರೆಸಬಾರದೆಂದು ನಾವು ಸ್ಪಷ್ಟವಾಗಿ ನಮ್ಮ ನಿಲುವನ್ನು ಹೇಳಿದ್ದೇವೆ.

ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅವರ ಮ್ಯಾನಿಫೆಸ್ಟೋದಲ್ಲಿ ಬಹಳ ಪ್ರಮುಖವಾದ ವಿಚಾರವಾಗಿ ಹೇಳಿದ್ದ ವೃತ್ತಿ ತೆರಿಗೆಯನ್ನು ರದ್ದು ಮಾಡುವ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ? ತಮ್ಮ ಬಡ್ಜೆಟ್ ಭಾಷಣದಲ್ಲಿ ವೃತ್ತಿ ತೆರಿಗೆ ರದ್ದತಿ ಮತ್ತು ನೆರೆ ರಾಜ್ಯಗಳಿಗೆ ಸಮಾನವಾದ ಮಾರಾಟ ತೆರಿಗೆಗಳು ಹಾಗೂ ನಿಯಂತ್ರಿತ ಮಾರುಕಟ್ಟೆಗಳ ತೆರಿಗೆಗಳ ವಿಚಾರದಲ್ಲಿ ಪ್ರಸ್ತಾಪವಾಗಿದೆ. ಆದರೆ ಇಲ್ಲಿ ವೃತ್ತಿ ತೆರಿಗೆಯನ್ನು ರದ್ದು ಮಾಡುವ ಬದಲು ಸಣ್ಣ ಸಣ್ಣ ಪ್ಲಾಂಟರುಗಳು ಅಂದರೆ 2 ಹೆಕ್ಟೇರಿಗಿಂತ ಹೆಚ್ಚಿಗೆ ಇರತಕ್ಕ ಸಣ್ಣ ಹಿಡುವಳಿದಾರರಿಗೆ ಕೂಡ ನೀವು ವೃತ್ತಿ ತೆರಿಗೆಯನ್ನು ಹಾಕುವ ಮೂಲಕ ಇಡೀ ರೈತ ಸಮುದಾಯಕ್ಕೇ ತೆರಿಗೆಯ ಹೊರೆಯನ್ನು ಹಾಕಲು ಹೊರಟಿದ್ದೀರಿ. ನಾವು 10 ಎಕರೆಯೊಳಗಿನತಕ್ಕ ಸಣ್ಣ ಪ್ಲಾಂಟರ್‌ಗಳಿಗೆ ವೃತ್ತಿ ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದೆವು. ತಾವು ದಯವಿಟ್ಟು ಈ ವೃತ್ತಿ ತೆರಿಗೆಯನ್ನು ಹಾಕುವುದು ಬೇಡ. ಸಕಲೇಶಪುರಕ್ಕೆ ನಾನು ಹೋಗಿದ್ದೆ. ಅಲ್ಲಿ ಬಡ ಹೆಣ್ಣುಮಕ್ಕಳು ಹರಕಲು ಲಂಗವನ್ನು ಹಾಕಿಕೊಂಡು ಓಡಾಡುತ್ತಿದ್ದರು. ಮಾನ್ಯ ದೇವೇಗೌಡರೂ ಸಕಲೇಶಪುರಕ್ಕೆ ಹೋದರೆ ಗೊತ್ತಾಗುತ್ತದೆ. ಅಲ್ಲಿನ ಜನರು ಅವರನ್ನು ಘೇರಾವ್ ಮಾಡಿದರೂ ಮಾಡಬಹುದು. ಸಣ್ಣ ಸಣ್ಣ ರೈತರ ಬಗ್ಗೆ ಕಾಳಜಿ ಇರತಕ್ಕ ತಾವು ಈ ರದ್ದಾದ ವೃತ್ತಿ ತೆರಿಗೆಯನ್ನು ಮತ್ತೆ ಹಾಕುವುದಕ್ಕೆ ಹೋಗುತ್ತಿರುವುದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಸರ್ಕಾರೀ ನೌಕರರ ಬಗ್ಗೆ ಹೇಳುವುದಾದರೆ, ಇವರು ಪೂರ್ತಿಯಾಗಿ ನಿರಾಶರಾಗಿದ್ದಾರೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ವೃತ್ತಿ ತೆರಿಗೆಯ ಬಗ್ಗೆ ಹೇಳುವುದಾದರೆ, ನಾವು, ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಆದರೆ ಇದನ್ನು ರದ್ದು ಮಾಡುವುದಿಲ್ಲವೆಂದು ನಾವು ಹೇಳಿಲ್ಲ. ತಮಗೆ ಗೊತ್ತಿರುವಂತೆ ವೃತ್ತಿ ತೆರಿಗೆಯನ್ನು ಹಾಕುವ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ ಅಂದರೆ ಕಾರ್ಪೊರೇಷನ್, ಮುನಿಸಿಪಾಲಿಟಿಗಳಿಗೆ ಇದೆ. ಆ ಅಧಿಕಾರವನ್ನು ರಾಜ್ಯಸರಕಾರ ತೆಗೆದು ಕೊಂಡು ಈ ವೃತ್ತಿ ತೆರಿಗೆಯನ್ನು ಹಾಕುತ್ತಿದೆ. ನಾವು ಇವತ್ತು ಇದನ್ನು ತೆಗೆದು ಹಾಕಿದರೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಆದಮೇಲೆ ಅವರು ಈ ವೃತ್ತಿ ತೆರಿಗೆಯನ್ನು ಹಾಕುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳಾದ ಮೇಲೆ ಆ ಚುನಾಯಿಂತ ಪ್ರತಿನಿಧಿಗಳ ಜೊತೆ ಚರ್ಚೆಮಾಡಿ ನಂತರ ಈ ವೃತ್ತಿ ತೆರಿಗೆಯನ್ನು ತೆಗೆದುಹಾಕುವುದು ಸೂಕ್ತವಲ್ಲವೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ನನಗೆ ತಿಳಿದಿರುವಂತೆ ಸ್ಥಳೀಯ ಸಂಸ್ಥೆಗಳು ಈ ವೃತ್ತಿ ತೆರಿಗೆಯನ್ನು ವಸೂಲ್ಮಾಡುತ್ತಿದ್ದಾಗ ಕೇವಲ 6 ಲಕ್ಷ ರೂ. ಮಾತ್ರ ವಸೂಲಾಗುತ್ತಿತ್ತು. ಆದರೆ ಅದನ್ನು ಸರ್ಕಾರವೇ ತೆಗದುಕೊಂಡ ಮೇಲೆ ಈಗ ೯ ಕೋಟಿ ರೂ. ವಸೂಲಾಗುತ್ತಿದೆ. ಈಗ ಪುನ: ನೀವು ಈ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೇ ಕೊಡುವುದಾದರೆ ಅವರು ಅದನ್ನು ವಸೂಲ್ಮಾಡುವುದಕ್ಕೆ ಎಷ್ಟು ಸಮರ್ಥರಾಗಿದ್ದಾರೆಂದು ತಾವು ತಿಳಿದುಕೊಳ್ಳಬೇಕು. ನಿಮ್ಮ ಪ್ರಾಮಾಣಿಕತೆ ಈ ಆಯವ್ಯಯದಲ್ಲಿ ಕಾಣುತ್ತಿಲ್ಲ. ನೀವು ಈ ವೃತ್ತಿ ತೆರಿಗೆಯನ್ನು ತೆಗೆದುಹಾಕುವ ಪ್ರಯತ್ನವನ್ನು ಮಾಡಬಹುದಿತ್ತು. ಆದರೆ ವೃತ್ತಿ ತೆರಿಗೆ ಇಲ್ಲದೇ ಇದ್ದಂಥ ವರ್ಗಕ್ಕೂ ತೆರಿಗೆ ಹಾಕುವುದಕ್ಕೆ ಹೋಗುತ್ತಿರುವುದನ್ನು ನೋಡಿದರೆ ತಾವು ಕೊಟ್ಟಂಥ ಆಶ್ವಾಸನೆಯನ್ನು ಈಡೇರಿಸುವುದರಲ್ಲಿ ಓಂಪರಿಯುತ್ತಿದ್ದೀರಿ ಎಂಬುದು ಜನತೆಗೆ ತಿಳಿಯುತ್ತಿದೆ.

ಇನ್ನೊಂದು ವಿಚಾರ ಸರ್ಕಾರೀ ನೌಕರರಿಗೆ ಸಂಬಂಧಪಟ್ಟಂತೆ ಕೊಟ್ಟಿರುವ ಆಶ್ವಾಸನೆ ಎಂದರೆ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಏರಿಸುತ್ತೇವೆ, ಹಳ್ಳಿಗಳಿಗೆ ಹೋಗತಕ್ಕ ನೌಕರರಿಗೆ ಮನೆ ಬಾಡಿಗೆ ಭತ್ಯ, ಮತ್ತಿತರ ಭತ್ಯಗಳನ್ನು ಕೊಡುತ್ತೇವೆ, ಕೇಂದ್ರ ನೌಕರರ ಸಂಬಳದ ಸಮಾನತೆಯನ್ನು ಸಾಧಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೀರಿ...... ....

ಶ್ರೀ ಎಸ್. ಆರ್ ಬೊಮ್ಮಾಯಿ.—೫ ವರ್ಷದಲ್ಲಿ ಜಾರಿಗೆ ತರುತ್ತೇವೆಂದು ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನೀವು ಹೇಳುವುದನ್ನು ನೋಡಿದರೆ ೫ ವರ್ಷ ಆದಮೇಲೆ ಮತ್ತೆ ಜನರಿಗೆ ಆಸೆಯನ್ನು ತೋರಿಸಿಕೊಂಡು ಅವರಿಂದ ಓಟು ತೆಗೆದುಕೊಂಡು ಅಧಿಕಾರಕ್ಕೆ ಬರುವಂತೆ ಕಾಣುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ೨ ತಿಂಗಳು ಮಾತ್ರ ಆಗಿದೆ. ನಮಗೆ ಇನ್ನೂ ೪ ವರ್ಷ ೧೦ ತಿಂಗಳು ಕಾಲಾವಕಾಶ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ ಈ ಆಸೆ ಜನರಲ್ಲಿ ಮೂಡಿಲ್ಲ. ತರೀಕೆರೆ ಚುನಾವಣೆಯಲ್ಲಿ ತಾವು ನೋಡಿದರಲ್ಲಾ. ನಿಮ್ಮ ಆಶ್ವಾಸನೆಯನ್ನು ನೋಡಿ ಆ ಜನರು ಖುಷಿಯಾಗಿ ನಿಮಗೆ ಓಟು ಕೊಡಲಿಲ್ಲ. ಆದನ್ನು ನೋಡಿ ನೋಡಿ ನೀವು ಸುಸ್ತು ಆದಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ತರೀಕೆರೆ ವಿಚಾರ ಗೊತ್ತಿದೆ. ನೀವು ಅಧಿಕಾರದಲ್ಲಿ ಇದ್ದಾಗ ಬಸವನಗುಡಿ ಒಂದನ್ನು ಬಿಟ್ಟು ಉಳಿದೆಲ್ಲ ಉಪಚುನಾವಣೆಗಳಲ್ಲೂ ಜಯಭೇರಿಯನ್ನು ಹೊಡೆದಿರಿ. ಆದರೆ ಈ ಸಾರಿ ೫ನೇ ತಾರೀಖು ನಡೆದಂಥ ಚುನಾವಣೆಯಲ್ಲಿ ಫಲಿತಾಂಶ ಏನಾಯಿತು ?

ಶ್ರೀ ವೈ. ರಾಮಕೃಷ್ಣ.—ಅದು ತಮಗೂ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಬಸವನಗುಡಿಯಲ್ಲಿ ಟಿ. ಆರ್. ಶಾಮಣ್ಣನವರು ೩೦ ಸಾವಿರ ಓಟುಗಳನ್ನು ತೆಗೆದುಕೊಂಡು ಆಗ ಗೆದ್ದಿದ್ದರು. ಆದರೆ ಅದನ್ನು ಈ ಸಾರಿ ೭೫೦ಕ್ಕೆ ಇಳಿಸಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಹೊಸ ಕತೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅದನ್ನು ಅವರಿಗೆ ಹೇಳಿ. ಇನ್ನು ಮೇಲೆ ಹೊಸ ಅಧ್ಯಾಯಗಳು ಪ್ರಾರಂಭವಾಗುತ್ತದೆ. ಅದನ್ನು ಕೂಡ ನೋಡೋಣ. ಈಗ ಮಾನ್ಯ ಮುಖ್ಯ ಮಂತ್ರಿಗಳು ಕನಕಪುರದಲ್ಲಿ ಓಟಿಗೆ ನಿಲ್ಲುತ್ತಾರೆ ಅಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ನೀವು ಎಷ್ಟು ಭದ್ರವಾಗಿರುತ್ತೀರಿ ಎಂಬುದನ್ನು ನೋಡುತ್ತೇವೆ ನೀವು ಭದ್ರವಾಗಿರಬೇಕೆಂದೇ ನಮ್ಮ ಆಸೆ. ಆದರೆ ಎಷ್ಟು ಹಿಡಿದು ನಿಲ್ಲಿಸಿದರೂ ಕಾಲು ಮಾತ್ರ ತಳಮಳವಾಗುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಬಹಳ ನಡುಗುತ್ತಿದ್ದೀರಿ. ಏಕೆಂದರೆ ಈಗ್ಗೆ ೬ ತಿಂಗಳಿಂದ ನಿಮ್ಮ ಪಕ್ಷದ ಅಧ್ಯಕ್ಷರನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಅಧ್ಯಕ್ಷರನ್ನು ಮಾಡಿಕೊಳ್ಳುತ್ತೇವೆ. ಆದರೆ ನಿಮ್ಮ ಅಧ್ಯಕ್ಷಸ್ಥಾನ ಮ್ಯೂಸಿಕಲ್ ಚೇರ್ ಆಗಿದೆ. ಅವರು ನನಗೆ ಬೇಡ ಎನ್ನುತ್ತಾರೆ, ಇವರು ನನಗೆ ಬೇಡ ಎನ್ನುತ್ತಾರೆ, ಮಾನ್ಯ ಜೆ.ಹೆಚ್. ಪಟೇಲ್‌ರವರು ನಾನು ತೆಗೆದುಕೊಳ್ಳುತ್ತೇನೆಂದು ಹೇಳಿದರು. ಆದರೆ

ಅವರೂ ಬೇಡ ವೆಂದರು. ನಿಮ್ಮಲ್ಲಿ ಎಲ್ಲರೂ ಮಂತ್ರಿಗಳಾಗ ಬೇಕೆಂದಿದ್ದಾರೆಯೋ ಹೊರತು, ಆ ಅಧ್ಯಕ್ಷಪದವಿ ಯಾರಿಗೂ ಬೇಕಾಗಿಲ್ಲ. ಅಂದರೆ ನಿಮ್ಮದು ಯಾರಿಗೂ ಬೇಕಲ್ಲದ ಅಧ್ಯಕ್ಷ ಪದವಿಯಾಗಿದೆ. ನಮ್ಮದು ಹೇಳುತ್ತಿದ್ದೀರಿ, ಏತಕ್ಕೆಂದರೆ, ಅಷ್ಟೊಂದು ಭವ್ಯತೆಯಿಂದ ಕೂಡಿ ಅಧ್ಯಕ್ಷ ಪೀಠ ಅದು. ಆದ್ದರಿಂದ ಅದು ಅಷ್ಟೇ ಭವ್ಯತೆಯಿಂದ ಉಳಿದುಕೊಂಡು ಬಂದಿರುತ್ತದೆ. ಆದರೆ ನಿಮ್ಮ ಅಧ್ಯಕ್ಷ ಪೀಠ ಯಾರಿಗೂ ಬೇಡವಾದಂಥ ಅಧ್ಯಕ್ಷಪೀಠವಾಗಿರುತ್ತದೆ. ಯಾರಿಗೂ ಬೇಡವಾದಂಥ ಅಧ್ಯಕ್ಷ ಪೀಠವನ್ನು ಕೊನೆಗೆ ನಿಮಗೆ ಮಾಡಲು ಕಳುಹಿಸಿ ಕೊಡುತ್ತಾರೋ ಏನೋ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹಳ ಸಂತೋಷ, ಆ ಅಧ್ಯಕ್ಷ ಪೀಠವನ್ನು ಉಳಿಸಿಕೊಳ್ಳಲಿಕ್ಕೆ ಮಂತ್ರಿ ಪದವಿಯನ್ನಾದರೂ ತ್ಯಾಗ ಮಾಡಲಿಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರು ತ್ಯಾಗ ಮಾಡದಂಥ ಮಂತ್ರಿ ಪದವಿಯನ್ನು ತ್ಯಾಗ ಮಾಡಬಹುದು. ಆದರೆ ಯಾರಿಗೂ ಬೇಡವಾದ ಅಧ್ಯಕ್ಷ ಪೀಠಕ್ಕೆ ನೀವು ಹೋಗಬೇಡಿ. ಏತಕ್ಕೆಂದರೆ ನೀವು ನಮಗೆ ಬೇಕು. ನೀವು ಹಿರಿಯ ಸದಸ್ಯರು.

ಶ್ರೀ ಜೆ.ಹೆಚ್. ಪಟೇಲ್.— ನಮ್ಮ ವಿರೋಧಪಕ್ಷದ ನಾಯಕರು ಬಾರಿಬಾರಿಗೂ ತರೀಕೆರೆ ವಿಚಾರ ವನ್ನೇ ಹೇಳುತ್ತಿರುತ್ತಾರೆ. ಸಾಮಾನ್ಯವಾಗಿ ನಮ್ಮ ಕರ್ನಾಟಕದ ಜನರು ಬಹಳ ದಯೆಯುಳ್ಳಂಥ ಜನ. ಹಡಗೇ ಮುಳುಗಿ ಹೋದಾಗ ಒಂದು ಸಣ್ಣ ದೋಣಿಯನ್ನಾದರೂ ಕೊಡತಕ್ಕಂಥ ಜನ. ಆದ್ದರಿಂದ ಅಧಿಕಾರವೇ ಹೋಯಿತಲ್ಲ ಎಂದು ಕರುಣೆ ತೋರಿ ಒಂದು ಸ್ಥಾನವನ್ನು ಗಳಿಸಿಕೊಟ್ಟರು.

ಶ್ರೀ ಕೆ. ಎಚ್. ರಂಗನಾಥ್.—೧೯೭೧–೭೨ರಲ್ಲಿ ಹೆಗಡೆಯವರ ಹಡಗು ತೇಲಿತೋ ಮುಳುಗಿತೋ ಅದನ್ನು ಹೇಳಿ?

ಶ್ರೀ ಜೆ.ಡಿ. ಸೋಮಪ್ಪ.—ಇವರು ಅದನ್ನೇ ರಿಪೇರಿ ಮಾಡಿಕೊಂಡು ಹೊರಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆದ್ದರಿಂದ ನಿಮ್ಮ ಸರ್ಕಾರ ಎಷ್ಟು ಭದ್ರವಾಗಿ ಇರಬೇಕಿತ್ತೋ ಅಷ್ಟು ಭದ್ರವಾಗಿರದೆ ಅಭದ್ರವಾಗಿ ಇರತಕ್ಕಂಥ ಸರ್ಕಾರವಾಗಿರುತ್ತದೆ.

ಶ್ರೀ ಜೆ.ಹೆಚ್. ಪಟೇಲ್.— ಮೊದಲ ಸಾರಿ ಮಾನ್ಯ ಸದಸ್ಯರು ಹೇಳಿದ ಹಾಗೆ ಅಭದ್ರವಾಗಿರ ಬಹುದು; ಭದ್ರವಾಗಿರಬೇಕೆಂದು ನನಗನಿಸಿತು. ಆದರೆ ಬಾರಿಬಾರಿಗೂ ಹೇಳುತ್ತಿರುವುದನ್ನು ನೋಡಿದರೆ ಖಾಯಂ ಆಗಿ ಭದ್ರವಾಗಿಯೇ ಇದೆ ಎಂದು ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಭದ್ರವಾಗಿಯೇ ಇರಬೇಕು. ಅಭದ್ರವಾಗಿ ಇರುವುದು ಬೇಡ.

ಒಬ್ಬ ಮಾನ್ಯ ಸದಸ್ಯರು.—ನೀವು ಶಕುನಿಯ ಕೆಲಸವನ್ನು ಮಾಡಲು ಹೋಗಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ಏನು ಶಕುನಿ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಮಾಡಿದರೆ ನಿಮ್ಮಲ್ಲಿಯೇ ಮಾಡಬೇಕು. ನಮ್ಮಲ್ಲಿ ಯಾರು ಶಕುನಿಯ ಕೆಲಸ ಮಾಡುವುದಿಲ್ಲ. ಆ ಕೆಲಸ ಮಾಡುವುದು ನಾವಲ್ಲ.

ಶ್ರೀ ಜೆ. ಎಚ್. ಪಟೇಲ್.—ನಮ್ಮ ಸರ್ಕಾರದ ಭದ್ರತೆಯ ಬಗ್ಗೆ ವಿರೋಧಪಕ್ಷದ ನಾಯಕರಿಗೆ ಕಾಳಜಿ ಬೇಕಾಗಿಲ್ಲ. ಅವರು ಗಮನಿಸಬೇಕು ನಮ್ಮ ಸರ್ಕಾರದ ಬಗ್ಗೆ ಭದ್ರತೆಯಬಗ್ಗೆ ಕಾಳಜಿ ಇದ್ದೇ ಇದೆ. ಅದಕ್ಕಿಂತಲೂ ಹೆಚ್ಚಿನ ಕಾಳಜಿ ಸಮಾಜಕ್ಕೆ, ಜನತೆಗೆ ಭದ್ರಸರ್ಕಾರವನ್ನು ಕೊಡಬೇಕು ಎನ್ನುವುದೇ ನಮ್ಮ ಕಲ್ಪನೆ.

ಶ್ರೀ ಎಂ. ವೀರಪ್ಪಮೊಯಿಲಿ.— ನಮ್ಮ ಕಲ್ಪನೆ ಹೊಸ ಸರ್ಕಾರ ಅಭದ್ರ ಸರ್ಕಾರ, ಆದರೆ ಸುಭದ್ರವಾದ ಆಡಳಿತ ರಚನೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಗಂಭೀರವಾಗಿ ಆಲೋಚನೆ ಮಾಡತಕ್ಕಂಥದಾಗಿರುತ್ತದೆ.

ಶ್ರೀ ಪಿ. ರಾಮದೇವ್.—ಎಲ್ಲರೂ ಸುಭದ್ರವಾಗಿಯೇ ಇರುತ್ತಾರೆ. ದಯವಿಟ್ಟು ಮಾನ್ಯ ವಿರೋದಪಕ್ಷದ ನಾಯಕರು ಬಡ್ಜೆಟ್‌ಮೇಲೆ ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.--ಮಾನ್ಯ ಅಧ್ಯಕ್ಷರೇ, ಇನ್ನು ಕೈಗಾರಿಕೆಯ ಬಗ್ಗೆ ಮುಖ್ಯವಾಗಿ ಪ್ರಸ್ತಾಪ ಮಾಡಲಿಕ್ಕೆ ಹೋಗುತ್ತೇನೆ ಏತಕ್ಕೆಂದರೆ ತಮಗೆ ಗೊತ್ತಿದೆ ಕೈಗಾರಿಕಾ ಮಂತ್ರಿಗಳು ಇಲ್ಲಿದ್ದಾರೆ. ಅದರ ವಿವರಣೆಗೆ ಹೋಗುತ್ತೇನೆ. ಕರ್ನಾಟಕ ಎಕನಾಮಿಕ್ ಸರ್ವೆಯಲ್ಲಿ ಕರ್ನಾಟಕ ರಾಜ್ಯ ಕೈಗಾರಿಕೆಯು ಅಭಿವೃದ್ಧಿಯಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದಿದೆ, ಒಳ್ಳೆಯ ಕೈಗಾರಿಕೆಯ ವಾತಾವರಣದಲ್ಲಿ ಇದೆ ಎಂದು ಹೇಳಿದ್ದಾರೆ. ತಮಗೂ ಗೊತ್ತಿದೆ ಅವರು ಹೇಳಿರತಕ್ಕಂಥ ಒಂದು ಕಾಪಿ ಕೂಡ ಇರಬಹುದು. Report of Development of Banking in India 1980-81 published by Industrial Development Bank of India ದ ಒಂದು ಕಾಪಿ ಕೂಡ ಇರಬಹುದು ನಾವು ಒಂದು ದಶಕದಲ್ಲಿ ಅನೇಕ ಉದ್ಯಮ ಕಾರ್ಯಕ್ರಮಗಳಿಂದ ಬೇಕಾದಷ್ಟು ಕೈಗಾರಿಕಾ ಅಭಿವೃದ್ಧಿಯನ್ನು ಜನತೆಗೆ ಕೊಟ್ಟಿದ್ದೇವೆ. ಅದರ ಪ್ರಕಾರ ಕೇಂದ್ರ ಹಣಕಾಸಿನ ಸಂಸ್ಥೆಗಳಿಂದ ಬರತಕ್ಕಂಥ ಸಹಾಯದಲ್ಲಿ ನಾವು ಮೂರನೆಯ ಸ್ಥಾನವನ್ನು ಇಡೀರಾಷ್ಟ್ರದಲ್ಲಿ, ಪಡೆದಿದ್ದೇವೆ. ಅದನ್ನು ಉಳಿಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ತಮ್ಮ ಸರ್ಕಾರದಲ್ಲಿ ಇದೆ. ನಮ್ಮ ಪ್ರಶ್ನೆಯನ್ನು ಮೂಲಭೂತ ಹಕ್ಕಾಗಿ ಇಟ್ಟಿದ್ದೇವೆ. ಆದರೆ ತಾವು ಎರಡು ಮೂರು ತಿಂಗಳು ನಡೆದುಕೊಂಡ ರೀತಿಯನ್ನು ನೋಡಿದರೆ ಕೈಗಾರಿಕೆಯಲ್ಲಿ ಯಾವ ಜನತೆಗೆ ವಿಶ್ವಾಸವಿತ್ತೋ ಅದು ಕದಡಿ ಹೋಗಿದೆ. ಅದನ್ನು ರಕ್ಷಣೆ ಮಾಡಿಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಬೇಕು. ಕೈಗಾರಿಕಾ ವಾತಾವರಣ ಯಾವಾಗ ಕೆಡುತ್ತದೆ, ಕೈಗಾರಿಕಾ ಅಶಾಂತಿ ಯಾವಾಗ ಆಗುತ್ತದೆ ಆಗ ಅದನ್ನು ಸರಿಮಾಡಬೇಕೆಂದರೆ ಇನ್ನು ಒಂದು ದಶಕ ಕಾಲ ಬೇಕಾಗುತ್ತದೆ. ಇದು ಮೂಲಭೂತವಾದ ಪ್ರಶ್ನೆ. ತಾವು ಇದನ್ನು ತಿಳಿದು ಕೊಳ್ಳತಕ್ಕಂಥ ಅವಶ್ಯಕತೆ ಬಹಳ ಇದೆ. ನಾವು ಎಕನಾಮಿಕ್ ಬಗ್ಗೆ, ರಾಜ್ಯದ ಸಂಪನ್ಮೂಲಗಳನ್ನು ರಕ್ಷಣೆ ಮಾಡುವಬಗ್ಗೆ ಸಾಕಷ್ಟು ಕಾಳಜಿಯನ್ನು ಯಾವಾಗಲೂ ವ್ಯಕ್ತಪಡಿಸಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಯವರೂ ಕೂಡ ಈವತ್ತು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರೂ ಕೂಡ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆಂದು ಕಾಣುತ್ತದೆ. ಆದರೆ ಅವುಗಳನ್ನು ತಮ್ಮ ನಡೆತೆಯಲ್ಲಿ ತೋರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆತಾನೆ ಬಿ.ಡಿ.ಎ. ವಿಚಾರದಲ್ಲಿ ಸಾಕಷ್ಟು ಈ ಸದನದಲ್ಲಿ ಚರ್ಚೆಗೆ ಬಂದಿರುತ್ತದೆ. ಬಿ.ಡಿ.ಎ ಬಗ್ಗೆ ಶ್ವೇತ ಪತ್ರವನ್ನು ಹೊರಡಿಸುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಒಂದು ಟೆಂಡರನ್ನು ಕರೆದಿರುತ್ತಾರೆ. ಅದು ಮೂವತ್ತೆರಡು ಕೋಟಿ ರೂಪಾಯಿಗಳ ಟೆಂಡರ್ ಆಗಿರುತ್ತದೆ. ಈ ಟೆಂಡರನ್ನು ಬರೆ ಇಬ್ಬರು ಕಂಟ್ರಾಕ್ಟರುಗಳಿಗೆ ಲೆಟರ್ ಆಫ್ ಇಂಡೆಟ್ ಕೊಡತಕ್ಕಂಥ ಅವಶ್ಯಕತೆಯಾದರೂ ಏನು ಇತ್ತು. ಅದು ಕೂಡ ಎಸ್‌ಆರ್. ೪೦ ಪರ್ಸೆಂಟ್ ಇಲ್ಲದೆ ಎಸ್ ಆರ್ ರೇಟ್ ೭೫ ಪರ್ಸೆಂಟ್‌ಗೂ ಹೆಚ್ಚಾಗದೆ ೩೨ ಕೋಟಿ ರೂಪಾಯಿಗಳ ಒಂದು self-financing ಯೋಜನೆಯನ್ನು ಯಾವ ಆಧಾರದಮೇಲೆ ಅಥಾರಿಟಿಯ ಒಂದು ಒಪ್ಪಿಗೆಯನ್ನೂ ಪಡೆಯದೆ ಬರೀ ಅಧ್ಯಕ್ಷರಾಗಲಿ ಅಥವಾ ಬೇರೆ ಯಾರೇ ಆಗಲಿ ಸೇರಿಕೊಂಡು ಕೊಡುವುವುದಾದರೆ ಯಾವರೀತಿ ಒಂದು ರಾಜ್ಯದ ಹಿತಾಸಕ್ತಿಗಳಿಗೆ ರಕ್ಷಣೆ ಮಾಡುವುದಕ್ಕೆ ಶಕ್ಯರಾಗಿದ್ದೀರಿ ಎನ್ನುವ ವಿಚಾರ ಹೇಳಬೇಕಾಗುತ್ತದೆ. ಇದು ಬಹುಶಃ ಲೆಟರ್ ಆಫ್ ಇಂಡೆಂಟ್ ಆಗದೆ, ಅಗ್ರಿಮೆಂಟ್ ಆಗದೆ ಈ ಇಬ್ಬರು ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೆ ನಿರ್ಧಾರ ಮಾಡಿದ್ದೀರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಬ್ಬರು ಕಂಟ್ರಾಕ್ಟರುಗಳಿಂದ ೩೦ ಕೋಟಿ ರೂಪಾಯಿಗಳ ವ್ಯವ್ಯವಹಾರದ ಬಗ್ಗೆ ಅಗ್ರಿಮೆಂಟ್ ಏನಾದರೂ ಮಾಡಿದ್ದೀರಾ? ಎಸ್.ಆರ್. ಇರಥಕ್ಕಂಥ ವ್ಯವಸ್ಥೆ ಮಾಡಿದ್ದೀರಾ? ಇದರಬಗ್ಗೆ ತಾವು ದಯುವಿಟ್ಟು ಈ ಸದನಕ್ಕೆ ತಿಳಿಸಬೇಕೆಂದು ಕೂಡ ಕೇಳಿಕೊಳ್ಳುತ್ತೇನೆ. ತಾವು ಹೇಳುವಹಾಗೆ ಸುವ್ಯವಸ್ಥಿತವಾದ ರೀತಿಯಲ್ಲಿ ಯಾವ ನಿಯಮಗಳನ್ನು ಉಲ್ಲಂಘನೆ ಮಾಡದೆ ಆಡಳಿತವನ್ನು ನಡೆಸುತ್ತೇವೆಂದು ಹೇಳಿ ಪ್ರತಿಯೊಬ್ಬರಿಗೂ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳತಕ್ಕಂಥ ಜನ ಅದರಬಗ್ಗೆ ಸ್ಪಷ್ಟವಾಗಿ ತಿಳಿಸಬೇಕೆಂದು ಕೂಡ ಹೇಳುತ್ತೇನೆ. ಇನ್ನು ೧೯೮೨-೮೩ನೇ ಸಾಲಿನ ಮುಕ್ತಾಯ ಶಿಲ್ಕು ೪೦.೩೦ ಕೋಟಿ ರೂಪಾಯಿಗಳೆಂದು ಇಲ್ಲಿ ತೋರಿಸಿದ್ದಾರೆ. ಆದರೆ ಕೇಂದ್ರದಿಂದ ೧೫ ಕೋಟಿ ರೂಪಾಯಿಗಳು ಬರುವುದರಿಂದ ಒಟ್ಟು ಕೊರತೆ ೨೯ ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆಯೇ ಹೊರತು ೧೯೮೩-೮೪ನೇ ಸಾಲಿಗೆ ತೋರಿಸಿರುವಂತೆ ೧೭೧ ಕೋಟಿ ಇಲ್ಲವೇ ೧೬೦ ಕೋಟಿ ರೂಪಾಯಿಗಳವರೆಗೆ ಹೋಗುವುದಕ್ಕೆ ಸಾಧ್ಯವಿಲ್ಲ.

ಇನ್ನು ಮಾನ್ಯ ದೇವೇಗೌಡರು ವಿರೋಧ ಪಕ್ಷದಲ್ಲಿದ್ದಾಗ ಕಾವೇರಿ ಜಲಾನಯನದಲ್ಲಿ ಬರುವ ಯೋಜನೆಗಳ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದರು. ನಾನ್-ಪ್ಲಾನ್‌ನಲ್ಲಿ ಕಾವೇರಿ ಬೇಸಿನ್‌ನಲ್ಲಿ ೨೮ ಕೋಟಿ ರೂಪಾಯಿಗಳವರೆಗೆ ಅನೇಕ ವರ್ಷಗಳಿಂದ ಖರ್ಚು ಮಾಡುತ್ತಿದ್ದರೂ ಸಹ ೧೯೮೨-೮೩ನೇ ಸಾಲಿನಲ್ಲಿ ೪೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ನಾವು ಶೇಖರಣೆ ಮಾಡಿ ಇಟ್ಟಿದ್ದ ನೀರನ್ನು ನಮ್ಮ ರಾಜ್ಯದ ರೈತರಿಗೆ ಕೊಡಬೇಕು ಮತ್ತು ನೀರನ್ನು ಈ ತಮಿಳುನಾಡಿಗೆ ಬಿಟ್ಟುಕೊಡುವುದು ಸರಿಯಲ್ಲವೆಂದು ಸಾಕಷ್ಟು ಕಾತುರ ತೋರಿಸಿ ನಾವು ೪೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಆದರೆ ೧೯೮೩-೮೪ನೇ ಸಾಲಿಗೆ ಈಗಿನ ಸರ್ಕಾರ ೪೪.೬೧ ಕೋಟಿ ರೂಪಾಯಿಗಳನ್ನು ಒದಗಿಸಿದೆ. ಇಲ್ಲಿ ೮೭ ಕೋಟಿ ರೂಪಾಯಿಗಳು ಎಂದು ಅಚ್ಚಾಗಿರುವುದು ಸರಿಯಲ್ಲ. ನಾವು ೨೮ ಕೋಟಿ ರೂಪಾಯಿಗಳಿಂದ ೪೦ ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದ್ದರೂ ಸಹ ಇವರು ಕೇವಲ ೪ ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ನಾವು ಈ ವರ್ಷದ ಕೊನೆಯವರೆಗೆ ೫೦ ಕೋಟಿ ರೂಪಾಯಿಗಳವರೆಗಾದರೂ ಖರ್ಚು ಮಾಡಿ, ನಾವು ಹಣ ಒದಗಿಸುತ್ತೇವೆಂದು ಹಿರಿಯ ಅಧಿಕಾರಿಗಳಿಗೆ ಹೇಳಿದ್ದೆವು. ಅದೇರೀತಿಯಲ್ಲಿ ಕಳೆದ ೩ ತಿಂಗಳುಗಳಲ್ಲಿ ಹೆಚ್ಚು ಹಣ ಖರ್ಚು ಮಾಡಬಹುದಿತ್ತು. ಆದರೆ ಆ ರೀತಿ ಮಾಡಲಿಲ್ಲ. ಬರುವ ವರ್ಷದಲ್ಲಿ ಕೂಡ ನಮ್ಮ ಒಂದು ನೀರಿನ ಹಕ್ಕನ್ನು ಸಂರಕ್ಷಣೆ ಮಾಡಿಕೊಳ್ಳಲು ಹೆಚ್ಚು ಹಣವನ್ನು ಒದಗಿಸಿಲ್ಲ ಹೆಚ್ಚುಹೆಚ್ಚು ಹಣವನ್ನು ಖರ್ಚು ಮಾಡಿದ್ದರೆ ನಮ್ಮ ಹಿತರಕ್ಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಕೊನೆಯಪಕ್ಷ ೬೫ ಕೋಟಿ ರೂಪಾಗಳನ್ನಾದರೂ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ಮೀಸಲಿಟ್ಟು ತನ್ಮೂಲಕ ವರುಣಾ ನಾಲೆ ಕೆಲಸ, ಹೇಮಾವತಿ ನಾಲೆ ಕೆಲಸ ಹಾಗೂ ಕೆ. ಆರ್. ಎಸ್ ನ ನವೀಕರಣದ ಕೆಲಸವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಈ ರೀತಿ ತಾವು ಮಾಡದಿದ್ದರೆ ಈಗಿನ ಒಂದು ಸ್ಟೇಟಸ್‌ಕೋವನ್ನೇ ತಾವು ಉಳಿಸಿಕೊಂಡಂತೆ ಆಗುತ್ತದೆ.

ಶ್ರೀ ಎಸ್ ಆರ್. ಬೊಮ್ಮಾಯಿ.--ತಾವು ಅರ್ಧ ಚಿತ್ರ ಕೊಡಬೇಡಿ. ಒಟ್ಟು ಚಿತ್ರ ಏನಿದೆ ಹೇಳಿ ಬರುವ ಸಾಲಿನಲ್ಲಿ ಒಟ್ಟು ೨೦ ಪರ್ಸೆಂಟ್ ಹೆಚ್ಚಾಗಿದೆ. ತಮ್ಮ ಕಾಲದಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ಹತ್ತು ಕೋಟಿ ರೂಪಾಯಿಗಳನ್ನು ಕಡಿಮೆ ಒದಗಿಸಿದ್ದಿರಿ. ಅಂಕಿಅಂಶಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ.

ಶ್ರೀ ಎಂ, ವೀರಪ್ಪ ಮೊಯ್ಲಿ.--ಈ ಹಂತದಲ್ಲಿ ತಾವು ಮಲಪ್ರಭಾ ಮತ್ತು ಘಟಪ್ರಭಾ ವಿಚಾರ ಹೇಳಿ ಹಾಸನ ಮತ್ತು ಮಂಡ್ಯ ಜಿಲ್ಲೆಗಳ ರೈತರನ್ನು ಬಲಿ ಕೊಡುವುದಕ್ಕೆ ಹೋಗಬೇಡಿ.

ಶ್ರೀ ಎಸ್ ಆರ್. ಬೊಮ್ಮಾಯಿ.--ನಿಮ್ಮ ಸರ್ಕಾರ ಇದ್ದಾಗ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ಅನ್ಯಾಯ ಮಾಡಿದ್ದೀರಿ. ೧೨ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ, ಈಗ ೨೦ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಆದ್ದರಿಂದ ತಾವು ಸಮಗ್ರ ಚಿತ್ರವನ್ನು ನೋಡಿ ಹೇಳಬೇಕು.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಚ್. ಡಿ. ಚೌಡಯ್ಯ.--ಹಾಗಿದ್ದರೆ ತಾವುಗಳು ಮುಯ್ಯಿಗೆ ಮುಯ್ಯಿ ತೀರಿಸಿ ಕೊಳ್ಳುತ್ತಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ.--ಮಾನ್ಯ ಮಂತ್ರಿಗಳು ೧೯೮೨-೮೩ನೇ ಸಾಲಿನ ಎಕನಾಮಿಕ್ ಸರ್ವೆ ವರದಿಯನ್ನು ತೆಗೆದು ನೋಡಬೇಕು. ಇದರ ಪುಟ ೯೦ರಲ್ಲಿ ವಿವರಗಳನ್ನು ಕೊಟ್ಟಿದೆ. ಯಾವಯಾವ ಮೇಜರ್ ಇರಿಗೇಷನ್‌ಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಎಂಬುದು ಇದರಲ್ಲಿದೆ. ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ಕೆಲಸಗಳೂ ಸಹ ಸ್ಥಗಿತಗೊಳ್ಳಬಾರದೆಂದು ಅವುಗಳಿಗೂ ಸಹ ಹಣವನ್ನು ನಾವು ಪೂರೈಕೆ ಮಾಡಿದ್ದೆವು. ಇದು ತಮಗೂ ಗೊತ್ತಿದೆ. ನಾವು ಯಾವ ಯೋಜನೆಗಳನ್ನೂ ನಿರ್ಲಕ್ಷ್ಯ ಮಾಡಿರಲಿಲ್ಲ. ಆದರೆ......

ಶ್ರೀ ಎಸ್ ಆರ್. ಬೊಮ್ಮಾಯಿ.--ಪ್ರಧಾನಮಂತ್ರಿಗಳು ವಿಧಾನಸೌಧಕ್ಕೆ ಭೇಟಿ ಕೊಟ್ಟ ಕಾಲಕ್ಕೆ ಈಗಾಗಲೇ ಪ್ರಾರಂಭವಾಗಿರುವ ಯೋಜನೆಗಳ ಕೆಲಸ ೧೯೮೫ರಲ್ಲಿ ಮುಗಿಯಬೇಕೆಂದು ಹೇಳಿದ್ದರು. ಇದು ಮಾನ್ಯ ಚಿಮ್ಮನಕಟ್ಟಿಯವರಿಗೂ ಗೊತ್ತು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಪ್ರಧಾನಮಂತ್ರಿಯವರ ಹೇಳಿಕೆ ಪ್ರಕಾರ ಹೆಚ್ಚು ಹಣ ಒದಗಿಸಲಾಯಿತು.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೌದು, ೮ ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದಿರಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ಹೆಚ್ಚು ಹಣ ಕೊಡುವುದು ಬೇಡ, ಕೊಡಬೇಕಾದ ಸಿಮೆಂಟ್‌ನ್ನು ಕೊಟ್ಟರೆ ಸಾಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಿಮೆಂಟ್ ಕೊಡುವವರು ನಾವಲ್ಲ, ಕೇಂದ್ರ ಸರ್ಕಾರದವರು

ಶ್ರೀ ಎಂ. ವೀರಪ್ಪ ಮೊಯ್ಲಿ.-ಕೈಕೊಂಡಿರುವ ಕೆಲಸಗಳನ್ನು ಬಿಟ್ಟು ಹೊಸ ಕೆಲಸಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದಂಥ ಮಾತು ಸತ್ಯ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದು ಎತಕ್ಕೆಂದರೆ, ಈ ಭಾಗದ ನೀರಿನ ಪ್ರಶ್ನೆ ವಿವಾದದಲ್ಲಿದ್ದು ನಮ್ಮ ಹಕ್ಕಿನ ನೀರನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕಾದಂಥ ಪರಿಸ್ಥಿತಿ ಇತ್ತು. ಇದರ ಜೊತೆಗೆ ಹಾಸನ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿನ ರೈತರು ಪ್ರತಿವರ್ಷವೂ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದ್ದ ಕಾರಣದಿಂದ ಈ ಭಾಗಗಳ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಬೇಕಾಗಿತ್ತು. ಆದರೆ ತಾವು ಈ ಸಲದ ಬಡ್ಜೆಟ್‌ನಲ್ಲಿ ಈ ಒಂದು ಕೆಲಸ ಮಾಡಿ ಮುಗಿಸಲು ಹೆಚ್ಚು ಹಣ ಒದಗಿಸಿಲ್ಲ. ತಾವು ಇದನ್ನು ಇನ್ನೂ ಜಾಸ್ತಿ ಮಾಡಬೇಕು. ಅವಶ್ಯಕವಾದಂಥ ಬಾಬುಗಳಿಗೆ ತಾವು ಹೆಚ್ಚು ಹಣ ಒದಗಿಸದಿದ್ದರೆ ಮುಂದೆ ಅನೇಕ ರೀತಿಯಾದಂಥ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಒಟ್ಟಿನಲ್ಲಿ ತಾವು ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವಂತಹ ರೈತರ ಆಸೆಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಅಸಮರ್ಥರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಈಗಲೂ ಕಾಲ ಮಿಂಚಿಲ್ಲ. ನಾನ್-ಪ್ಲಾನ್‌ನಲ್ಲಿ ೬೫ ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಇದರ ಜೊತೆಗೆ ಒಂದು ಸಮತೋಲನವನ್ನು ತಾವು ಸ್ಥಾಪನೆ ಮಾಡಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಇಡೀ ಕರ್ನಾಟಕ ರಾಜ್ಯದ ವಿರೋಧಪಕ್ಷದ ನಾಯಕರಾಗಿ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಅದೇರೀತಿ ಮಾತನಾಡುತ್ತಿದ್ದೇನೆ. ಇವೊತ್ತು ತಾವು ಮೇಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವಂತಹ ಮಾತು ಇದಲ್ಲ ನಾವು ನಮ್ಮ ಕಾಲದಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ಹೆಚ್ಚು ಹಣ ಒದಗಿಸಲಿಲ್ಲವೆಂದು ಹೇಳುವಂತಹ ತಾವು ತಮ್ಮ ಕಾಲದಲ್ಲಿ ಜಾಸ್ತಿ ಮಾಡಬೇಕು. ೧೫ ಕೋಟಿ ರೂಪಾಯಿಗಳನ್ನಾದರೂ ಒದಗಿಸುವುದರ ಮೂಲಕ ಈ ಯೋಜನೆಗಳ ಕೆಲಸ ಫಲದಾಯಕವಾಗಿ ಮುಗಿಯುವಂತೆ ಮಾಡಬೇಕು. ಈಗಿನ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ತಾವು ಕೇವಲ ೪೪ ಕೋಟಿ ರೂಪಾಯಿಗಳನ್ನು ಇಟ್ಟರೆ ತಾವು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತೆ ಆಗುವುದಿಲ್ಲ. ಇದನ್ನು ದಯಮಾಡಿ ತಿಳಿದುಕೊಳ್ಳಬೇಕು. ಹೆಚ್ಚು ಹೆಚ್ಚು ಸಾಧನೆ ಮಾಡುತ್ತೇವೆಂದು ಹೇಳುವ ನೀವು ಭಾರಿ ಪ್ರಮಾಣದ ಯೋಜನೆಗಳಿಗೆ ಹೆಚ್ಚು ಹಣವನ್ನು ಒದಗಿಸಿಲ್ಲ. ಈಗ ತಾವು ಒದಗಿಸಿರುವ ಹಣ ಸಾಲುವುದಿಲ್ಲವಾದ ಕಾರಣ ಆನ್-ಗೋಯಿಂಗ್ ಪ್ರಾಜೆಕ್ಟ್‌ಗಳ ಕೆಲಸವನ್ನು ಫಲದಾಯಕವಾಗಿ ಮುಗಿಸಲು ಹೆಚ್ಚು ಹಣ ಒದಗಿಸುವುದರ ಮೂಲಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ತಾವು ರೈತರಿಗೆ ಅನೇಕ ರೀತಿಯಿಂದ ಸಹಾಯ ಮಾಡುವುದಾಗಿ ಇಲ್ಲಿ ಕಾಣಿಸಿದ್ದೀರಿ. ಸಹಕಾರಿಸಂಘಗಳ ಸಾಲವನ್ನು ಮರುಪಾವತಿ ಮಾಡುವವರಿಗೆ ರಿಯಾಯಿತಿಗಳನ್ನು ತೋರಿಸಿದ್ದೀರಿ. ನಾವೂ ಕೂಡ ಇದೇರೀತಿಯ ರಿಯಾಯಿತಿಗಳನ್ನು ಕೊಡುತ್ತಾ ಬಂದಿದ್ದೆವು. ಇಲ್ಲಿ ನೀವು ರಿಯಾಯಿತಿಗಳ ಬಗ್ಗೆ ಸ್ಪಷ್ಟವಾದಂಥ ಚಿತ್ರವನ್ನು ಕೊಟ್ಟಿಲ್ಲ. ಒಟ್ಟು ೩೬ ಕೋಟಿ ರೂಪಾಯಿಗಳಷ್ಟು ಕೊಡುವುದಾಗಿ ಇಲ್ಲಿ ಹೇಳಿದ್ದೀರಿ. ನೀವು ಈ ರೀತಿ ಹೇಳಿದ ಕೂಡಲೇ ರೈತರಿಗೆ ರಿಯಾಯಿತಿ ಸಿಕ್ಕಿತು ಎಂದು ಭರವಸೆ ಇಡಲು ಸಾಧ್ಯವಾಗುವುದಿಲ್ಲ.

೪-೦೦ ಪಿ. ಎಂ.

ಇನ್ನು ಸರ್ಕಾರಕ್ಕೆ ಸಂದಾಯವಾಗದೆ ಉಳಿದಿರುವ ಸಾಲಗಳನ್ನು ಮನ್ನಾ ಮಾಡದಿರುವುದು ನಾವೂ ಕೂಡ ತಕಾವಿ ಸಾಲಗಳನ್ನು ಮನ್ನಾ ಮಾಡಿದ್ದೇವೆ. ದೊಡ್ಡ ರೈತರ ಸಾಲಗಳನ್ನು ನಾವು ಮನ್ನಾ ಮಾಡಿಲ್ಲ. ನೀವು ದೊಡ್ಡ ರೈತರ ಸಾಲಗಳನ್ನು ಮನ್ನಾ ಮಾಡಿರಬೇಕೆಂದು ಕಾಣುತ್ತದೆ. ನೀರು ಬಾರದ ಬಾವಿಗಳ ಸಂಬಂಧದಲ್ಲಿ ಅವರ ಸಾಲಗಳನ್ನು ಮನ್ನಾ ಮಾಡಲು ಪ್ರಾವಿಷನ್ ಇತ್ತು. ಆದರೆ ಇದನ್ನು ಅವರು ಸ್ಪಷ್ಟೀಕರಣದಲ್ಲಿ ನೀಡಬೇಕಾಗಿತ್ತು. ರೈತರು ತೆಗೆದುಕೊಂಡ ಯಾವುದೇ ಸಾಲಗಳನ್ನು ೬ ತಿಂಗಳ ಒಳಗಡೆ ಕೊಟ್ಟರೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕು ಎನ್ನುವ ಪ್ರಾವಿಜನ್ ಹಿಂದೆ ಕೂಡ ಇತ್ತು. ಈಗ ಯಾವುದೇ ಕಾಲದಲ್ಲಿ ಸಾಲ ಮನ್ನಾ ಮಾಡ ಬೇಕೆಂದು ಅರ್ಜಿ ಕೊಟ್ಟರೆ ಮನ್ನಾ ಮಾಡುತ್ತೇವೆ. ಎನ್ನುವ ಭಾವನೆ ಇದ್ದರೆ ಅದನ್ನು ದಯಮಾಡಿ ಸ್ಪಷ್ಟೀಕರಿಸಬೇಕು. ಇದು ತಾವು ಹೊಸದಾಗಿ ಕೊಟ್ಟಿರತಕ್ಕ ರಿಯಾಯಿತಿ ಏನಲ್ಲ, ಈ ರಿಯಾಯಿತಿ ಮೊದಲೇ ಇತ್ತು. ಇವತ್ತು ವಿಸ್ತರಣೆ ಮಾಡತಕ್ಕ ಕೆಲಸ ಮಾಡಿದ್ದೀರಿ. ದೊಡ್ಡ ರಿಯಾಯಿತಿ ಕೊಟ್ಟಿದ್ದೇವೆಂದು ಬೆನ್ನು ತಟ್ಟಿಕೊಳ್ಳತಕ್ಕ ಕಾರ್ಯಕ್ರಮವನ್ನು ಏನೂ ಮಾಡಿಲ್ಲವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಧ್ಯೆ ಮಧ್ಯೆ ಎದ್ದು ಮಾತನಾಡುವುದು ಬೇಡ, ನಾನು ಮಾತನಾಡಿದ ಮೇಲೆ ಒಂದೇ ಸಾರಿ ಉತ್ತರ ಕೊಡಲಿ. I can understand if one or two points to be clarified during my speech but there should not be continuous interruptions.

ನಾನು ಮಾತನಾಡಿದ ಕೂಡಲೇ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆ ಮೇಲೆ ವಿವರವಾಗಿ ಉತ್ತರ ಕೊಡಿ. ರೈತರ ಬಗ್ಗೆ ಕಣ್ಣೊರೆಸುವ ಕೆಲಸ ಮಾಡುತ್ತಿದ್ದೀರಿ ಎಂದೂ ಆ ಕೆಲಸ ವನ್ನು ತಾವು ಯಶಸ್ವಿಯಾಗಿ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ. ಸಬ್‌ಸ್ಟ್ಯಾನ್ಷಿಯಲ್ ಬೆನಿಫಿಟ್ ಕೊಟ್ಟಿದ್ದೇವೆಂದು ಹೇಳಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಮಿಷ ಈಲ್ಡ್ ಆಗುವುದಾದರೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಈಲ್ಡ್ ಆಗುವುದಿಲ್ಲ, ನನಗೆ ಸಮಯ ಕಡಿಮೆ ಇದೆ. ೧ ಗಂಟೆ ಸಮಯದೊಳಗೆ ಎಲ್ಲವನ್ನು ಹೇಳಿ ಮುಗಿಸಬೇಕು. ನನಗೆ ಸಮಯ ಕಡಿಮೆ ಇದೆ. ಮಾನ್ಯ ಜಾಲಪ್ಪನವರು ಮಂತ್ರಿಗಳಾದ ಮೇಲೆ ತುಂಬಾ ಚುರುಕಾಗಿದ್ದಾರೆ. ತಮ್ಮ ಚುರುಕುತನವನ್ನು ತಾವು ಸರಿಯಾಗಿ ಉಪಯೋಗ ಮಾಡಿಕೊಳ್ಳಿ. ಚುರುಕುತನದ ಮಾತುಗಳಿಂದ ಏನೂ ಆಗುವುದಿಲ್ಲ.

ಇನ್ನು ಭೂಸಾರ ಮತ್ತು ಒಡ್ಡು ಹಾಕಿದ ಭಾಗದಲ್ಲಿ ಶೇಕಡ ೫೦ ಭಾಗ ಹಣವನ್ನು ಪಾವತಿ ಮಾಡಿದ್ದರೆ ಉಳಿದರ್ಧವನ್ನು ಮನ್ನಾ ಮಾಡುವುದು ಎಂದು ಈ ತರಹ ಶರತ್ತು ಹಾಕಿ ಕೊಂಡಿದ್ದಾರೆ. ಅದರ ಬಗ್ಗೆ ನಾವೂ ಕೂಡ ಸಾಲವನ್ನು ಮನ್ನಾಮಾಡಬೇಕೆಂದು ಸಾಕಷ್ಟು ನಿರ್ಣಯವನ್ನು ತೆಗೆದು ಕೊಂಡಿದ್ದೇವೆ. ಶೇಕಡ ೫೦ ರಷ್ಟು ಹಣವನ್ನು ಕಟ್ಟಿದರೆ ಮನ್ನಾ ಮಾಡುತ್ತೇವೆಂದು ಹೇಳುತ್ತೀರಿ. ಇಷ್ಟಾದರೂ ಮಾಡಿ ಸಣ್ಣ ಮತ್ತು ಮಧ್ಯಮ ತರಗತಿಯ ರೈತರ ಸಾಲವನ್ನು ಮನ್ನಾ ಮಾಡತಕ್ಕಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಏನೋ ಮಾಡುತ್ತೇವೆಂದು ಆಸೆಯನ್ನು ಹುಟ್ಟಿಸಿ ಒಂದು ನಿರಾಶೆಯನ್ನು ಹುಟ್ಟಿಸುವಂತಹ ಕೆಲಸವನ್ನು ತಾವು ದಯಮಾಡಿ ಮಾಡಬಾರದೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹೊಸದಾಗಿ ನೀರಾವರಿಗೆ ಒಳಗಾಗಿರುವ ಜಮೀನಿಗೆ ೫ ವರ್ಷ ನೀರಿನ ದರವನ್ನು ತೆರಬೇಕಾಗಿಲ್ಲ ಎನ್ನುವ ವಿಚಾರವನ್ನು ವ್ಯಕ್ತಪಡಿಸಿದ್ದೀರಿ. ದಯಮಾಡಿ ಅದನ್ನು ಪರಿಣಾಮ ಕಾರಿಯಾಗಿ ಜಾರಿ ಮಾಡಿ. ನಾವೂ ಕೂಡ ಅದನ್ನು ವಸೂಲಿ ಮಾಡುತ್ತಿರಲಿಲ್ಲ. ತಾವೀಗ ಹೊಸದಾಗಿ ಏನೂ ನಿರ್ಣಯವನ್ನು ಕೈಗೊಂಡಿಲ್ಲ. ನಿರ್ಣಯ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ನಾವೂ ಕೂಡ ಅದರ ಬಗ್ಗೆ ಸಾಕಷ್ಟು ವಿಚಾರ ವಿಮರ್ಶೆ ಮಾಡಿದ್ದೇವೆ. ಇದನ್ನು ತಾವು ಜಾರಿ ಮಾಡಿದ್ದೀರಿ. ನೀರನ್ನು ಒದಗಿಸದೇ ಇರತಕ್ಕ ರೈತರಿಂದ ನೀರಿನ ದರವನ್ನು ವಸೂಲಿ ಮಾಡತಕ್ಕ ಕ್ರಮ ಈಗಲೂ ಕೂಡ ಅನೇಕ ಕಡೆ ನಡೆಯುತ್ತಿದೆ. ಅದನ್ನು ಸಂಪೂರ್ಣವಾಗಿ ತಡೆ ಹಿಡಿದು ನೀರು ಬಾರದೆ ಇದ್ದ ಸಂದರ್ಭದಲ್ಲಿ ಅಂತಹವರಿಗೆ ೫ ವರ್ಷ ಅಥವಾ ಹೆಚ್ಚು ನೀರಿನ ದರವನ್ನು ವಸೂಲಿ ಮಾಡಕೂಡ

ದೆಂದು ಕೇಳಿಕೊಳ್ಳುತ್ತೇನೆ. ಚುನಾವಣಾ ಸಂದರ್ಭದಲ್ಲಿ ರೈತರ ಮಧ್ಯದಲ್ಲಿ ಸನ್ಮಾನ್ಯ ಸದಸ್ಯರಾದ ಬಂಗಾರಪ್ಪನವರ ಮತ್ತು ಮಾನ್ಯ ಮಂತ್ರಿಗಳಾದ ಬೊಮ್ಮಾಯಿಯವರ ಸಮಿತಿಗಳ ವರದಿಯನ್ನು ಜಾರಿ ಮಾಡುತ್ತೇವೆಂದು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಇದೇ ಮಾತನ್ನು ನಮ್ಮನ್ನು ಅಟ್ಯಾಕ್ ಮಾಡಲಿಕ್ಕೂ ಸಾಕಷ್ಟು ಉಪಯೋಗ ಮಾಡಿದ್ದೀರಿ. ಆದರೆ ಇವತ್ತು ಬೊಮ್ಮಾಯಿಯವರ ಮತ್ತು ಬಂಗಾರಪ್ಪನವರ ವರದಿಯ ಬಗ್ಗೆ ಪ್ರಸ್ತಾಪ ಮಾಡೇ ಇಲ್ಲ. ಮಾನ್ಯ ಬಂಗಾರಪ್ಪನವರು ದೂರ ಹೋಗಿದ್ದಾರೆ. ದೂರ ಹೋಗಲಿ. ಬಂಗಾರಪ್ಪನವರು ಮತ್ತು ಬೊಮ್ಮಾಯಿಯವರ ಸಮಿತಿಯ ವರದಿಯ ಬಗ್ಗೆ ವಿಚಾರ ಮಾಡಿದ್ದೀರಿ. ಅದನ್ನು ವಿಶ್ಲೇಷಣೆ ಮಾಡಿಕೊಂಡು ರೈತರಿಗೆ ಉಪಯುಕ್ತವಾದಂತಹ ಅಂಶಗಳು ಆ ವರದಿಯಲ್ಲಿ ಇದ್ದರೆ ಅದನ್ನು ಜಾರಿ ಮಾಡುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ನಿಮ್ಮ ಸರ್ಕಾರ ಮಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳಲಿಕ್ಕ ಇಚ್ಛೆಪಡುತ್ತೇನೆ.

ಇನ್ನು ೩೨ ಕೋಟಿ ರೂಪಾಯಿಗಳ ಟ್ಯಾಕ್ಸನ್ನು ಹಾಕಿ, ೩೬ ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ೩೬ ಕೋಟಿ ರೂಪಾಯಿಗಳ ಪರಿಹಾರವನ್ನು ಯಾವರೀತಿ ಕೊಡುತ್ತೀರಿ ? ಅದರ ಒಂದು ಪಟ್ಟಿಯನ್ನು ಮಾಡಿ ಅದರ ಒಂದು ವಿಶ್ಲೇಷಣೆಯನ್ನು ಸದನದ ಮುಂದೆ ತರಬೇಕು. ಈಗ ರೈತರಿಗೆ ಯಾವುದೇ ರೀತಿಯಾದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ತಾವು ಹಣವನ್ನು ಒದಗಿಸಿಲ್ಲವೆಂದು ಹೇಳುತ್ತೇನೆ.

ಇನ್ನು ಕೃಷಿ ಕಾರ್ಮಿಕರ ಬಗ್ಗೆ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಮಿನಿಮಮ್ ವೇಜಸ್‌ನ ಬಗ್ಗೆ ಪ್ರಸ್ತಾಪ ಮಾಡಿದ್ದೀರೇ ಹೊರತು ಕೃಷಿ ಕಾರ್ಮಿಕರು ಬದುಕತಕ್ಕ ರೀತಿಯಲ್ಲಿ ಅವರು ಸಾಮಾಜಿಕ ಕ್ಷೇತ್ರದಲ್ಲಿ ಎಲ್ಲರಂತೆ ಜೀವನ ನಡೆಸಲು ಯಾವುದೇ ರೀತಿಯಾದಂತಹ ಪರಿಹಾರವನ್ನು ಕೊಟ್ಟಿಲ್ಲ.

ಇನ್ನು ಸೇಲ್ಸ್ ಟ್ಯಾಕ್ಸ್ ಏನು ಹಾಕಿದ್ದೀರಿ ಅದು ಯಾವುದೂ ಸರಿಯಾಗಿಲ್ಲ. ಅವು ಕೂಡ ಫಿಕ್ಟೀಶಿಯಸ್ ಫಿಗರ್ಸ್. ಯಾವುದೇ ಪರಿಹಾರವನ್ನು ವ್ಯವಹಾರಿಕವಾಗಿ ಕೊಟ್ಟಿಲ್ಲ. ಹತ್ತಿ ನೂಲಿನ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಇದರಿಂದ ಕೈಮಗ್ಗದ ನೇಕಾರರಿಗೆ ಹೆಚ್ಚಿನ ತೊಂದರೆ ಯಾಗುತ್ತದೆ. ಕೈಮಗ್ಗದವರು ಮತ್ತು ಪವರ್ ಲ್ಯೂಮ್ಸ್‌ನವರು ಇಬ್ಬರನ್ನು ಒಂದೇ ರೀತಿ ಟ್ರೀಟ್ ಮಾಡಿದ್ದೀರಿ. ಸನ್ಮಾನ್ಯ ಜಾಲಪ್ಪನವರು ಸಚಿವರಾದ ಮೇಲೆ ಕೈಮಗ್ಗದವರ ಮತ್ತು ಪವರ್‌ಲೂಮ್ಸ್‌ನವರ ಪರಿಸ್ಥಿತಿ ಸುಧಾರಿಸಿ ನೇಕಾರರ ಹಿತರಕ್ಷಣೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಇವತ್ತು ಕೈಮಗ್ಗದಿಂದ ತಯಾರಾಗತಕ್ಕ ಬಟ್ಟೆಗಳ ಮೇಲೆ ಟ್ಯಾಕ್ಸನ್ನು ೧½ ಪರ್ಸೆಂಟ್‌ನಿಂದ ೨ ಪರ್ಸೆಂಟ್‌ಗೆ ಏರಿಸಿದ್ದೀರಿ. ಪವರ್‌ಲೂಮ್ ಮತ್ತು ಹ್ಯಾಂಡ್ ಲೂಮ್ ಎರಡನ್ನು ಒಂದೇ ರೀತಿಯಲ್ಲಿ ಟ್ರೀಟ್ ಮಾಡಿದ್ದೀರಿ. ಆದ್ದರಿಂದ ಈ ವಿಚಾರದ ಬಗ್ಗೆ ಕ್ಯಾಬಿನೇಟ್‌ನಲ್ಲಿ ಪುನಃ ಚರ್ಚೆ ಮಾಡಿ ಕೈಮಗ್ಗದವರಿಗೆ ರಿಯಾಯಿತಿ ಕೊಡತಕ್ಕ ಕೆಲಸವನ್ನು ಮಾಡಬೇಕು. ಒಂದೂವರೆ ಪರ್ಸೆಂಟ್ ಇದ್ದ ಟ್ಯಾಕ್ಸನ್ನು ೨ ಪರ್ಸೆಂಟ್‌ಗೆ ಏರಿಸುವುದರ ಬದಲು ಒಂದೂವರೆ ಪರ್ಸೆಂಟ್‌ಗಿಂತ ಕಡಿಮೆ ಮಾಡಬೇಕೇ ಹೊರತು ಹೆಚ್ಚು ಮಾಡತಕ್ಕ ಪ್ರಯತ್ನ ಖಂಡಿತವಾಗಿಯೂ ಸರಿಯಾದುದಲ್ಲ. ಯಾವುದೇ ರಿಯಾಯಿತಿಯನ್ನು ಕೊಡುವಾಗ ದುರ್ಬಲವರ್ಗದವರಿಗೆ ಪ್ರಯೋಜನವಾಗುವಂತೆ ರಿಯಾಯಿತಿಯನ್ನು ಕೊಡಬೇಕು. ಬಡವರ ಮೇಲೆ ಪರಿಣಾಮ ಬೀರುವಂತಹ ಕರ ಭಾರವನ್ನು ಹಾಕಲೇಬಾರದು. ತಮ್ಮ ತೆರಿಗೆ ನೀತಿಯಲ್ಲಿ ಪ್ರಾಸ್ತಾಪಿಕವಾಗಿ ಆದಾಯ ಕೊರತೆಯಾದಾಗ ಶ್ರೀಮಂತರಿಗೆ ತೆರಿಗೆಯನ್ನು ಹಾಕಬೇಕೇ ಹೊರತು, ಎಲ್ಲರಿಗೂ ಒಂದೇ ಸಮನಾದ ಕರಭಾರ ಹೊರಿಸುವುದು ಸರಿಯಲ್ಲ. ಬಡವರ ಮತ್ತು ದುರ್ಬಲವರ್ಗದವರ ಬಗ್ಗೆ ಈ ಸರ್ಕಾರಕ್ಕೆ ಕಾಳಜಿ ಇಲ್ಲ. ತೆರಿಗೆ ಹೊರಿಸಿರುವ ನೀತಿಯನ್ನು ನೋಡಿದರೆ ಬಡವರ ಬಗ್ಗೆ ನಿಮಗೆ ಆಸಕ್ತಿ ಇಲ್ಲ ಎನ್ನುವ ಒಂದು ಆರೋಪವನ್ನು ತಮ್ಮ ಮೇಲೆ ಹಾಕತಕ್ಕ ಒಂದು ಅವಶ್ಯಕತೆ ಇದೆ.

ಇನ್ನು ಗೋಡೆ ಗಡಿಯಾರ, ಟೈಮ್ ಪೀಸಸ್ ಬಿಡಿಭಾಗಗಳಿಗೆ ಹಾಕುವ ತೆರಿಗೆಯನ್ನು ಶೇಕಡ ೧೫ ರಿಂದ ೧೨ ಕ್ಕೆ ಇಳಿಸಿದ್ದೀರಿ. ಇದು ನಿಜವಾಗಿಯೂ ಸ್ವಾಗತಿಸುವುದಾದರೂ ಕೂಡ it is a very trivial concession. ಆದರಿಂದ ಹೆಚ್ಚು ಪರಿಣಾಮ ಬೀಳಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಅದೇ ರೀತಿ ಸ್ಪೋರ್ಟ್ಸ್ ಲವರ್ಸ್‌ಗಳ ಮೇಲೆ ದೊಡ್ಡ ಪೆಟ್ಟು ಕೊಟ್ಟಿದ್ದೀರಿ. ಫುಟ್‌ಬಾಲ್ ಮತ್ತು ಕಬಡಿ ಮ್ಯಾಚ್‌ಗಳಾದರೆ ನೋಡುವುದಕ್ಕೆ ಯಾರು ಹೋಗುತ್ತಾರೆ? ಅವರ ಆದಾಯ ಹೊಂದಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಈ ರೀತಿ ಏತಕ್ಕೆ ಮಾಡಿದ್ದೀರಿ ಎನ್ನುವುದು ಗೊತ್ತಾಗಲಿಲ್ಲ. ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಯಾವ ರೀತಿಯಲ್ಲಿ ಮನೋರಂಜನೆಗೆ ಮತ್ತು ಕ್ರೀಡೆಗಳಿಗೆ ಪ್ರೋತ್ಸಾಹ ಕೊಡಬಾರದು ಎನ್ನುವ ನೀತಿ ಇತ್ತು? ಮಾನ್ಯ ರಾಮಕೃಷ್ಣ ಹೆಗಡೆಯವರು ಅದೇ ನೀತಿಯನ್ನು ಕ್ರೀಡೆಗಳ ಬಗ್ಗೆ ಅನುಸರಿಸುವುದು ಬೇಡ. ಈಗ ಏನು ತೆರಿಗೆಯನ್ನು ಹಾಕಿದ್ದಾರೆ ಅದನ್ನು ತೆಗೆದು ಹಾಕಬೇಕು. ಕ್ರೀಡಾಭಿಮಾನಿಗಳಾದ ಮಾನ್ಯ ರಾಮದೇವ್‌ರವರು ಇದ್ದು that too he is a great Champion of sports, ಇಂತಹವರು ಇರುವಾಗಲೇ ಇಂತಹ ಟ್ಯಾಕ್ಸನ್ನು ಹಾಕಿ ಒಂದು ದೊಡ್ಡ ನಿರಾಶೆಯನ್ನುಂಟು ಮಾಡಿದ್ದಾರೆ, ಮಾನ್ಯ ಮೊರಾರ್ಜಿ ದೇಸಾಯಿಯವರ ಪಾಲಿಸಿಯನ್ನು ಇಲ್ಲಿ ದಯಮಾಡಿ ಅಡಾಪ್ಟ್ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್, ಆರ್. ಬೊಮ್ಮಾಯಿ.—ಮೊರಾರ್ಜಿ ದೇಸಾಯಿಯವರ ಪಾಲಿಸಿಯನ್ನು ಅನೇಕ ವಿಚಾರಗಳಲ್ಲಿ ಬಿಟ್ಟು ಕೊಡಲಿಕ್ಕೆ ಸಾಧ್ಯವಿಲ್ಲ. ಟ್ಯಾಕ್ಸ್ ಬಗ್ಗೆ ಹೇಳಿದ್ದೀರಿ, ಮಾನ್ಯ ರಾಮಕೃಷ್ಣ ಹೆಗಡೆಯವರು ಹಿಂದೆ ಯೋಜನಾ ಮಂತ್ರಿಗಳಾಗಿದ್ದಾಗ ಪ್ರಾರಂಭ ಮಾಡಿದಂತಹ 'ಯೂತ್' ಸೆಂಟರ್ಸ್‌ಗಳು ಅಲ್ಲಿಗೆ ನಿಂತಿವೆ. ಅವುಗಳಿಗೆ ಹಣ ಒದಗಿಸುವುದಕ್ಕೆ, ಇವೆಲ್ಲಾ ವಿಚಾರ ಮಾಡಿದ್ದೇವೆ.

ಶ್ರೀ ಪಿ. ರಾಮದೇವ್.—ಕ್ರಿಕೆಟ್ ಮ್ಯಾಚ್ ಒಂದರಿಂದ ಮಾತ್ರ ೪೦ ರಿಂದ ೫೦ ಲಕ್ಷ ಪ್ರಾಫಿಟ್ ಬರುತ್ತದೆ. ಬೇರೆ ಆಟಗಳಿಗೆ ಯಾವುದೇ ರೀತಿಯ ಆದಾಯವಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ತೆರಿಗೆ ನೀತಿ ಏನಾಗಿದೆ ಅಂದರೆ, ಎಲ್ಲರಿಗೂ ಒಂದೇ ಸಮನೆ ಬಡವರಿಗೂ ಒಂದೇ ಶ್ರೀಮಂತರಿಗೂ ಒಂದೆ. ಆದಾಯ ಬರತಕ್ಕ ಆಟಗಳೂ ಒಂದೇ ಆದಾಯ ಬಾರದೇ ಇರತಕ್ಕ ಆಟಗಳೂ ಒಂದೆ. ಈ ರೀತಿ ಆರ್ಥಿಕ ಮತ್ತು ಸಾಮಾಜಿಕ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ.

ನಮ್ಮ ಭಾರತದೇಶದಲ್ಲಿ ಏಷಿಯನ್ ಗೇಮ್ಸ್ ನಡೆಸಿದ್ದರಿಂದ ಆ ಒಂದು ಕೀರ್ತಿ ಬಾನೆತ್ತರಕ್ಕೆ ಹೋಗಿದೆ.

ಇನ್ನು ಮೋಟಾರ್ ವಾಹನಗಳ ತೆರಿಗೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ೧೦ ವರ್ಷಗಳಿಗಾಗಿ ಶೇಕಡಾ ೧೦ ರಂತೆ ರಿಬೇಟ್ ಮತ್ತು ಐದು ವರ್ಷಗಳಿಗೆ ಶೇಕಡಾ ೫ ರಂತೆ ರಿಬೇಟ್ ಏನು ಕೊಟ್ಟಿದ್ದೀರಿ ಇದು ವ್ಯವಹಾರಿಕವಾದಂಥ ರಿಬೇಟ್ ಅಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವುದೇ ರೀತಿಯಲ್ಲಿ ಜನರಿಗೆ ಅನುಕೂಲವಾಗುವಂಥ ರಿಯಾಯ್ತಿಯನ್ನು ಸರ್ಕಾರ ಕೊಟ್ಟಿಲ್ಲವೆಂದು ತಮ್ಮ ಆಯವ್ಯಯ ಪಟ್ಟಿಯಿಂದ ನಮಗೆ ಗೊತ್ತಾಗುತ್ತಿದೆ. ತಾವು ಮಂಡಿಸಿರುವಂಥ ಆಯವ್ಯಯ ಪಟ್ಟಿ ಬರೀ ಟೊಳ್ಳು ಆಯವ್ಯಯಪಟ್ಟಿಯಾಗಿದೆ. ಜನತೆಯ ಸಾಮಾಜಿಕ ಪರಿಸ್ಥಿತಿಯು ಸುಧಾರಣೆಯಾಗುವಂಥ ಬಜೆಟ್‌ನ್ನು ತಾವು ಮಂಡಿಸಿಲ್ಲವೆಂದು ನಾನು ಹೇಳಬಯಸುತ್ತೇನೆ. ಜನಸಾಮಾನ್ಯರ ರಕ್ಷಣೆ ಮಾಡುವಂಥ ಯಾವ ಕೆಲಸವನ್ನು ತಾವು ಮಾಡಿಲ್ಲವೆಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ಅನೇಕ ವಿಚಾರಗಳನ್ನು ತೆಗೆದುಕೊಂಡರೂ ಕೂಡ ಇದು ಒಂದು ಪ್ರಗತಿದಾಯಕವಾದಂಥ ಬಜೆಟ್ ಆಗಿಲ್ಲವೆಂದು ನಾನು ಹೇಳುತ್ತೇನೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವಂಥ ಬಡಜನತೆಯ ನಿರೀಕ್ಷೆಯ ಪ್ರಕಾರ ತಾವು ಬಜೆಟ್ ತಯಾರು ಮಾಡಿಲ್ಲ. ಭೂ ಸುಧಾರಣೆಯ ಬಗ್ಗೆ ತಮ್ಮ ಆಯವ್ಯಯಪಟ್ಟಿಯಲ್ಲಿ ಪ್ರಸ್ತಾಪ ಮಾಡಿಲ್ಲ. ಕುಡಿಯುವ ನೀರಿನ ಬಗ್ಗೆ, ವಸತಿ ಗೃಹಗಳ ಬಗ್ಗೆ ಯಾವುದೇ ವಿಷಯದ ಬಗ್ಗೆ ಈ ಆಯವ್ಯಯಪಟ್ಟಿಯಲ್ಲಿ ಪ್ರಗತಿದಾಯಕವಾದಂಥ ರೀತಿಯಲ್ಲಿ ಅವಕಾಶ ಮಾಡಿಕೊಟ್ಟಿಲ್ಲ. ಇದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೇ ರೀತಿಯ ಪ್ರಗತಿ ಸುಧಾರಣೆಯಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಒಂದು ಅಬದ್ಧವಾದ ಆಯವ್ಯಯನ್ನು ಸರ್ಕಾರ ಮಂಡಿಸಿರುವುದರಿಂದ ನೀವು ಹಾಕಿಕೊಂಡಿರುವಂಥ ಗುರಿಯನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ತಮ್ಮ ಆಯುವ್ಯಯಪಟ್ಟಿಯನ್ನು ಮಂಡಿಸಿದ್ದಾರೆ. ಅದಕ್ಕೆ ಮೊಟ್ಟಮೊದಲನೆಯದಾಗಿ ಸ್ವಾಗತ ಕೋರಿ, ಅವರ ಆಯುವ್ಯಯಪಟ್ಟಿಯ ಬಗ್ಗೆ ಕೆಲವಾರು ಸಲಹೆ ಮತ್ತು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯ ಸುಮಾರು ಮೂರು ಕೋಟಿ ೭೦ ಲಕ್ಷ ಜನಸಂಖ್ಯೆಯನ್ನು ಹೊಂದಿರುವಂಥ ಒಂದು ದೊಡ್ಡ ರಾಜ್ಯವಾಗಿದೆ. ಈ ರಾಜ್ಯದಲ್ಲಿ ಶೇಕಡ ೮೦ ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಆಯುವ್ಯಯ ಪಟ್ಟಿಯನ್ನು ನೋಡಿದರೆ ಬಹಳ ಆಶಾದಾಯಕವಾಗಿ ಕಾಣುತ್ತದೆ. ನಮ್ಮ ರಾಜ್ಯದ ೩ ಕೋಟಿ ೭೦ ಲಕ್ಷ ಜನರ ಹಿತದೃಷ್ಟಿಯಿಂದ ಈ ಆಯುವ್ಯಯ ಪಟ್ಟಿಯಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಎಲ್ಲಾ ವರ್ಗದ ಜನರ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುತ್ತದೆ ಎನ್ನುವ ಅರಿವು ನಮಗೆ ಕಾಣುತ್ತಿದೆ. ಪ್ರತಿ ವರ್ಷ ಎಲ್ಲಾ ಸರ್ಕಾರಗಳು ಈ ಆಯುವ್ಯಯಪಟ್ಟಿಯನ್ನು ಈ ಸದನದಲ್ಲಿ ಮಂಡಿಸುತ್ತಲೇ ಬಂದಿವೆ. ಆದರೆ ಈ ಬಾರಿಯ ಆಯುವ್ಯಯಪಟ್ಟಿಯಲ್ಲಿ ಒಂದು ರೀತಿಯ ಪ್ರಗತಿಪರವಾದಂಥ ಕಾರ್ಯಕ್ರಮಗಳ ಪಕ್ಷಿನೋಟವನ್ನು ನಾವು ಕಾಣುತ್ತಿದ್ದೇವೆ. ಹಿಂದುಳಿದ ವರ್ಗಗಳ, ದುರ್ಬಲವರ್ಗಗಳ ಎಲ್ಲಾ ವರ್ಗದ ಜನರ ಅಭಿವೃದ್ಧಿ ಕೆಲಸಕಾರ್ಯಗಳು ಮಾಡಬೇಕೆನ್ನುವುದೇ ನಮ್ಮ ಮೂಲಭೂತವಾದ ಉದ್ದೇಶವಾಗಿದೆ. ಯಾವುದೇ ಸರ್ಕಾರ ಯಾವುದೇ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಅಂಥ ಒಂದು ಒಳ್ಳೆಯ ಕಾರ್ಯಕ್ರಮಗಳನ್ನು ನಮ್ಮ ಜನತಾ ಸರ್ಕಾರ ಈ ವರ್ಷ ಹಾಕಿಕೊಂಡಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಸರ್ಕಾರದವರು ಯಾವುದಾದರೊಂದು ಬಾಬಿಗೆ ಹಣವನ್ನು ಖರ್ಚು ಮಾಡಿದರೆ ಆ ಹಣ ಸಾರ್ವಜನಿಕರ ಕಲ್ಯಾಣ ಮಾಡುವಂಥ ಯೋಜನೆಯಾಗಿರಬೇಕು. ಆಗ ನಾವು ಖರ್ಚು ಮಾಡಿದ ಹಣ ಸಾರ್ಥಕವಾಗುತ್ತದೆ. ನಮ್ಮ ರಾಜ್ಯದ ಬಡ್ಜೆಟ್ ಯಾವಾಗಲೂ ಬರೀ ಆಶಾದಾಯಕವಾದ ಬಡ್ಜೆಟ್ ಆಗಿತ್ತೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೇ ಈ ವರ್ಷ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯ ಆಯುವ್ಯಯಪಟ್ಟಿಯನ್ನು ತಯಾರು ಮಾಡಿಲ್ಲ. ಸಾರ್ವಭೌಮತ್ವವನ್ನು ಪಡೆದಿರುವಂಥ ಒಂದು ಆಯುವ್ಯಯಪಟ್ಟಿಯನ್ನು ತಯಾರು ಮಾಡಿದ್ದಾರೆ. ಇದು ನಮ್ಮ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಒಳ್ಳೆಯ ಅನುಕೂಲಕರವಾದಂಥ ಬಡ್ಜೆಟ್ ಆಗಿದೆ. ಅದೇ ರೀತಿಯಲ್ಲಿ ರೈತರಿಗೂ ಕೂಡ ಒಳ್ಳೆಯ ರಿಯಾಯಿತಿಗಳನ್ನು ಕೊಟ್ಟಿದೆ. ಆದರೆ ಹಿಂದಿನ ಸರ್ಕಾರದಲ್ಲಿ ಒಬ್ಬ ರೈತ ಒಂದು ಬ್ಯಾಂಕಿನಲ್ಲಿ ಯಾವುದಾದರೊಂದು ರೀತಿಯಲ್ಲಿ ಸಾಲವನ್ನು ಪಡೆಯಬೇಕಾಗಿದ್ದರೆ ಆತ ತನ್ನ ಮನೆ ಮಠ ಎಲ್ಲವನ್ನು ಮಾರಿದ್ದರೂ ಕೂಡ ಬಡ್ಡಿಯನ್ನು ಪಾವತಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆತ ಸಾಲವನ್ನು ತೀರಿಸಬೇಕಾದರೆ ಮತ್ತೆ ಸಾಲ ಮಾಡಿಯೇ ತೀರಿಸುವಂಥ ಪರಿಸ್ಥಿತಿ ಇತ್ತು. ಆದರೆ ಈ ಆಯುವ್ಯಯಪಟ್ಟಿಯಿಂದ ರೈತರು ಸಾಲದ ಬಡ್ಡಿಯಿಂದ ವಿಮುಕ್ತಿಯನ್ನು ಪಡೆದಿದ್ದಾರೆ, ನಮ್ಮ ರಾಜ್ಯದ ಸುಮಾರು ೩ ಕೋಟಿ ೭೦ ಲಕ್ಷ ಜನರ ಪ್ರತಿನಿಧಿಗಳು ನಾವು ಇಲ್ಲಿ ಇದ್ದೇವೆ. ನಾವು ಅನುಮೋದನೆ ಮಾಡಿ ಕೊಟ್ಟಂಥ ಕೋಟ್ಯಾಂತರ ರೂಪಾಯಿಗಳು ಸಾರ್ವಜನಿಕರಿಗೆ ಸದ್ವಿನಿಯೋಗವಾಗಬೇಕು. ನಾವು ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಅಷ್ಟು ಮಟ್ಟದ ಅಭಿವೃದ್ಧಿ ಕೆಲಸ ವಾಗಿಲ್ಲವೆಂದು ನಾನು ಈ ಸಂದರ್ಭದಲ್ಲಿ ಬಹಳ ದುಃಖದಿಂದ ಹೇಳಬೇಕಾಗುತ್ತದೆ. ನಾವು ಇಲ್ಲಿ ಅನುಮೋದನೆ ಮಾಡಿಕೊಟ್ಟಂಥ ಹಣಕಾಸು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳಿಗೆ ವಿನಿಯೋಗವಾಗದೇ ಹೋದರೆ ಎರಡೂ ಪಕ್ಷದ ಸದಸ್ಯರು ಶ್ರಮಪಟ್ಟು ಸಮರ್ಥ ರೀತಿಯಲ್ಲಿ ಕೆಲಸಕಾರ್ಯಗಳು ಆಗುವುದಕ್ಕೆ ಪ್ರಯತ್ನ ಪಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಡವರ ಉದ್ಧಾರಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದಾರೆ. ರೈತರಿಗೆ ಅನೇಕ ರೀತಿಯಲ್ಲಿ ರಿಯಾಯಿತಿಯನ್ನು ತೋರಿಸಿದ್ದಾರೆ. ಅಂಗವಿಕಲರಿಗೆ ರಿಯಾಯಿತಿಯನ್ನು ತೋರಿಸಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದಾರೆ ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುವುದಕ್ಕಾಗಿ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಈ ಆಯುವ್ಯಯಪಟ್ಟಿಯಲ್ಲಿ ಒದಗಿಸಿಕೊಟ್ಟಿದ್ದಾರೆ. ಅನೇಕ ರೀತಿಯ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ಜನತಾ ಸರ್ಕಾರ ಕೇವಲ ೨ ತಿಂಗಳುಗಳಲ್ಲಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು

ಕೆಲಸ ಮಾಡುತ್ತಿದೆ. ಹಿಂದಿನ ಸರ್ಕಾರದವರು ಒಂದು ತಾಲ್ಲೂಕಿಗೆ ೯–೧೦ ಕೊಳವೆ ಬಾವಿಗಳನ್ನು ತೋಡಿಸಿದ್ದರೂ ಅದರಲ್ಲಿ ೯ ಕೊಳವೇ ಬಾವಿಗಳು ಕೆಟ್ಟುಹೋಗಿವೆ. ಆದ್ದರಿಂದ ನಾನು ಹೇಳುವುದೇನೆಂದರೆ ಎಲ್ಲೆಲ್ಲಿ ಈ ಕೊಳವೆ ಬಾವಿಗಳು ಕೆಟ್ಟುಹೋಗಿವೆ ಆ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸಿದರೆ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಬಹುದು. ಇನ್ನು ಎರಡನೆಯದಾಗಿ ಕೆರೆ ನೀರಾವರಿ ಕಾಮಗಾರಿಗಳು ಮತ್ತು ಹೊಸ ಕೆರೆಗಳನ್ನು ಕೈಗೊಳ್ಳುವ ವಿಷಯ ತಿಳಿಸಿದ್ದಾರೆ. ನಿಜವಾಗಿಯೂ ಕೂಡ ಇದು ರೈತರ ವಿಷಯದಲ್ಲಿ ಉತ್ತಮವಾದಂತಹ ಧ್ಯೇಯ. ನಮ್ಮ ರಾಜ್ಯದಲ್ಲಿ ಸಹಸ್ರಾರು ಕೆರೆಗಳಿವೆ. ಈ ಸಹಸ್ರಾರು ಕೆರೆಗಳಿಗಾಗಿ ಪ್ರತಿವರ್ಷ ಕೋಟ್ಯಾಂತರ ರೂಪಾಯಿ ಅನುದಾನದ ರೂಪದಲ್ಲಿ ಕೊಡುತ್ತಿದ್ದಾರೆ. ಬೆಂಗಳೂರಿನಿಂದ ಹಣ ಹರಿದು ಹೋಗುತ್ತದೆ. ಆದರೆ ಅದು ಹಳ್ಳಿಯವರೆಗೂ ಹೋಗಿ ಮುಟ್ಟುತ್ತದೋ ಇಲ್ಲವೋ ಎಂಬುದನ್ನು ಯಾರೂ ನೋಡುವುದಿಲ್ಲ, ನೀರಾವರಿ ಯೋಜನೆಯ ಕೆಲಸ ಕಾರ್ಯಗಳಲ್ಲಿ ನೂರರಲ್ಲಿ ಐವತ್ತರಷ್ಟು ಹಣ ಸೋರಿಹೋಗುತ್ತಿದೆ. ತಪ್ಪಿತಸ್ಥ ಅಧಿಕಾರಿಗಳನ್ನು ಅನೇಕ ಸದಸ್ಯರು ತೋರಿಸಿಕೊಟ್ಟಿದ್ದಾರೆ. ಅನೇಕ ಕಡೆ ಎನ್‌ಕ್ವೈರಿ ಮಾಡಿದ್ದಾರೆ. ಕೆಲಸ ಮಾಡದೇ ಇದ್ದುದನ್ನು ಮಾಡಿದ್ದೇವೆ ಎಂದು ಹೇಳಿ, ಸುಳ್ಳು ಖರ್ಚು ತೋರಿಸಿ ಹಣ ತೆಗೆದುಕೊಂಡ ಉದಾಹರಣೆಗಳು ಬೇಕಾದಷ್ಟು ಇವೆ. ಪ್ರಾಮಾಣಿಕ ಅಧಿಕಾರಿಗಳಿಗೆ ಪ್ರಮೋಶನ್ ಕೊಡುತ್ತಿಲ್ಲ. ತಪ್ಪಿತಸ್ಥ ಅಧಿಕಾರಿಗಳಿಗೆ ಒಳ್ಳೊಳ್ಳೆ ಹುದ್ದೆಗಳು, ಪ್ರಮೋಶನ್‌ಗಳೂ ದೊರೆಯುತ್ತವೆ, ಅಂತಹವರಿಗೆ ಪ್ರಮೋಶನ್ ಸಿಕ್ಕರೆ ಅವರು ಮತ್ತೆ ಹಿಂದೆ ತಾವು ಮಾಡಿದ ತಪ್ಪುಗಳನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನ ಮಾಡುತ್ತಾರೆ. ಇವತ್ತು ನೂರಾರು ಕೆರೆಗಳು ಆಗಬೇಕು. ಯಾವ ಯಾವ ಕೆರೆಗಳಿಗೆ ಎಷ್ಟು ಹಣ ಒದಗಿಸಲಾಗಿದೆ ಎಂಬುದನ್ನು ನಾವು ಖುದ್ದಾಗಿ ನೋಡಬೇಕಾಗುತ್ತದೆ. ಏಕೆಂದರೆ ಕೆಲವು ಕಡೆ ಸರಿಯಾಗಿ ನೂರು ರೂಪಾಯಿ ಕೆಲಸ ಮಾಡಿರುವುದಿಲ್ಲ ಆದರೆ ೨೦–೩೦ ಸಾವಿರ ರೂಪಾಯಿಗಳು ಖರ್ಚಾದ ಹಾಗೆ ಬಿಲ್ಲುಗಳನ್ನು ಮಾಡಿದ ಉದಾಹರಣೆಗಳಿವೆ. ನಮ್ಮ ದೇಶದ ಸಾರ್ವಜನಿಕರ ಹಣ, ತೆರಿಗೆಗಳಿಂದ ಬಂದಂಥ ಹಣ ಹೀಗೆ ದುರ್ವಿನಿಯೋಗವಾಗುತ್ತಿರುವುದು ಸರಿಯಲ್ಲ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡಿ ಗಮನಿಸದೇ ಹೋದರೆ ಈ ಬಗೆಯ ದುರ್ವಿನಿಯೋಗ ಮುಂದುವರೆದುಕೊಂಡು ಹೋಗುತ್ತದೆ. ಆದ್ದರಿಂದ ಇನ್ನು ಮುಂದಾದರೂ ಕೂಡ ಈ ಕೆರೆ ಕಾಮಗಾರಿಗಳ ಬಗ್ಗೆ ಹಣ ದುರುಪಯೋಗವಾಗದ ಹಾಗೆ ಸರಿಯಾದ ರೀತಿಯಲ್ಲಿ ಕೆಲಸ ನಡೆಯಬೇಕು, ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಸಲಹೆ ಕೊಡುವುದಕ್ಕೆ ನನಗೆ ಸಂತೋಷವಾಗುತ್ತದೆ.

ಇನ್ನು ಔದ್ಯಮೀಕರಣ ವಿಷಯದಲ್ಲಿ ಹೇಳಬೇಕೆಂದರೆ ಬೃಹತ್ ಯೋಜನೆಗಳನ್ನು ಕೈಗೊಂಡು ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವ ಬದಲು ಸಣ್ಣಪ್ರಮಾಣದ ಗ್ರಾಮ ಕೈಗಾರಿಕೆಗಳನ್ನು ಹೆಚ್ಚು ಅಭಿವೃದ್ಧಿಪಡಿಸಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಳ್ಳೆಯ ವಾತಾವರಣ ಸಿಕ್ಕರೆ ಕುಶಲ ಕರ್ಮಿಗಳು ಅತ್ಯುತ್ತಮವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಿದೆ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಸಿಕ್ಕರೆ ಇವರುಗಳ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯತೆ ಇದೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೋದ್ಯಮವನ್ನು ಯಶಸ್ವಿಯಾಗಿ ಸಾಗಿಸಿಕೊಂಡು ಹೋಗಲು ಸಾಧ್ಯವಾಗುತ್ತದೆ, ಹಿಂದುಳಿದ ವರ್ಗದವರನ್ನು ಸುಧಾರಿಸಬೇಕೆಂದು ನಾವು ಹೇಳುತ್ತಲೇ ಬಂದಿದ್ದೇವೆ. ಆದರೆ ಅವರ ಸುಧಾರಣೆಯಾಗಿಲ್ಲ. ಇವತ್ತು ಹಳ್ಳಿಗಳಲ್ಲಿ ಚರ್ಮ ಹದಮಾಡುವಂಥ, ಪಾದರಕ್ಷೆಗಳನ್ನು ತಯಾರು ಮಾಡುವ ಉತ್ತಮ ಚಮ್ಮಾರರು ಇದ್ದಾರೆ ; ಅದೇ ರೀತಿಯಲ್ಲಿ ಕುಂಬಾರರು, ಗಾಣಿಗರು ಇದ್ದಾರೆ. ಇವರಿಗೆ ಪ್ರೋತ್ಸಾಹ ಕೊಡುತ್ತೇವೆ ಎಂದು ಹೇಳುತ್ತಾ, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಬೆಂಗಳೂರು ನಗರದಲ್ಲಿ ಸುಣ್ಣ ತಯಾರಿಕೆಯಿಂದ ಹಿಡಿದು ಪೇಯಿಂಟ್ ತಯಾರಿಕೆ ಇತ್ಯಾದಿಯಾಗಿ ಎಲ್ಲಾ ವಸ್ತುಗಳ ತಯಾರಿಕೆಯನ್ನು ಇವರುಗಳಿಗೇ ಕೊಟ್ಟರೆ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೋದ್ಯಮಗಳು ಉಳಿಯುವುದಕ್ಕೆ ಸಾಧ್ಯವಿಲ್ಲ. ವಿಕೇಂದ್ರೀಕರಣವಾಗುವುದಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಈ ವಿಷಯವೂ ಕೂಡ ಸರ್ಕಾರದ ಗಮನದಲ್ಲಿರಬೇಕೆಂದು ಸಲಹೆ ಕೊಡಲು ಇಷ್ಟಪಡುತ್ತೇನೆ.

ಇವತ್ತು ಕೈಮಗ್ಗದ ಬಟ್ಟೆ ತಯಾರಿಕೆಯನ್ನು ತೆಗೆದುಕೊಂಡರೆ ಖಾದಿ ಬಟ್ಟೆ ಇರಬಹುದು, ಸೀರೆ, ಕುಪ್ಪುಸ, ಧೋತರ ತಯಾರು ಮಾಡತಕ್ಕಂಥ ಗ್ರಾಮಾಂತರ ಪ್ರದೇಶಗಳಲ್ಲಿ ತಯಾರಿಕಾ ಘಟಕಗಳಿವೆ. ಆದರೆ ಸರ್ಕಾರದವರು ಯಾವುದಾದರೂ ಒಂದು ಕಂಪೆನಿಗೆ ಕೋಟಿ ರೂಪಾಯಿಯ

ಆರ್ಡರನ್ನು ಕೊಡುತ್ತಾರೆ. ಗ್ರಾಮಾಂತರ ಮಟ್ಟದಲ್ಲಿ ಹಳ್ಳಿಗರು ತಯಾರು ಮಾಡಿದ ಉತ್ಪನ್ನಗಳಿಗೆ, ಸಾಮಗ್ರಿಗಳಿಗೆ ಸರ್ಕಾರದ ಅಧಿಕಾರಿಗಳಾಗಲೀ, ಇತರರಾಗಲೀ ಪ್ರೋತ್ಸಾಹ ಕೊಡುವುದಕ್ಕೆ ತಯಾರಾಗಿಲ್ಲ. ಈ ರೀತಿಯಾಗಿ ನಡೆದುಕೊಂಡು ಬಂದಿದೆ. ಕೈಮಗ್ಗದಿಂದ ತಯಾರಿಸಿದ ಬಟ್ಟೆಗಳಿಗೆ ಮಾರಾಟದ ವ್ಯವಸ್ಥೆಯಾಗಬೇಕು. ಹಳ್ಳಿಯಲ್ಲಿ ಕೆಲಸ ಮಾಡುವವರಿಗೆ ಸರಿಯಾದ ಪ್ರೋತ್ಸಾಹ ಸಿಗಬೇಕು. ಇವರಿಗೆ ಸಾಕಷ್ಟು ಸಹಾಯಧನ, ಮಾರ್ಗದರ್ಶನ ನೀಡಿದರೆ ಮಾತ್ರ ನಮ್ಮ ಗುರಿಸಾಧನೆಯಾಗುತ್ತದೆ, ನಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರ್ಮಿಕರ ವಿಷಯವಾಗಿ ಹೇಳಬೇಕೆಂದರೆ ಕೃಷಿ ಕಾರ್ಮಿಕರು ಇವತ್ತು ಬಹಳ ತೊಂದರೆಯಲ್ಲಿದ್ದಾರೆ. ಅವರ ವಿಷಯದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲು ಅಧಿಕಾರಿಗಳು ನಿರುತ್ಸಾಹಿಗಳಾಗಿದ್ದಾರೆ. ಇವತ್ತು ಕನಿಷ್ಟವೇತನ ನಿಗದಿಪಡಿಸಿದ್ದಾರೆ. ಆದರೆ ಎಷ್ಟೋ ಕಡೆ ಕನಿಷ್ಟವೇತನದ ಮಿತಿಗಿಂತ ಕಡಿಮೆ ಪ್ರಮಾಣದಲ್ಲಿ ವೇತನ ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿ ಕೆಲವು ಕಡೆ ಹೆಣ್ಣುಮಕ್ಕಳಿಗೆ ಎರಡು ರೂಪಾಯಿ, ಗಂಡುಮಕ್ಕಳಿಗೆ ಮೂರು ರೂಪಾಯಿ ಕೊಡುತ್ತಿದ್ದಾರೆ. ಬೆಳಿಗ್ಗೆ ಅವರು ಕೆಲಸಕ್ಕೆ ಹೋಗಿ ಸಂಜೆತನಕ ದುಡಿದು ಮೂರು ರೂಪಾಯಿ ತೆಗೆದುಕೊಂಡು ಅದರಿಂದ ರೊಟ್ಟಿ ಮಾಡಿಕೊಂಡು ತಿಂದು ಮಲಗಿ ಪುನಃ ಮಾರನೇ ದಿನ ಗಂಜಿ, ಕೂಳಿಗಾಗಿ ಕೆಲಸಕ್ಕೆ ಹೋಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಹಿಡುವಳಿದಾರರೂ, ಮತ್ತು ಕೃಷಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಇವರ ಬಗ್ಗೆ ಸರ್ಕಾರ ಗಮನಿಸಬೇಕು. ಕೆಲವು ಕಡೆ ರೈತರ ಪರಿಸ್ಥಿತಿ ಸ್ವಲ್ಪವೂ ಬದಲಾವಣೆಯಾಗದೆ ಇದ್ದ ಹಾಗೆಯೇ ಇದೆ. ಕಾರಣವೇನೆಂದರೆ ಇವತ್ತು ಮೂರು ಸಾವಿರ ರೂಪಾಯಿ ಉತ್ಪನ್ನ ಆಯಿತು ಎಂದರೆ ಐದು ಸಾವಿರ ರೂಪಾಯಿಯಷ್ಟು ಖರ್ಚಾಗುತ್ತದೆ. ಸಾಲದ ಶೂಲಕ್ಕೆ ಸಿಲುಕಿ ರೈತರು ತಳಮಳಿಸುತ್ತಿದ್ದಾರೆ. ಈ ಕನಿಷ್ಟವೇತನ ಏನು ಇದೆ, ಇದನ್ನು ಬಹಳ ಹುಶಾರಿಯಿಂದ, ಬಹಳ ಗಹನವಾಗಿ ವಿಚಾರಮಾಡಿ ಕಾರ್ಯರೂಪಕ್ಕೆ ತರಬೇಕು. ಪ್ರತಿಯೊಬ್ಬ ಹಳ್ಳಿಯ ಕೃಷಿಕಾರ್ಮಿಕರಿಗೆ ಜೀವನಕ್ಕೆ ಉತ್ತಮವಾಗುವ ರೀತಿಯಲ್ಲಿ, ಅವರ ಆಯವ್ಯಯ ಸರಿಯಾಗಿ ಸಾಗುವ ರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕು, ಸರಿಯಾದ ಮಾರ್ಗದರ್ಶನ ಅವರಿಗೆ ಸಿಗಬೇಕು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗವನ್ನು ದೊರಕಿಸಿ ಕೊಡುವುದು ಈ ಕಾರ್ಯಕ್ರಮದ ಉದ್ದೇಶವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ನಿಜವಾಗಿಯೂ ಇದು ಒಳ್ಳೆಯ ಉದ್ದೇಶ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿ ಪದವೀಧರರು ಬೇಕಾದಷ್ಟು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಅವರಿಗೆ ಸರಿಯಾದ ಉದ್ಯೋಗಗಳೇ ದೊರೆಯುವುದಿಲ್ಲ. ಹೆಚ್ಚಿನ ಉದ್ಯೋಗಗಳೆಲ್ಲಾ ಶ್ರೀಮಂತ ಮಕ್ಕಳಿಗೇ ಸಿಗುತ್ತದೆ. ಬಡವರು ಸಾಲಸೋಲ ಮಾಡಿ ವಿದ್ಯಾಭ್ಯಾಸ ನಡೆಸಿ ಪದವೀಧರರಾದರೂ ಕೂಡ ಅವರಿಗೆ ನೌಕರಿ ಸಿಗುತ್ತಿಲ್ಲ. ಉಪಜೀವನ ಮಾಡಲು ಅವರಿಗೆ ತುಂಬಾ ಕಷ್ಟವಾಗಿದೆ. ಈ ದಿಸೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನ ಪದವೀಧರರು ಇದ್ದಾರೆ, ಎಷ್ಟು ಜನರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರು ರಿಜಿಸ್ಟರ್ ಮಾಡಿದ್ದಾರೆ, ಇದನ್ನು ಸರ್ವೆಮಾಡಿ ಅವರಿಗೆ ಸ್ವಯಂ ಉದ್ಯೋಗ ಕಂಡುಕೊಳ್ಳಲು ಅನೇಕ ಉದ್ದಿಮೆಗಳನ್ನು ತಯಾರು ಮಾಡಲು ಅವಕಾಶ ಮಾಡಿಕೊಡಬೇಕು ಅಥವಾ ಅವರಿಗೆ ಸರ್ಕಾರಿ ನೌಕರಿಯನ್ನಾದರೂ ಒದಗಿಸಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕರ್ನಾಟಕ ಭೂಸೇನೆಯನ್ನು ಸಂಘಟಿಸಲು ಯೋಚಿಸಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಈ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಇದು ಕೂಡ ಒಳ್ಳೆಯ ಗುರಿಯಾಗಿದೆ. ನಾನು ಅನೇಕ ಕಡೆಗಳಲ್ಲಿ ನೋಡಿದ್ದೇನೆ. ಈ ಭೂಸೇನೆಯವರು ಉತ್ತಮವಾದ ಶಾಲಾ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅತ್ಯುತ್ತಮವಾದಂಥ ಕೆರೆಗಳನ್ನು, ರಸ್ತೆಗಳನ್ನು ನಿರ್ಮಿಸಿದ್ದಾರೆ, ಪ್ರತಿ ತಾಲ್ಲೂಕಿಗೂ ಈ ಭೂಸೇನೆಗಳನ್ನು ಮಾಡಿದರೆ ಮುಂದೆ ಪಿ.ಡಬ್ಲ್ಯೂ.ಡಿ ಡಿಪಾರ್ಟ್‌ಮೆಂಟ್‌ನವರಿಗೆ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಯವರಿಗೆ ಕೆಲಸವಾದರೂ ಏನು ಇರುತ್ತದೆ? ಪ್ರತಿಯೊಂದು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೈಯಲ್ಲಿ ನಾಲ್ಕು ಜನ ಜೂನಿಯರ್ ಇಂಜಿನೀಯರ್‌ಗಳು ಇದ್ದಾರೆ. ತಾಲ್ಲೂಕು ಬೋರ್ಡ್‌ಗಳಲ್ಲಿ ಇಬ್ಬರು ಮೂವರು ಜೂನಿಯರ್ ಇಂಜಿನಿಯರ್ ಇದ್ದಾರೆ. ಅವರ ಕೆಲಸ ಏನಾಗುತ್ತದೆ? ಅವರು ಏನು ಕೆಲಸ ಮಾಡಬೇಕು? ಮತ್ತು ಈ ಭೂಸೇನೆಯ ಕೆಲಸವಾದರೂ ಏನು? ಅವರುಗಳು ಕೆಲಸ ಇಲ್ಲದೇ ಕೂಡುವುದು ಬೇಡ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ

ಯಾವ ರೀತಿಯಲ್ಲಿ ಭೂಸೇನೆ ಕೆಲಸ ಮಾಡಬೇಕು, ಯಾವ ರೀತಿಯಲ್ಲಿ ತಾಲ್ಲೂಕು ಬೋರ್ಡ್‌ನವರು ಸಹಕರಿಸಿಕೊಂಡು ಹೋಗಬೇಕು ಎನ್ನುವುದನ್ನು ಬಹಳ ಗಂಭೀರವಾಗಿ ವಿಚಾರ ಮಾಡುವುದರ ಅವಶ್ಯಕತೆ ಇದೆ. ಇಲ್ಲದಿದ್ದರೆ ಭೂಸೇನೆಯಲ್ಲಿ ಪಗಾರ ಕೊಡುವುದು, ಪಿಡಬ್ಲ್ಯೂಡಿ, ತಾಲ್ಲೂಕು ಬೋರ್ಡಿನಲ್ಲೂ ಪಗಾರ ಕೊಡುವುದು; ಹೀಗೆ ಆಗಬಾರದು. ಇವತ್ತು ಸರ್ಕಾರದ ಒಟ್ಟು ಉತ್ಪನ್ನದ ನೂರಕ್ಕೆ ಎಪ್ಪತ್ತು ಭಾಗ ರಾಜ್ಯದ ಸರ್ಕಾರಿ ನೌಕರಿಗಾಗಿ ಹೋಗುತ್ತಿದೆ. ಹೀಗಿರುವಾಗ ಭೂಸೇನೆಯೂ ಕೆಲಸವನ್ನು ಯೋಗ್ಯ ರೀತಿಯಿಂದ ಮಾಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳುವುದು ಅವಶ್ಯಕವಾಗಿದೆ.

೪-೩೦ ಪಿ. ಎಂ.

ಇನ್ನು ೨೦ ಅಂಶದ ಕಾರ್ಯಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಏನು ಆಸಕ್ತಿಯನ್ನು ತಳೆದಿದ್ದಾರೆ ಇದು ಬಹಳ ಸಂತೋಷದಾಯಕವಾದ ವಿಷಯ. ಇದನ್ನು ಅತ್ಯುತ್ತಮವಾದ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕು ಎಂದು ನಾನು ಹೇಳುತ್ತೇನೆ. ಪ್ರತಿ ತಿಂಗಳೂ ಇದಕ್ಕಾಗಿ ಏನು ಹಣ ಖರ್ಚು ಮಾಡುತ್ತಿದ್ದೇವೋ ಅದಕ್ಕೆ ತಕ್ಕಂತೆ ಎಷ್ಟು ಕೆಲಸವಾಗಿದೆ ಅನ್ನುವುದನ್ನು ವಿಚಾರವಿಮರ್ಶೆ ಮಾಡಬೇಕು. ಆಗ ಅದರಲ್ಲಿ ಏನಾದರೂ ತಪ್ಪಿ ನಡೆದಿದ್ದರೆ ಅದನ್ನು ತಿದ್ದಿಕೊಂಡು ಕೆಲಸ ಮಾಡಬಹುದು. ಇದನ್ನು ಸರಿಯಾಗಿ ಮಾಡಿಕೊಂಡು ಹೋದರೆ ಇದರಲ್ಲಿ ಕಾಮಧೇನು ಕಲ್ಪವೃಕ್ಷದ ಹಾಗೆ ಮಾಡಬಹುದು ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಪ್ರತಿ ತಿಂಗಳೂ ೨೦ ರಿಂದ ೩೦ನೇ ತಾರೀಖಿನವರಿಗೆ ಪ್ರತಿ ತಾಲ್ಲೂಕಿನಲ್ಲೂ ಮೀಟಿಂಗ್ ಮಾಡಬೇಕು. ಆವಾಗ ಅದರ ಹಿಂದಿನ ತಿಂಗಳು ಏನು ಪ್ರಗತಿ ಸಾಧಿಸಿದ್ದೇವೆ, ಆದರಲ್ಲಿ ಏನು ಲೋಪದೋಷಗಳು ಇವೆ ಅದನ್ನು ತಿದ್ದಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ. ಸುದೈವದಿಂದ ಅದರಲ್ಲಿ ಶಾಸಕರು ಅಧ್ಯಕ್ಷರಾಗಿರುವುದರಿಂದ ಅವರು ಈ ಪಕ್ಷದವರೇ ಆಗಿರಲಿ ಆ ಪಕ್ಷದವರೇ ಆಗಿರಲಿ ಅದನ್ನು ಮರೆತು ಈ ೨೦ ಅಂಶದ ಕಾರ್ಯಕ್ರಮದಲ್ಲಿ ಚೆನ್ನಾಗಿ ಕೆಲಸ ಮಾಡಿದರೆ ಜನ ಸಾಮಾನ್ಯರೆಲ್ಲರಿಗೂ ಅನುಕೂಲವಾಗುತ್ತದೆ ಎನ್ನುವ ವಿಷಯವನ್ನು ಹೇಳುತ್ತೇನೆ. ಅಲ್ಲದೆ ಆ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುವ ಸಾಧ್ಯತೆಯೂ ಇದೆ. ಇದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತೇವೆ ಎಂದು ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದು ಅವರ ವಿಶಾಲಮನೋಭಾವನೆಯನ್ನು ಎತ್ತಿತೋರಿಸಿದಂತಾಗುತ್ತದೆ. ಈ ಬಗ್ಗೆ ಈ ಸದನದಲ್ಲಿರುವ ಪ್ರತಿಯೊಬ್ಬ ಸದಸ್ಯರೂ ಕೂಡ ಆ ಪಕ್ಷದವರು ಈ ಪಕ್ಷದವರು ಎನ್ನುವ ಮನೋಭಾವನೆಯನ್ನು ತೊರೆದು ಇದನ್ನು ಕಾರ್ಯಗತ ಮಾಡುವ ಹಾಗೆ ನೋಡಿಕೊಂಡರೆ ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು "ಗ್ರಾಮೀಣ ವಿದ್ಯುದ್ದೀಕರಣ ಕಾರ್ಯಕ್ರಮದ ವೇಗವನ್ನು ತೀವ್ರಗೊಳಿಸುವುದಲ್ಲದೆ ಗ್ರಾಮ ವಿದ್ಯುದ್ದೀಕರಣದ ಲಾಭಗಳನ್ನು ಅನುಭವಿಸುವುದು ಸರ್ವರಿಗೂ ಸಾಧ್ಯವಾಗುವಂತೆ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಷಯದಲ್ಲೂ ವಿಶೇಷ ಒತ್ತು ಕೊಡಲು ಸರ್ಕಾರ ನಿರ್ಧರಿಸಿದೆ. ಈಗಿರುವ ಭಾಗ್ಯಜ್ಯೋತಿ ಯೋಜನೆಯ ಜೊತೆಗೆ ಹೆಚ್ಚಿನ ಕ್ರಮವಾಗಿ ಈ ಯೋಜನೆ ಈಡೇರುವುದು" ಎಂದು ಏನು ಹೇಳಿದ್ದಾರೆ ಇದೂ ಸಹ ಬಹಳ ಸಂತೋಷದಾಯಕವಾದ ವಿಷಯ. ಈ ಒಂದು ಭಾಗ್ಯ ಜ್ಯೋತಿಯ ಯೋಜನೆಯನ್ನು ಹಿಂದಿನ ಸರ್ಕಾರದವರು ಪ್ರಾರಂಭ ಮಾಡಿದ್ದನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದೂ ಸಹ ಬಹಳ ಸಂತೋಷದಾಯಕವಾದ ವಿಷಯ. ಆದರೆ ಈ ಒಂದು ಯೋಜನೆ ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನರಿಗೆ ಮಾತ್ರ ಸಿಗಬೇಕು ಶ್ರೀಮಂತರಿಗೆ ಸಿಗಬಾರದು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಸಹಕಾರ ಸಂಸ್ಥೆಗಳ ಪ್ರಜಾಪ್ರಭುತ್ವವಾದಿ ಕಾರ್ಯವಿಧಾನವನ್ನು ಬಲಪಡಿಸಿ ಸುಧಾರಿಸುವುದು ನಮ್ಮ ಉದ್ದೇಶ ಎಂದು ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದೂ ಸಹ ಬಹಳ ಸಂತೋಷದಾಯಕವಾದ ವಿಷಯ. ಈಗ ನಮ್ಮ ರಾಜ್ಯದಲ್ಲಿ ಅನೇಕ ಸಹಕಾರೀ ಸಂಘಗಳು ಏನು ಇವೆ ಅವು ಈಗ ವಿನಾಶದತ್ತ ಹೋಗುತ್ತಾ ಇವೆ. ಇದಕ್ಕೆ ಪರಿಹಾರ ಕಂಡುಹಿಡಿದು ಅವುಗಳನ್ನು ಒಳ್ಳೆಯ ಮಾರ್ಗದಲ್ಲಿ ಹೋಗುವ ಹಾಗೆ ಕೊಂಡೊಯ್ಯಬೇಕು. ದುಷ್ಟರಿಗೆ ಶಿಕ್ಷೆ, ಶಿಷ್ಟರಿಗೆ ರಕ್ಷಣೆ ಮಾಡಿದರೆ

ಒಳ್ಳೆಯದು. ಈವಾಗ ಹಾಗಿಲ್ಲ. ಈವಾಗ ಯಾರು ಒಳ್ಳೆಯವರು ಇರುತ್ತಾರೋ ಅವರಿಗೆ ಇಲ್ಲದೇ ಇರುವ ಕಿರುಕುಳ ಕೊಡುತ್ತಾರೆ, ಯಾರು ದುಷ್ಟರು ಇರುತ್ತಾರೋ ಅವರಿಗೆ ಶಿಕ್ಷೆ ಕೊಡುತ್ತಾರೆ. ಇನ್ನು ಮುಂದಾದರೂ ಕೂಡ ಇದನ್ನು ಬಂದ್ ಮಾಡಬೇಕು ಎಂದು ಹೇಳುತ್ತೇನೆ. ಇಲ್ಲದೇ ಹೋದರೆ ಈ ಸಹಕಾರ ಸಂಸ್ಥೆಗಳಿಗೆ ಕೆಟ್ಟ ಹೆಸರು ಬರುತ್ತದೆ. ಈ ಬಗ್ಗೆ ನಮ್ಮ ಹೆಗಡೆಯವರು ಏನು ಒಂದು ಆಶಾಕಿರಣವನ್ನು ಹೊಂದಿದ್ದಾರೆ ಅದು ಬಹಳ ಒಳ್ಳೆಯದು. ಈ ಸಹಕಾರೀ ಸಂಸ್ಥೆಗಳು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಸರಿಯಾಗಿ ಅವರ ಆಡಳಿತ ನಡೆಯುವಂತೆ ನೋಡಿಕೊಳ್ಳಬೇಕಾದುದು ಬಹಳ ಮುಖ್ಯ. ಈವೊತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿರುವ ಸಹಕಾರೀ ಸಂಸ್ಥೆಗಳನ್ನು ನೋಡಿದರೆ ಸುಮಾರು ೧೦೦ಕ್ಕೆ ೯೫ರಷ್ಟು ದಿವಾಳಿಯಾಗಿವೆ. ಚೆನ್ನಾಗಿ ಕೆಲಸ ಮಾಡುವುದು ೪-೫ ಸಹ ಸಿಗುವುದೂ ಕಷ್ಟ. ಜನಸಾಮಾನ್ಯರೆಲ್ಲರಿಗೂ ಉಪಕಾರ ಮಾಡಿರುವ ಒಳ್ಳೆಯ ಸಂಸ್ಥೆಗಳು ಸಿಗುವುದು, ಕಷ್ಟ ಎಷ್ಟೋ ಸಹಕಾರಿಸಂಸ್ಥೆಗಳಿಗೆ ಕಾರ್ಯದರ್ಶಿಗಳನ್ನು ಇನ್ನೂ ನೇಮಕ ಮಾಡಿಲ್ಲ. ಕೆಲವು ಕಡೆ ನೋಡಿದರೆ ಆ ಕಾರ್ಯದರ್ಶಿಗಳಿಗೆ ೨೦ ರೂಪಾಯಿ ಸಂಭಾವನೆ, ಕೆಲವು ಕಡೆ ೫೦ ರೂಪಾಯಿ. ಇನ್ನು ಕೆಲವು ಕಡೆಗಳಲ್ಲಿ ೧೦೦-೨೦೦ ರೂಪಾಯಿಗಳ ಸಂಭಾವನೆ ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಅವರನ್ನು ಕೇಳುವವರೇ ಇಲ್ಲ. ಈ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಈ ರಿಸರ್ವ್ ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ ಆ ಅಪೆಕ್ಸ್ ಬ್ಯಾಂಕ್‌ನವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಸಹಕಾರಿ ಸಂಸ್ಥೆಗಳಿಗೆ ಆ ಹಣ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಎಷ್ಟೋ ಸಹಕಾರಿ ಸಂಸ್ಥೆಗಳಿಗೆ ಆ ಹಣ ಸಿಗುವುದೇ ಇಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಈ ಸಹಕಾರೀ ಸಂಸ್ಥೆಗಳಲ್ಲಿರುವ ಲೋಪದೋಷಗಳನ್ನು ತೊಡೆದು ಅವು ಚೆನ್ನಾಗಿ ಕೆಲಸ ಮಾಡುವಂತೆ ಮಾಡಬೇಕು. ಅಲ್ಲದೆ ರಿಸರ್ವ್ ಬ್ಯಾಂಕ್‌ನವರು ಈ ಅಪೆಕ್ಸ್ ಬ್ಯಾಂಕ್‌ಗೆ ಕೊಡುವ ಹಣವನ್ನು ಸಹಕಾರಿ ಸಂಸ್ಥೆಗಳಿಗೆ ಕೊಡಿಸಿ ಕೊಟ್ಟು ಈ ಸಹಕಾರೀ ಸಂಘಗಳು ಚೆನ್ನಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದಲ್ಲದೆ ನಾವುಗಳೂ ಸಹ ಈ ಬಗ್ಗೆ ಜಾಗರೂಕತೆ ವಹಿಸಿ ಕೆಲಸ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ರೇಷ್ಮೆ ಖಾತೆಗೆ, ತೋಟಗಾರಿಕೆಗೆ ಮತ್ತು ಮೀನುಗಾರಿಕೆಗೆ ಅನೇಕ ಸವಲತ್ತುಗಳನ್ನು ಕೊಡುತ್ತೇವೆಂದು ಮಾನ್ಯ ಹೆಗಡೆಯವರು ಹೇಳಿದ್ದಾರೆ. ಇವೆಲ್ಲವೂ ರೈತರಿಗೆ ಅನುಕೂಲವಾದಂತವುಗಳೆ. ಆದರೆ ಆ ಕಾರ್ಯವನ್ನೆಲ್ಲಾ ಕಾರ್ಯರೂಪಕ್ಕೆ ತರಬೇಕೆಂದು ಮಾನ್ಯ ಹೆಗಡೆಯವರಿಗೆ ನಾನು ಹೇಳಬಯಸುತ್ತೇನೆ.

ಇನ್ನು ವೃದ್ಧರಿಗೆ, ಅಂಗವಿಕಲರಿಗೆ ಮಾಸಾಶನ ೪೦ ರೂಪಾಯಿ ಇದ್ದುದನ್ನು ೫೦ ರೂಪಾಯಿ ಮಾಡಿದ್ದಾರೆ. ಇದು ಸಹ ಬಹಳ ಸಂತೋಷದಾಯಕವಾದ ವಿಷಯ ಎಂದು ಹೇಳುತ್ತೇನೆ.

ಜೀತದಾಳುಗಳ ಬಗ್ಗೆ ಅವರ ಉಸ್ತುವಾರಿ ನೋಡಿಕೊಳ್ಳಲು ತಜ್ಞರ ಒಂದು ತಂಡವನ್ನು ರಚಿಸಲಾಗುವುದು ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಯಾವ್ಯಾವ ಜಿಲ್ಲೆಯಲ್ಲಿ ಜೀತದಾಳುಗಳು ಎಷ್ಟೆಷ್ಟು ಅರ್ಜಿಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ನೋಡಿ ಅವರಿಗೆ ಸಹಾಯ ಮಾಡತಕ್ಕಂಥಾದ್ದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ವಿಚಾರವಾಗಿ ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದು ಪ್ರತಿಯೊಂದು ತಾಲ್ಲೂಕಿನಲ್ಲೂ ಉಪಯೋಗವಾಗುವಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಕರ್ನಾಟಕ ಜನತೆಗೆ ಸ್ವಚ್ಛ ಮತ್ತು ದಕ್ಷತೆ ಆಡಳಿತ ನೀಡಲು ನಾವು ದೃಢ ಸಂಕಲ್ಪ ಮಾಡಿದ್ದೇವೆ ಎಂದು ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದು ಬಹಳ ಸಂತೋಷದಾಯಕವಾದ ವಿಚಾರ. ಇದು ಬಹಳ ಉನ್ನತವಾದಂಥ ಗುರಿಯೂ ಸಹ ಆಗಿದೆ. ಇದುವರೆಗೂ ನಮ್ಮ ರಾಜ್ಯದಲ್ಲಿ ಈ ಸ್ವಚ್ಛ ಮತ್ತು ದಕ್ಷ ಆಡಳಿತ ಬಂದಿಲ್ಲ. ಈಗ ಏನಾಗಿದೆ ಎಂದರೆ ಒಳ್ಳೆಯವರಿಗೆ ಅಂದರೆ ಶಿಷ್ಟರಿಗೇನೇ ಶಿಕ್ಷೆ ದುಷ್ಟರಿಗೆ ಸಂರಕ್ಷಣೆ ಆಗುತ್ತಾ ಇದೆ. ಮುಂದಾದರೂ ಕೂಡ ಹೀಗಾಗದಂತೆ ನೋಡಿ ಒಳ್ಳೆಯ ಕಿರುಕುಳ ಕೊಡದೆ, ಅವರಿಗೆ ರಕ್ಷಣೆ ಕೊಡಬೇಕು, ದುಷ್ಟರಿಗೆ ಶಿಕ್ಷೆ ಆಗುವಂತೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಇಲ್ಲಿದ್ದಾಗ ಶಿಷ್ಟರಿಗೆ ರಕ್ಷಣೆ ಇರಲಿಲ್ಲವೇ ?

ಶ್ರೀ ಬಿ. ಜಿ. ಬಣಕಾರ್.—ಆವಾಗಲೂ ಕೂಡ ಒಳ್ಳೆಯವರಿಗೆ ರಕ್ಷಣೆ ಇರಲಿಲ್ಲ, ೩೫ ವರ್ಷ ದಿಂದ ಏನಾಗಿದೆ ಎಂದರೆ ನಾವೇ ಆಗಲಿ ನೀವೇ ಆಗಲಿ ಆ ಕಡೆಯಿಂದ ಈ ಕಡೆಗೆ ಬರುವುದು, ಈ ಕಡೆ ಯಿಂದ ಆ ಕಡೆಗೆ ಹೋಗುವುದು ಆಷ್ಟಾಗಿದೆ' ಇನ್ನೇನೂ ಕೆಲಸ ಆಗುತ್ತಾ ಇಲ್ಲ. ಆದರೆ ಪ್ರಜಾ ಪ್ರಭುತ್ವದ ನೀತಿಯಂತೆ ನಾವು ಆಡಳಿತ ನಡೆಸುತ್ತಾ ಇದ್ದೇವೆ.

ಇನ್ನು ಮಾನ್ಯ ಹೆಗಡೆಯವರು ನ್ಯಾಯಾಲಯದ ಬಗ್ಗೆ ಏನು ಹೇಳಿದ್ದಾರೆ ಇದು ಬಹಳ ಸಂತೋಷ ದಾಯಕವಾದ ವಿಷಯ. ಪ್ರತಿ ತಾಲ್ಲೂಕಿನಲ್ಲೂ ಕೂಡ ಒಂದೊಂದು ಕೋರ್ಟ್ ಅನ್ನು ಸ್ಥಾಪಿಸುವುದು ಅತ್ಯಗತ್ಯ ಎಂದು ನಾನು ಹೇಳುತ್ತೇನೆ.

ಇನ್ನು ಗ್ರಾಮಪಂಚಾಯಿತಿಗಳ ವಿಷಯ ಮಾನ್ಯ ಹೆಗಡೆಯವರು ಏನು ಹೇಳಿದ್ದಾರೆ ಇದೂ ಸಹ ಬಹಳ ಸಂತೋಷದಾಯಕವಾದ ವಿಷಯ. ಈ ಕೆಲಸ ಮೊದಲು ಆಗಬೇಕು. ಅನೇಕ ಪಂಚಾಯಿತಿ ಗಳಲ್ಲಿ ವಿಲೇಜ್ ಅಕೌಂಟೆಂಟ್‌ರವರೇ ಎಕ್ಸ್ಅಫಿಷಿಯೋ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಲ್ಲಿ ಸಿಗುವುದೇ ಇಲ್ಲ. ರಾಜ್ಯ ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಈ ವಿಲೇಜ್ ಅಕೌಂಟೆಂಟ್ ಅವರು ಚೆನ್ನಾಗಿ ಕೆಲಸ ಮಾಡುವಂತೆ ನೋಡಿ ಕೊಳ್ಳಬೇಕು. ಎಷ್ಟೋ ಸಂದರ್ಭಗಳಲ್ಲಿ ಅವರು ಅಲ್ಲಿ ಇರುವುದೇ ಇಲ್ಲ. ಊರಿನಲ್ಲಿ ಯಾರಾದರೂ ಸತ್ತರೆ, ಹುಟ್ಟಿದರೆ, ದರೋಡೆ ನಡೆದರೆ, ಕೊಲೆ ಆದರೆ ಅವರು ಯಾರಿಗೆ ಹೋಗಿ ವರದಿ ಮಾಡಬೇಕು? ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಬೇಕು, ಅದೂ ಕೂಡ ಬಹಳ ದೂರ. ಇದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಅದರಿಂದ ಅವರು ಬ್ರಿಟಿಷ್ ಸರ್ಕಾರ ಇದ್ದಾಗಲೆ ಚೆನ್ನಾಗಿತ್ತು ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವ ಬಂದಮೇಲೆ ಹಳ್ಳಿಗಾರರೆಲ್ಲಾ ಒಂದು ರೀತಿಯಾಗಿ ಅಂಧ ಕಾರದಲ್ಲಿ ಮುಳುಗಿಹೋಗಿದ್ದಾರೆ. ನಮ್ಮ ದೇಶದಲ್ಲಿ ಇನ್ನೂ ಕೂಡ ಸುಭದ್ರವಾದ ಆಡಳಿತವನ್ನು ನಡೆಸುವುದಕ್ಕಾಗಿಲ್ಲ. ಈ ಗಾಲಾದರೂ ಕೂಡ ಗ್ರಾಮಸ್ವರಾಜ್ಯವನ್ನು ಮಾಡುತ್ತೇವೆಂದು ಏನು ಹೇಳಿ ದ್ದೀರೋ ಅದು ಕೂಡಲೇ ಆಗಬೇಕಾದ್ದು ಅವಶ್ಯಕ ಇದೆ. ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸರಿಯಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾದ್ದು ಅವಶ್ಯಕ ಎನ್ನುವ ಮಾತನ್ನು ನಾನು ಈ ಸಂದರ್ಭ ದಲ್ಲಿ ಹೇಳಬಯಸುತ್ತೇನೆ. ಈ ಕೆಲಸವನ್ನು ಬಹಳ ವೇಗವಾಗಿ ಮಾಡಬೇಕು.

ಕೊನೆಯದಾಗಿ, ವೃತ್ತಿ ತೆರಿಗೆಯ ಬಗ್ಗೆ ಎರಡು ಮಾತನ್ನು ಹೇಳಬೇಕಾಗಿದೆ. ಇದನ್ನು ರದ್ದು ಮಾಡಬೇಕು ಎಂದು ಹೇಳುವವರು ಬಹಳ ಜನ ಇದ್ದಾರೆ. ಆದರೆ ಈ ತೆರಿಗೆಯನ್ನು ಕೊಡುವವರು ಯಾರು ಎಂದು ನಾವು ವಿಚಾರ ಮಾಡಿದಾಗ ಇದನ್ನು ಹಳ್ಳಿಯ ಜನರು ಕೊಡುವುದಿಲ್ಲ ಹೆಚ್ಚಾಗಿ ಇದನ್ನು ಕೊಡುವವರು ನಗರವಾಸಿಗಳು, ಮತ್ತು ಅಧಿಕಾರಿಗಳು ಇದ್ದಾರೆ. ಆದ್ದರಿಂದ ನಾನು ಈ ತೆರಿಗೆಯನ್ನು ರದ್ದು ಮಾಡಬಾರದು ಎಂದು ಹೇಳುತ್ತೇನೆ.

ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಕೊಡುವಂಥ ಹಣ ಏನು ಇದೆ ಅದು ದುರ್ವಿನಿ ಯೋಗವಾಗದ ರೀತಿಯಲ್ಲಿ, ಇದನ್ನು ಭ್ರಷ್ಟ ಅಧಿಕಾರಿಗಳು ದರೋಡೆ ಮಾಡದೆ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳಿ ಅಧ್ಯಕ್ಷರು ಇಷ್ಟು ವಿಷಯಗಳನ್ನು ಸಭೆಯ ಮುಂದೆ ಇಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಸಭಾಧ್ಯಕ್ಷರೇ, ಕಳೆದ ಮೂರು ದಶಕಗಳ ನಂತರ ಮತ್ತೊಂದು ಪಕ್ಷ ಈ ಸದನದಲ್ಲಿ ಆಯವ್ಯಯವನ್ನು ಮಂಡಿಸತಕ್ಕ ಅವಕಾಶವಾಗಿರುವುದು ಸ್ವಾಗತಾರ್ಹವಾಗಿದೆ. ಒಂದು ಮಾತಿನಲ್ಲಿ ಇದನ್ನು ನಾನು ವರ್ಣನೆ ಮಾಡುವುದಾದರೆ 'ಸೋರುವ ದೋಣಿಯಲ್ಲಿ ಕುಳಿತು ಸಾಗರ ದಾಟುವುದಕ್ಕೆ ಪ್ರಯತ್ನ ಮಾಡಿದಂತಾಗಿದೆ' ಇದು. ಈ ದೋಣಿ ಮುಳುಗದಂತೆ ನೋಡಿಕೊಳ್ಳುವುದು ನಮ್ಮ ಪ್ರಯತ್ನವಾಗಿದೆ. ಇಂಥ ದೋಣಿಯಲ್ಲಿ ನಾವು ಪ್ರಯಾಣ ಮಾಡುವಾಗ ಬಹಳ ಎಚ್ಚರಿಕೆಯಿಂದ ನಡೆಯಬೇಕಾಗಿದೆ. ಅದಕ್ಕೆ ನಾನು ಹೇಳುತ್ತೇನೆ, ಈ ಸೋರುವ ದೋಣಿಯನ್ನು ಹೊಸ ದೋಣಿಯನ್ನಾಗಿ ರಚನೆ ಮಾಡಬೇಕಾದರೆ ನಮಗೆ ಹೊಸ ಶಕ್ತಿಯೂ ಬರಬೇಕಾ ಗಿದೆ. ಈ ಮಾತನ್ನು ಹೇಳುವಾಗ ಆಧಾರಪೂರ್ವಕವಾಗಿಯೇ ಹೇಳುತ್ತೇನೆ. ಸೋರುವ ದೋಣಿ ಪ್ರಾರಂಭದಲ್ಲಿ ೪೦ ಕೋಟಿ ರೂಪಾಯಿಗಳ ಖೋತಾ ಆಯವ್ಯಯವನ್ನು ಕೊಟ್ಟಿದೆ. ಇದು ಕಳೆದ ೩೨ ವರ್ಷಗಳಿಂದ ಅಧಿಕಾರಾವಧಿಯಲ್ಲಿದ್ದು ದೇಶದ ಜನರನ್ನು ಸಾಲದ ಶೂಲದಲ್ಲಿ ಮುಳುಗಿಸಿ ವರ್ಷ

ಒಂದಕ್ಕೆ ೨೫೧ ಕೋಟಿ ರೂಪಾಯಿಗಳ ಖೋತಾ ಆಯವ್ಯಯವನ್ನು ತೋರಿಸಿ ನಮ್ಮನ್ನು ಬಡ್ಡಿ ಮಕ್ಕಳನ್ನಾಗಿ ಮಾಡಿರುವಾಗ, ಮತ್ತು ಈ ಆಯವ್ಯಯವನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಆಯವ್ಯಯ ಯಾವ ದಿಕ್ಕಿನಲ್ಲಿ ನಡೆಯಬೇಕಾಗಿತ್ತೋ, ಆ ರೀತಿ ಸಾಗದೆ ನಮ್ಮ ನಿರೀಕ್ಷಣೆಗೆ ತಕ್ಕಂತೆ ಹೊಸದೇನೂ ಕಾಣಿಸದಿದ್ದರೂ ಕೂಡ ಇದರಲ್ಲಿ ಸ್ವಾಭಿಮಾನದಿಂದ ಕೂಡಿದಂಥ ಒಂದು ಮಾರ್ಗದರ್ಶನ ಇದೆ, ಆದಕ್ಕಾಗಿ ನಾನು ಈ ಆಯವ್ಯಯವೆಂದು ನಾವು ಹೇಳದಿದ್ದರೂ ಸಹ ಇದರಲ್ಲಿ ಸ್ವಾಭಿಮಾನ ಎದ್ದು ಕಾಣುತ್ತಿದೆ. ಈ ಆಯವ್ಯಯದಲ್ಲಿ ಕಾಣುವ ಯೋಜನೆಗಳು ಏನು ಇವೆ ಅವುಗಳನ್ನು ಸರ್ಕಾರ ಹೆಚ್ಚು ಗಮನದಿಂದ ನಿರ್ವಹಿಸಬೇಕಾಗಿದೆ. ಈ ಒಂದು ಮಾರ್ಗದರ್ಶನ ಇದರಲ್ಲಿ ಕಾಣುವುದರಿಂದ ನಾನು ಮೊಟ್ಟ ಮೊದಲನೆಯದಾಗಿ ಅರ್ಥಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಕಾವೇರಿ ಜಲಾನಯನದ ಯೋಜನೆಗಳಿಗಾಗಿ ಅರ್ಥಮಂತ್ರಿಗಳು ಈ ವರ್ಷ ೪೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಹಿಂದಿನ ಸರ್ಕಾರದವರು ಸುಮಾರು ೨೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಇವರು ೪೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಆದರೆ ಇದು ನಾವು ನಿರೀಕ್ಷೆ ಮಾಡಿದಷ್ಟು ಹೆಚ್ಚೇನೂ ಅಲ್ಲ. ಆದರೂ ಕೂಡ ಈ ಯೋಜನೆಗಳ ಬಗ್ಗೆ ಸರ್ಕಾರ ಗಮನ ಹರಿಸದೇ ಹೋಗಿದ್ದರೆ ನಮ್ಮ ದೇಶದ ಪರಿಸ್ಥಿತಿ ಶೋಚನೀಯವಾಗುತ್ತಿತ್ತು. ತಾವು ಕಳೆದ ೩೨ ವರ್ಷಗಳಿಂದ ಈ ನೀರಾವರಿ ಯೋಜನೆಗಳಿಗಾಗಿ ಸುಮಾರು ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬಂದಿದ್ದೀರಿ. ಹೆಚ್ಚಿನ ಹಣವನ್ನು ನೀರಾವರಿ ಯೋಜನೆಗಳಲ್ಲಿ ಆಳವಡಿಸಿರುವುದು ಒಂದು ಹೊಸ ಹೆಜ್ಜೆ ಎಂದು ನಾವು ಹೇಳಬಹುದಾಗಿದೆ. ಆದ್ದರಿಂದ ಈ ಒಂದು ದಿಕ್ಕಿನಲ್ಲಿ ರಾಜ್ಯದ ಆಯವ್ಯಯವನ್ನು ತೆಗೆದುಕೊಂಡು ಹೋಗಿರುವುದರಿಂದ ಇದೊಂದು ಸ್ವಾಭಿಮಾನದಿಂದ ಕೂಡಿದ ಬಡ್ಜೆಟ್ ಎಂದು ನಾನು ಹೇಳಬೇಕಾಗಿದೆ. ಆದರೂ ನೀರಾವರಿ ಯೋಜನೆಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡುವ ದಿಕ್ಕಿನಲ್ಲಿ ಹೊರಟಿರುವುದು ಒಳ್ಳೆಯದಾಗಿದೆ. ಹಾಗೆಯೇ ಯೋಜನೇತರ ಕೆಲಸಗಳಿಗೆ ಅಷ್ಟೇ ದಿಟ್ಟತನದಿಂದ ಹತ್ತು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಲು ಹೊರಟಿರುವಂಥ ಧೈರ್ಯ ಮಾಡಿದ್ದಕ್ಕಾಗಿ ನಾನು ಈ ಆಯವ್ಯಯವನ್ನು ಸ್ವಾಗತ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೇಜ್ ೮ರಲ್ಲಿ ಹಿಂದಿನ ಸರ್ಕಾರದವರು ಕೊಟ್ಟಂಥ ಹಣವನ್ನು ನಮೂದು ಮಾಡಲಾಗಿದೆ. ಅದನ್ನು ನಾನು ಮಾನ್ಯಸದಸ್ಯರ ಗಮನಕ್ಕೆ ತರಬಯಸುತ್ತೇನೆ.

> 'Similarly the outlay on Cauvery basin projects has been increased to Rs. 44 crores in 1983-84 from Rs. 40 crores in 1982 83.'

ಶ್ರೀ ಎಚ್. ಗಂಗಾಧರನ್ —ಮತ್ತೆ ಔದ್ಯೋಗಿಕ ವಿಕೇಂದ್ರೀಕರಣದ ಬಗ್ಗೆ ಮೆಚ್ಚಿಗೆಯ ಕಾರ್ಯಕ್ರಮಗಳನ್ನು ಈ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದೆ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸತಕ್ಕ ದಿಕ್ಕಿನಲ್ಲಿ ಆಯವ್ಯಯದಲ್ಲಿ ಆಲೋಚನೆ ಮಾಡಿದೆ ಆದರೆ ಕೈಗಾರಿಕೆಗಳನ್ನು ಹೇಗೆ ಅಭಿವೃದ್ಧಿ ಮಾಡಬೇಕು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಏಕಮುಖವಾದ ಸಲಹೆ ಕಾಣದೆ ಇರುವುದು ಇದಕ್ಕೆ ಕೊರತೆಯಾಗಿದೆ. ಉಪಕರಣಗಳನ್ನು ಮಾಡುವುದಕ್ಕೆ, ಎಲ್ಲಾ ಗುಣಮಟ್ಟದ ವಸ್ತುಗಳನ್ನು ತಯಾರು ಮಾಡುವಂಥಾದ್ದಕ್ಕೆ ಪ್ರೋತ್ಸಾಹ ಕೊಡುವಂಥ ಭಾವನೆ ಇದರಲ್ಲಿದೆ. ಆದರೆ ಈ ಭಾವನೆಗೆ ಮೂರ್ತಿ ರೂಪ ಕೊಡುವಂಥ ಮಾರ್ಗದರ್ಶನ ಯಾವುದು ? ಗುಡಿ ಕೈಗಾರಿಕೆಗಳ ಬಗ್ಗೆ ಪ್ರೋತ್ಸಾಹಕರವಾದ ಅಂಶ ಇದರಲ್ಲಿ ಇರಬೇಕಾದ್ದು ಮತ್ತೆ ಅದಕ್ಕೆ ಕೊಡುವಂಥ ರಿಯಾಯತಿ ಏನು ಇದೆ ಅದರ ಬಗ್ಗೆ ವಿಚಾರ ಮಾಡಿದಾಗ ಅದಕ್ಕೆ ಕೊರತೆ ಇದೆ ಎನ್ನುವುದನ್ನು ನಾವು ಕಾಣುತ್ತಿದ್ದೇವೆ ಈ ಕೊರತೆಯನ್ನು ತುಂಬ ಬೇಕಾದರೆ ಉತ್ಪನ್ನ ಮಾಡತಕ್ಕ ವಸ್ತುಗಳ ಮೇಲೆ ಅಧಿಕ ತೆರಿಗೆಯನ್ನು ಹಾಕದೆ ಗ್ರಾಮೀಣ ಉದ್ಯೋಗದ ಉತ್ಪನ್ನಗಳ ಮೇಲೆ ತೆರಿಗೆಯ ರಿಯಾಯಿತಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದರೆ ಮಾತ್ರ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗೆ ಮಾರ್ಗದರ್ಶನ ಸೂಚನೆ ಮಾಡಿದಂತಾಗುತ್ತಿತ್ತು ಆದರೆ ಈ ದೃಷ್ಟಿಯಿಂದ ಯೋಚನೆ ಮಾಡಿದಾಗ ಈ ಒಂದು ಮಾರ್ಗದರ್ಶನ ಇಲ್ಲಿ ಇಲ್ಲ ಎನ್ನತಕ್ಕ ಭಾವನೆ ಬರುತ್ತದೆ. ಆದಾಗ್ಯೂ ಕೂಡ ಗ್ರಾಮ ಕೈಗಾರಿಕೆಗಳನ್ನು ಬೆಳೆಸಬೇಕು ಎನ್ನುವ ಉತ್ಸಾಹ ಮನೋಧರ್ಮ ಏನು ಇದೆ ಅಭಿಮಾನ ಏನು ಇದೆ ಅದಕ್ಕಾಗಿ ನಾನು ಈ ಬಡ್ಜೆಟ್ಟನ್ನು ಸ್ವಾಭಿಮಾನದ ಬಡ್ಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಂತ್ಯೋದಯದ ಯೋಜನೆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ರೇಷ್ಮೆಯ ಬಗ್ಗೆ ನಾನು ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ರೇಷ್ಮೆ ಕೈಗಾರಿಕೆ ಬಗ್ಗೆ—ಅದರ ಮೇಲೆ ಹಾಕತಕ್ಕ ತೆರಿಗೆಯನ್ನು ಕೊಂಚ ಮಟ್ಟಿಗೆ ಕಡಿಮೆ ಮಾಡಿದ್ದಾರೆ. ಇವತ್ತು ನಮ್ಮ ದೇಶದಲ್ಲಿ ಉತ್ಪನ್ನವಾಗುವಂಥ ರೇಷ್ಮೆ ನೆರೆ ರಾಜ್ಯಗಳಿಗೆ ಹೋಗಿ ಅಲ್ಲಿ ಅದು ಬಟ್ಟೆಯಾಗಿ ಬಂದಾಗ ಅದಕ್ಕೆ ಸೇಲ್ಸ್‌ಟ್ಯಾಕ್ಸ್ ಕಡಿಮೆ ಆಗುತ್ತದೆ. ಇದರಿಂದ ನಮ್ಮ ರಾಜ್ಯದಲ್ಲಿರತಕ್ಕ ಈ ಉದ್ಯಮ ಬೇರೆ ರಾಜ್ಯಗಳಿಗೆ ಹೋಗತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ತಡೆಗಟ್ಟುವಂಥ ಮಾರ್ಗದರ್ಶನ ಇದರಲ್ಲಿ ಏನೂ ಕಾಣುತ್ತಿಲ್ಲ.

ಮೀನುಗಾರಿಕೆಯ ಬಗ್ಗೆ ಅನೇಕ ಯೋಜನೆಗಳನ್ನು ರೂಪಿಸಲಾಗಿದೆಯೆಂದು ನಾನು ಅಭಿಮಾನದಿಂದ ಹೇಳಬೇಕಾಗಿದೆ. ನಾನು ಮೊದಲು ಮಾತನಾಡಿದಾಗ ಚಲನಚಿತ್ರ ಉದ್ಯಮದ ಬಗ್ಗೆ ಹೇಳಿದ್ದೆ. ರಾಜ್ಯ ಸರ್ಕಾರದವರು ಕನ್ನಡ ರಾಜ್ಯದಲ್ಲಿ ತಯಾರಾದ ಚಲನಚಿತ್ರಗಳಿಗೆ ಮಾತ್ರ ಸಹಾಯಧನ ಕೊಡತಕ್ಕ ಯೋಜನೆಯನ್ನು ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಇದನ್ನು ಶಿಕ್ಷಣ ಕ್ಷೇತ್ರದ ಬಗ್ಗೆ ಸರ್ಕಾರದವರು ಯಾವುದೇ ನಿರ್ದಿಷ್ಟವಾದ ಯೋಜನೆಯನ್ನು ಇಟ್ಟುಕೊಂಡಿರುವುದು ಕಂಡು ಬರುತ್ತಿಲ್ಲ. ಇದರ ಬಗ್ಗೆ ಯಾವ ರೀತಿಯಲ್ಲಿಯೂ ಯೋಚನೆ ಮಾಡಿದಂತೆ ಕಾಣಲಿಲ್ಲ. ನಮ್ಮ ಶಿಕ್ಷಣ ಪದ್ಧತಿ ಸುಧಾರಿಸಬೇಕಾಗಿದೆ. ಈ ಕ್ಷೇತ್ರದಲ್ಲಿ ಕ್ರಾಂತಿಯುತವಾದ ಬದಲಾವಣೆಯಾಗಬೇಕಾಗಿತ್ತು. ಆದರೆ ಈ ದೃಷ್ಟಿಯಿಂದ ನಾವು ವಿಚಾರ ಮಾಡಿದಾಗ ಇವತ್ತು ನಮಗೆ ಬೇಕಾದಂಥ ನೀಡ್ ಬೇಸ್ಡ್ ಎಜುಕೇಷನ್ ಆಧಾರದ ಮೇಲೆ ಶಿಕ್ಷಣ ಕ್ರಮವನ್ನು ಬದಲಾವಣೆ ಮಾಡಬೇಕಾಗಿತ್ತು. ನಮ್ಮ ದೇಶಕ್ಕೆ ಈ ರೀತಿಯ ಶಿಕ್ಷಣ ಪಡೆದಂಥವರನ್ನು ಒದಗಿಸಿಕೊಟ್ಟು ಔದ್ಯೋಗೀಕರಣ ಯೋಜನೆಯಲ್ಲಿ ಅಳವಡಿಸತಕ್ಕ ಒಂದು ಕ್ರಮದ ಕೊರತೆ ಇಲ್ಲಿ ಹೆಚ್ಚು ಕಾಣುತ್ತಿದೆ. ಈ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದ ಬದಲಾವಣೆಯ ಅಂಶ ಇದರಲ್ಲಿ ಕಾಣುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಸಮಗ್ರವಾದಂಥ ಒಂದು ವ್ಯವಸ್ಥೆ, ಒಂದು ಧೋರಣೆಯನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ ನಾನು ಹೇಳಿದ ಹಾಗೆ, 'ನೀಡ್ ಬೇಸ್ಡ್ ಎಜುಕೇಷನ್' ಎಂದು ಜಾರಿಯಲ್ಲಿ ತಂದು ಅದನ್ನು ನಮ್ಮ ಎಕಾನಮಿಯಲ್ಲಿ ಅಳವಡಿಸಿಕೊಂಡರೆ ದೇಶದ ಅಭಿವೃದ್ಧಿಗೆ ನೆರವಾಗುತ್ತದೆ ಎನ್ನುವ ಅಂಶವನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ಇನ್ನೊಂದು ಅಂಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಈ ಕ್ಷೇತ್ರದಲ್ಲಿ ನಾವು ಆಳವಾಗಿ ವಿಚಾರ ಮಾಡಿದಾಗ ಈ ಕ್ಷೇತ್ರಕ್ಕೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದು ಆದರಿಂದ ತಕ್ಕ ಪ್ರತಿಫಲ ದೊರೆಯದೇ ಇರುವುದು ವಿಷಾದನೀಯ. ನಮ್ಮ ರಾಜ್ಯದಲ್ಲಿ ಒಬ್ಬ ಪದವೀಧರನಿಗೆ ಸುಮಾರು ೭೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಬಿ.ಎಸ್.ಸಿ. ಪದವೀಧರನನ್ನು ತಯಾರು ಮಾಡುವುದಕ್ಕೆ ನಾವು ೮೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಒಬ್ಬ ಡಾಕ್ಟರನ್ನು ತಯಾರು ಮಾಡುವುದಕ್ಕೆ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಒಬ್ಬ ಇಂಜನಿಯರನ್ನು ತಯಾರು ಮಾಡುವುದಕ್ಕೆ ಒಂದೂಕಾಲು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟು ಹಣ ಖರ್ಚು ಮಾಡಿ ನಾವು ಶಿಕ್ಷಣ ನೀಡುವಾಗ ಇವರಿಗೆ ಉದ್ಯೋಗಗಳನ್ನು ಒದಗಿಸತಕ್ಕ ರೀತಿಯಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಮತ್ತು ಈ ಜನರನ್ನು ಉಪಯೋಗ ಮಾಡಿಕೊಳ್ಳತಕ್ಕ ರೀತಿಯಲ್ಲಿ ನಾವು ಚಿಂತನೆ ಮಾಡಬೇಕಾಗಿದೆ.

ಇದು ನಮಗೆ ಅವಶ್ಯಕತೆ ಆಧಾರದ ಮೇಲೆ ಕೊಡುವಂತಹ ಶಿಕ್ಷಣವಲ್ಲ. ಈ ನಿರುದ್ಯೋಗಿಗಳ ಬಗ್ಗೆ ಒಂದು ಲೆಕ್ಕವನ್ನು ಇಲ್ಲಿ ಕೊಟ್ಟಿದ್ದಾರೆ. ವರ್ಷದಿಂದ ವರ್ಷಕ್ಕೆ ಈ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಾ ಇದೆ. ಕಳೆದ ಮಾರ್ಚ್ ಒಳಗೆ ೬ ಲಕ್ಷ 20 ಸಹಸ್ರ ಜನ ನಿರುದ್ಯೋಗಿಗಳಾಗಿದ್ದಾರೆ. ಈ ಒಂದು ಸಂಖ್ಯೆಯನ್ನು ಇಲ್ಲಿ ಕೊಟ್ಟಿದ್ದಾರೆ. ಈ ವರ್ಷಕ್ಕೆ ಅವರಲ್ಲಿ ೨೫ ಸಾವಿರ ಜನಕ್ಕೆ ಉದ್ಯೋಗ ಕೊಡುವುದಕ್ಕೆ ಸಾಧ್ಯತೆ ಇಲ್ಲ. ಈ ದೇಶದಲ್ಲಿ ೬ ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ ಎಂದರೆ ಶಿಕ್ಷಣದ ಮಟ್ಟ ಏನು ಎಂಬುದನ್ನು ನಾವು ಯೋಚನೆ ಮಾಡಬಹುದು. ಇಂತಹ ಒಂದು ಶಿಕ್ಷಣವನ್ನು ಬೆಳೆಸಿಕೊಂಡು ಹೋಗುವುದಾದರೆ ಈ ದೇಶದಲ್ಲಿ ಏನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಈ ಯೋಜನೆಗಳಿಗೆ ಹಣ ಎಲ್ಲಿ ಸಿಕ್ಕುತ್ತದೆ ? ಅವರಿಗೆ ಉದ್ಯೋಗ ದೊರಕಿಸಿಕೊಡುವಂತಹ ಕಾರ್ಯಕ್ರಮಗಳಿಗೆ ಹಣ ದೊರಕಿಸಿಕೊಡುವುದಕ್ಕೆ ಸಾಧ್ಯತೆ ಇದೆಯೇ ? ಈ ಬಗ್ಗೆ ಚಿಂತನೆ ಮಾಡಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಈ ನೀಡ್‌ಬೇಸ್ಡ್ ಎಜುಕೇಷನ್ ಸಿಸ್ಟಂನ್ನು ವಿದ್ಯಾ

ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಬೇಕು ಎಂದರೆ ಅಲ್ಲಿ ಅವಶ್ಯಕತೆಯ ಆಧಾರದ ಮೇಲೆ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಆದರೆ ಇವತ್ತು ನಾವು ಹಳೆಯ ಸಂಪ್ರದಾಯದ ಕ್ರಮವನ್ನು ಅನುಸರಿಸುತ್ತಿದ್ದೇವೆ. ಈ ಆಯವ್ಯಯವನ್ನು ನೋಡಿದಾಗ ಉತ್ಪಾದನಾರಹಿತವಾದ ವೆಚ್ಚ ೧೭೭೮ ಕೋಟಿಗಿಂತ ಅಧಿಕವಾಗಿದೆ. ಇದು ಪ್ರತಿ ವರ್ಷದಿಂದ ಬೆಳೆದು ಬಂದಿರತಕ್ಕಂಥಾದ್ದು ಈ ಅನುತ್ಪಾದನಾ ವೆಚ್ಚವನ್ನು ಹೆಚ್ಚಿಸಿಕೊಂಡು ಹೋಗುತ್ತಾ ಇರುವ ದಿಕ್ಕಿನಲ್ಲಿ ಈ ಆಯವ್ಯಯವನ್ನು ಮಂಡನೆ ಮಾಡಿದಂತಹ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಕೂಡ ಅದೇ ಹಳೆಯ ಜಾಡಿನಲ್ಲೇ ಹೆಜ್ಜೆ ಇಟ್ಟಿರತಕ್ಕಂಥಾದ್ದು ಬಹಳ ಶೋಚನೀಯವಾದ ಸಂಗತಿ ಎಂದು ಹೇಳಬೇಕಾಗಿದೆ. ಈ ನಮ್ಮ ದೇಶದಲ್ಲಿ ಸರ್ಕಾರದ ಆಡಳಿತದಲ್ಲಿರುವವರು ೩ ಲಕ್ಷ ೬೩ ಸಾವಿರ ಜನ ಈ ೩ ಲಕ್ಷ ೬೩ ಸಾವಿರ ಜನಕ್ಕೆ ೧೪೭೭ ಕೋಟಿ ರೂಪಾಯಿಗಳ ಆಯವ್ಯಯದಲ್ಲಿ ಶೇಕಡ ೩೦ರಷ್ಟು ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇದರ ಅವಶ್ಯಕತೆ ಇದೆಯೇ? ಈ ಖರ್ಚು ಮಾಡತಕ್ಕ ಹಣವನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನ ಏನಾದರೂ ನಡೆದಿದೆಯೇ? ಎಂದರೆ ಈ ಆಯವ್ಯಯದಲ್ಲಿ ಅದ್ಯಾವುದೂ ನಮಗೆ ಕಂಡುಬರುತ್ತಾ ಇಲ್ಲ. ಇದರಲ್ಲಿ ಏನಿದೆ ಎಂದರೆ ಹಂತಹಂತಗಳ ಅಧಿಕಾರ ಇದೆ. ೧೦-೧೨ ಅಧಿಕಾರಗಳು ಇದೆ. ಈ ೧೦-೧೨ ಮಾದರಿಯ ಆಡಳಿತ ಯಂತ್ರ ಏನಿದೆ ಇದರ ಅವಶ್ಯಕತೆ ಇದೆಯೇ ಇದನ್ನು ಏತಕ್ಕೆ ಮಾಡಬೇಕು? ವಿಲೇಜ್ ಅಕೌಂಟೆಂಟ್ ಮೇಲೆ ರೆವೆನ್ಯೂ ಇನ್ಸ್‌ಪೆಕ್ಟರ್, ರೆವೆನ್ಯೂ ಇನ್ಸ್‌ಪೆಕ್ಟರ್ ಮೇಲೆ ತಹಸೀಲ್ದಾರ್, ತಹಸೀಲ್ದಾರ್ ಮೇಲೆ ಅಸಿಸ್ಟೆಂಟ್ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ಮೇಲೆ ಡೆಪ್ಯುಟಿ ಕಮೀಷನರ್, ಡೆಪ್ಯುಟಿ ಕಮೀಷನರ್ ಮೇಲೆ ಡಿವಿಜನಲ್ ಕಮೀಷನರ್, ಅವರ ಮೇಲೆ ಇನ್ನೊಬ್ಬರು ರೆವೆನ್ಯೂ ಕಮೀಷನರು, ಅವರ ಮೇಲೆ ಸೆಕ್ರೆಟರಿ. ಅವರ ಮೇಲೆ ಚೀಫ್ ಸೆಕ್ರೆಟರಿ—ಇಷ್ಟು ಹಂತಗಳನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ? ಈ ಸರ್ಕಾರಿ ನೌಕರಿ ಮಾಡತಕ್ಕಂಥವನಿಗೆ ಅವನು ಬದುಕಬೇಕು, ಬದುಕಿ ಸೇವೆ ಮಾಡಬೇಕು ಎನ್ನತಕ್ಕಂಥ ಕಾರಣಕ್ಕಾಗಿ ನಾವು ಹಣ ಕೊಡುವುದಾದರೂ ಕೂಡ, ಅವನಿಗೆ ಬದುಕುವುದಕ್ಕೆ ಬೇಕಾದ ಸೌಲಭ್ಯಗಳು ದೊರಕಬೇಕೇ ಹೊರತು ಅವನಿಗೆ ಹೊಸ ಹೆಸರು ಕೊಟ್ಟು ಅಧಿಕ ಯೋಜನೆಗಳ ವೆಚ್ಚ ಮಾಡುವಂತಹ ಮಾರ್ಗ ಏನಿದೆ ಇದು ಬ್ರಿಟಿಷ್ ಪದ್ಧತಿಯಿಂದ ಕಲಿತುಕೊಂಡಿರತಕ್ಕಂಥ ಹಾಸ್ಯ ಪದ್ಧತಿಯ ಅನುಕರಣೆಯಲ್ಲದೇ ಮತ್ತೆ ಬೇರೇನು ಅಲ್ಲ. ಇವತ್ತು ಈ ಒಂದು ಪದ್ಧತಿ ಹೋಗಬೇಕು ನಮ್ಮಲ್ಲಿ ಕನಿಷ್ಠ ವೇತನ ೫೦೦ ರೂಪಾಯಿಗಳು ಸಿಕ್ಕುವಂತಹ ಅಧಿಕಾರವನ್ನು ಕೊಟ್ಟು ನಂತರ ವಾರ್ಷಿಕ ಬಡ್ತಿ ಕೊಡುತ್ತಾ ಬಂದರೆ ಮತ್ತು ಕೊನೆಯ ಹಂತದಲ್ಲಿ ೧೫೦೦ ರೂಪಾಯಿಗಳ ವೇತನ ಮುಟ್ಟುವಂತಹ ಒಂದು ವ್ಯವಸ್ಥೆ ಮಾಡುವುದಾದರೆ ಈ ದೇಶದಲ್ಲಿ ಸರ್ಕಾರಿ ನೌಕರಿಗಿಂತ ಅಷ್ಟು ಪ್ರೀತಿದಾಯಕವಾದ ಉದ್ಯಮ ಬೇರೆ ಯಾವುದೂ ಇರಲಾರದು ಎಂದು ಹೇಳಬಯಸುತ್ತೇನೆ. ನಮ್ಮಲ್ಲಿ ಎಷ್ಟೋ ಜನ ಇದ್ದಾರೆ ಒಂದು ಎಕರೆಗೆ ರೂ. ೧೦, ೪೦ ಸಾವಿರ ದೊರಕತಕ್ಕಂಥ ಭೂಮಿ ಇದೆ. ೧೦ ಎಕರೆ ಭೂಮಿ ಇರತಕ್ಕಂಥವನು ಹೇಳುತ್ತಾನೆ—೫ ಎಕರೆ ಭೂಮಿಯನ್ನು ನಾನು ಸರ್ಕಾರಕ್ಕೆ ಬಿಟ್ಟುಕೊಡುತ್ತೇನೆ, ಸಬ್‌ಇನ್ಸ್‌ಪೆಕ್ಟರ್ ಪೋಸ್ಟ್ ಕೊಡಿಸಿ ಎಂದು. ಸಬ್‌ಇನ್ಸ್‌ಪೆಕ್ಟರ್ ಪೋಸ್ಟ್ ಕೊಡಿಸಿದರೆ ೫ ಎಕರೆ ಭೂಮಿಯನ್ನು ಬಿಡುವುದಕ್ಕೆ ತಯಾರು ಇದ್ದಾನೆ. 5 ಎಕರೆ ಫಲವತ್ತಾದ ಭೂಮಿ ಇದ್ದರೂ ಕೂಡ ಸಬ್‌ಇನ್ಸ್‌ಪೆಕ್ಟರ್ ಆಗಿ ಅವನು ಜೀವನದಲ್ಲಿ ಸುಖವಾಗಿ ಇರತಕ್ಕಂಥ ಮಟ್ಟಿಗೆ ೧೦ ಎಕರೆ ಜಮೀನು ಇರತಕ್ಕಂಥ ಒಬ್ಬ ರೈತ ಸುಖವಾಗಿ ಇರುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿಯನ್ನು ನಾವೆಲ್ಲಾ ಅರ್ಥಮಾಡಿಕೊಂಡಿದ್ದರೂ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕ ಪ್ರಯತ್ನ ಈ ಆಯವ್ಯಯದಲ್ಲಿ ಕಾಣುತ್ತಾ ಇಲ್ಲ ಎಂದು ದುಃಖದಿಂದ ಹೇಳಬೇಕಾಗಿರತಕ್ಕಂಥ ಪರಿಸ್ಥಿತಿ ಬಂದಿದೆ. ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಆಯವ್ಯಯ ಹಿಂದೆ ೧೨೦೦ ಕೋಟಿ ರೂಪಾಯಿಗಳು ಇದ್ದುದನ್ನು ಇವತ್ತು ನಾವು ೧೫೦೦ ಕೋಟಿ ರೂಪಾಯಿಗಳಿಗೆ ಏರಿಸುತ್ತಾ ಇದ್ದೇವೆ. ಅಂದರೆ ನಾವು ಯಾವುದರಿಂದ ಅಧಿಕ ವರಮಾನ ಪಡೆದಿದ್ದೇವೆ? ಅಧಿಕವಾದ ವರಮಾನ ಪಡೆದಂತಹ ಮಾರ್ಗ ಯಾವುದು ಎಂದರೆ ಈ ತೆರಿಗೆಯಿಂದ. ಈ ತೆರಿಗೆಯನ್ನು ಹೆಚ್ಚಿನ ರೀತಿಯಲ್ಲಿ ಹಾಕಿ ಈ ಹಣವನ್ನು ನಾವು ಹೆಚ್ಚು ಮಾಡುವುದಕ್ಕೆ ಹೊರಟಿದ್ದೇವೆ, ಯಾರ ಮೇಲಾದರೂ ಹೊರೆಯಾಗಲಿ ಪರವಾಗಿಲ್ಲ ಎಂದು ತಿಳಿದುಕೊಂಡು ತೆರಿಗೆಯನ್ನು ಹೆಚ್ಚು ಮಾಡುತ್ತಾ ಹೋಗತಕ್ಕಂಥಾ ಆಡಳಿತ ಯಾವುದು ಇದೆಯೋ ಅದು ಸಮರ್ಥವಾದ ಆಡಳಿತ ಎಂದು ನನಗನ್ನಿಸುವುದಿಲ್ಲ. ತೆರಿಗೆಯನ್ನು ಆದಷ್ಟೂ ಕಡಿಮೆ ಮಾಡಿ ತನ್ನ ಕೈಯಲ್ಲಿರತಕ್ಕಂಥ ಉದ್ದಿಮೆಗಳಿಂದ ಹೆಚ್ಚು ಉತ್ಪನ್ನವನ್ನು ಯಾವ ಸರ್ಕಾರ ಮಾಡುತ್ತದೆಯೋ ಅಂತಹ ಸರ್ಕಾರದ ಆಡಳಿತ ಸಮರ್ಥವಾದ ಆಡಳಿತ ಆದೀತು. ಒಂದು

ಉದಾಹರಣೆ ಹೇಳುವುದಾದರೆ, ನಮ್ಮಲ್ಲಿ ೫ ಪ್ರಮುಖವಾದ ಕಾರ್ಖಾನೆಗಳಿಗೆ ನಮ್ಮ ಸರ್ಕಾರ ಬಂಡವಾಳವನ್ನು ಹಾಕಿದೆ. ಸಕ್ಕರೆ ಕಾರ್ಖಾನೆ, ಎನ್. ಜಿ. ಇ. ಎಫ್. ಭದ್ರಾವತಿ ಸ್ಟೀಲ್ ಕಾರ್ಖಾನೆ ಇನ್ನೂ ಮುಂತಾದ ೫ ಕಾರ್ಖಾನೆಗಳಿಗೆ ೧೫೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಕಳೆದ ವರ್ಷ ಬಂದಂತಹ ಡಿವಿಡೆಂಡ್ ೧೮.೯೫ ಲಕ್ಷ. ನಮ್ಮ ಕೈಗಾರಿಕೆಗಳು ನಡೆಯುವ ಸ್ಥಿತಿ ಇದು. ಸರ್ಕಾರ ೧೫೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ೧೮.೯೫ ಲಕ್ಷ ರೂಪಾಯಿಗಳ ಆದಾಯವನ್ನು ಸಂಪಾದನೆ ಮಾಡುವುದಾದರೆ ಈ ವ್ಯವಹಾರವನ್ನು ಏತಕ್ಕೆ ಮಾಡಬೇಕು ? ಹೀಗಾದರೆ ನಮ್ಮ ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಎಷ್ಟರಮಟ್ಟಿಗೆ ಆದೀತು ಎಂಬ ಬಗ್ಗೆ ನಾವೆಲ್ಲ ಚಿಂತನೆ ಮಾಡಬೇಕಾಗಿದೆ. ನಮ್ಮಲ್ಲಿ ರೇಷ್ಮೆ ಕಾರ್ಖಾನೆಗಳೂ ಇವೆ. ಅದರಲ್ಲಿ ಆರೂವರೆ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ವರ್ಷಕ್ಕೆ ಐದೂವರೆ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದ್ದೇವೆ. ಮಂಡ್ಯದಲ್ಲಿ ಅಸಿಟೇಟ್ ಫ್ಯಾಕ್ಟರಿ ಇದೆ. ಅಲ್ಲಿ ಒಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆ. ಹಿಂದಿನ ಸರ್ಕಾರದವರು ಈ ಬಗ್ಗೆ ಒಂದು ಯೋಜನೆ ಮಾಡಿದ್ದರು. ೩೦ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ವಸ್ತುಗಳು ಅಲ್ಲಿದ್ದರೂ ಕೂಡ ಆ ಕಾರ್ಖಾನೆಯನ್ನು ಕೇವಲ ೫೦ ಲಕ್ಷ ರೂಪಾಯಿಗಳಿಗೆ ಮಹಾರಾಷ್ಟ್ರದ ಒಬ್ಬ ವ್ಯಕ್ತಿಗೆ ಮಾರಾಟ ಮಾಡತಕ್ಕಂಥ ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದರು. ಆದರೆ ಈ ಸದನದ ಸಮಿತಿ ಅದನ್ನು ತಡೆಗಟ್ಟಿದ್ದರಿಂದ ಅದು ನಿಂತು ಹೋಯಿತು. ಈಗಾಗಲೇ ಅದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟ ಅನುಭವಿಸಿದ್ದರೂ ಕೂಡ ಪ್ರತಿನಿತ್ಯ ೧ ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸುತ್ತಿದ್ದೇವೆ. ಈ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡತಕ್ಕಂಥ ದಿಶೆಯಲ್ಲಿ ಮತ್ತು ಅದರ ಉತ್ಪನ್ನಗಳನ್ನು ಹೆಚ್ಚು ಮಾಡತಕ್ಕಂಥ ದಿಶೆಯಲ್ಲಿ ನಾವು ನಡೆಯುತ್ತಾ ಇಲ್ಲ. ಬಹುಶಃ ಭಾರತದಲ್ಲೇ ಇದೊಂದು ಪ್ರಮುಖವಾದ ಉದ್ಯಮವಾಗಿದ್ದರೂ ಕೂಡ ಆ ಉದ್ಯಮ ಹೆಚ್ಚು ಲಾಭದಾಯಕ ರೀತಿಯಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಿ ಆ ಮೂಲಕ ನಮ್ಮ ಸರ್ಕಾರದ ಆಯವ್ಯಯವನ್ನು ಅಥವಾ ಆದಾಯವನ್ನು ಅಧಿಕಗೊಳಿಸತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತಾ ಇಲ್ಲ. ನಾವು ಜನರಮೇಲೆ ಅಧಿಕ ತೆರಿಗೆಗಳನ್ನು ಹಾಕಿ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ಸರಿಯಾದ ಮಾರ್ಗ ಅಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಇನ್ನು ರೈತರ ಬಗ್ಗೆ ಕೊಟ್ಟಿರತಕ್ಕಂಥ ರಿಯಾಯಿತಿಗಳನ್ನು ನೋಡಿದರೆ ನಮಗಂತೂ ಅದರಿಂದ ನಿರಾಸೆಯಾಗಿದೆ. ಒಟ್ಟು ೩೬ ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ನಾವು ಅವರಿಗೆ ಕೊಟ್ಟಿದ್ದೇವೆಂದು ಹೇಳಿದರೂ ಕೂಡ ಇದು ಒಂದು ದೊಡ್ಡ ಸಾಧನೆ ಎಂದು ನನಗೆ ಅನ್ನಿಸುವುದಿಲ್ಲ. ಇದೆಲ್ಲ ಅಧಿಕಾರಶಾಹಿಗಳು ಮಾಡಿಕೊಂಡಿರುವ ನಿಯಮಗಳು. ಈ ಅಧಿಕಾರಿಶಾಹಿಗಳು ಮಾಡಿಕೊಂಡಿರುವ ನಿಯಮಗಳ ಪ್ರಕಾರ ಇಗು ಸೂಜಿಯ ಕಣ್ಣಿನಲ್ಲಿ ಒಂಟೆಯನ್ನು ತೂರಿಸುವ ಪ್ರಯತ್ನವಾಗಿದೆ. ೩೦-೬-೮೩ರೊಳಗೆ ಮತ್ತು ಅದಕ್ಕಿಂತ ಮುಂಚೆ ಸಾಲದ ಹಣದಲ್ಲಿ ಅಸಲು ಹಣ ಪಾವತಿಯಾಗಿದ್ದರೆ ನಾವು ಬಡ್ಡಿಯನ್ನು ಬಿಟ್ಟುಬಿಡುತ್ತೇವೆ ಎಂದು ಅವರು ಹೇಳಿದ್ದಾರೆ. ಸಾಲದ ಹಣವನ್ನು ಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಇನ್ನು ಬಡ್ಡಿ ಹಣ ಕೊಡುವುದೆಲ್ಲಿ ಬಂತು ? ರೈತರು ಸಾಲದ ಹಣವನ್ನು ಕೊಡತಕ್ಕಂಥ ಚೈತನ್ಯವನ್ನು ನಾವು ಎಲ್ಲಿ ಸೃಷ್ಟಿ ಮಾಡಿದ್ದೇವೆ ? ಆ ಒಂದು ಚೈತನ್ಯವನ್ನು ನಾವು ಸೃಷ್ಟಿ ಮಾಡಿಲ್ಲದೇ ಇರುವುದರಿಂದ ಅವರು ಸಾಲ ಕೊಡುವುದಕ್ಕೆ ಸಾಧ್ಯವಿಲ್ಲ. ಈ ವರ್ಷ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಬರಗಾಲದ ಪರಿಸ್ಥಿತಿ ಬೇರೆ ಬಂದಿದೆ ಇಂತಹ ಪರಿಸ್ಥಿತಿ ಇರುವಾಗ ೩೦-೬-೮೩ಕ್ಕೆ ಮತ್ತು ಅದಕ್ಕಿಂತ ಮುಂಚೆ ಸಾಲ ಪಾವತಿ ಮಾಡಿದರೆ ಬಡ್ಡಿ ಬಿಡುತ್ತೇವೆ. ಆಗ ರಿಯಾಯಿತಿಯನ್ನು ಕೊಡುತ್ತೇವೆ ಎಂದು ಹೇಳಿರತಕ್ಕಂಥದ್ದು ಸಾಧುವಾದುದಲ್ಲ. ಹಿಂದಿನ ಸರ್ಕಾರದವರು ಇದನ್ನೇ ಮಾಡಿದರು. ೧೨ ಲಕ್ಷ ಅರ್ಜಿಗಳು ಬಂದರೆ ಅದರಲ್ಲಿ ೭೫ ಸಾವಿರ ಅರ್ಜಿಗಳಿಗೆ ರಿಯಾಯಿತಿಯನ್ನು ಕೊಟ್ಟರು. ನಾವು ಇವರಿಗೆ ಬೆಂಬಲವನ್ನು ಕೊಡುತ್ತಿದ್ದೇವೆ ಅಂತ ಅಲ್ಲ. ಇನ್ನು ಮುಂದೆ ಸರಿಯಾದ ದಿಕ್ಕಿನಲ್ಲಿ ಹೋಗಿ ಎಂದು ಸೂಚನೆಯನ್ನು ಮತ್ತು ಎಚ್ಚರಿಕೆಯನ್ನು ಕೊಡುತ್ತಿದ್ದೇವೆ ನಾನು ಈ ಸದನಕ್ಕೆ ಬಂದ ಲಾಗಾಯ್ತು ಈ ವಿಚಾರವನ್ನು ಮೊದಲಿನಿಂದಲೂ ಹೇಳುತ್ತಿದ್ದೇನೆ. ನಾನು ಹಿಂದಿನ ಸರ್ಕಾರದವರಿಗೂ ಈ ಮಾತನ್ನು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ನಿಮ್ಮ ಮೊದಲನೆಯ ಎಚ್ಚರಿಕೆಯೋ ಅಥವಾ ಎರಡನೆಯ ಎಚ್ಚರಿಕೆಯೋ ?

ಶ್ರೀ ಎಚ್. ಗಂಗಾಧರನ್.--ನಿಮಗೂ ನಾವು ಎಚ್ಚರಿಕೆಯನ್ನು ಕೊಡುತ್ತಾ ಬಂದಿದ್ದೇವೆ. ನೀವು ಒಳ್ಳೆಯ ಕೆಲಸಗಳನ್ನು ಮಾಡಿದಾಗ ನಾವು ಸಹಕಾರವನ್ನು ಕೊಟ್ಟಿದ್ದೇವೆ. ನೀವು ತಪ್ಪು ಮಾಡಿದಾಗ ಮಾರ್ಗದರ್ಶನವನ್ನೂ ಮಾಡುತ್ತಾ ಬಂದಿದ್ದೇವೆ. ಇವತ್ತು ನಾವು ಇವರಿಗೆ ಸಹಕಾರವನ್ನು ಕೊಟ್ಟಿದ್ದೇವೆ. ಅಂದರೆ ಇದರ ಮೇಲಿನ ವ್ಯಾಮೋಹದಿಂದ ಅಲ್ಲ. ಅಥವಾ ನಿಮ್ಮ ಮೇಲಿನ ದ್ವೇಷದಿಂದ ಅಲ್ಲ. You have become irreparibly damaged. ಇವರದು ರಿಪೇರಿ ಆಗುವಂಥ ದೋಣಿ ಇದೆ ಎಂದು ತಿಳಿದುಕೊಂಡು ನಾವು ಸಹಕಾರವನ್ನು ಕೊಟ್ಟಿದ್ದೇವೆ. ಅದೇನೇ ಆದರೂ ಕೂಡ ಈ ಬಗ್ಗೆ ನಿಯಮಗಳನ್ನು ಏನು ಮಾಡಿದ್ದಾರೆ ಈ ನಿಯಮಗಳನ್ನು ಅನುಸರಿಸಿ ಯಾವ ರೈತ ಕೂಡ ಇದರ ನೆರವನ್ನು ಪಡೆಯಲು ಸಾಧ್ಯವಿಲ್ಲ. ಈ ನಿಯಮಗಳನ್ನು ಬದಲಾವಣೆ ಮಾಡಿ ಅವರಿಗೆ ಹೆಚ್ಚಿನ ಸೌಕರ್ಯಗಳನ್ನು ಮತ್ತು ರಿಯಾಯಿತಿಗಳನ್ನು ಕೊಡಬೇಕು ಎಂದು ಹೇಳಬಯಸುತ್ತೇನೆ. ಇಡೀ ರೈತರ ಸಾಲವನ್ನು ಮನ್ನಾ ಮಾಡಿದ್ದರೆ ೧೧೨ ಕೋಟಿ ರೂಪಾಯಿಗಳು ಮಾತ್ರ ಖರ್ಚಾಗುತ್ತಾ ಇತ್ತು. ಅದು ಎಲ್ಲರ ಮೇಲೂ ಅಲ್ಲ. ಅದರಲ್ಲಿ ಶ್ರೀಮಂತರೂ ಇದ್ದಾರೆ. ಟ್ರ್ಯಾಕ್ಟರ್ ತೆಗೆದುಕೊಂಡಿರುವವರೂ ಇದ್ದಾರೆ ನೂರಾರು ಎಕರೆ ಭೂಮಿ ಇರತಕ್ಕಂಥವರು ಸ್ಪ್ರಿಂಕ್ಲರ್ ತೆಗೆದುಕೊಂಡಿರುವವರಿಗೂ ಸಾಲ ಕೊಟ್ಟಿದ್ದೀರಿ ಇವರಿಗೂ ಈ ಹಣ ಬಿಡಬೇಕು ಎಂದು ನಾನು ಹೇಳಿಲ್ಲ. ಈ ಬಗ್ಗೆ ನಾನು ಲೆಕ್ಕ ಹಾಕಿ ಹೇಳಿದ್ದೇನೆ. ರೈತರಿಗೆ ಸಾಲವನ್ನು ಮನ್ನಾ ಮಾಡಿದ್ದರೆ ೩೫ ಕೋಟಿ ಮಾತ್ರ ಬಿಡುತ್ತಾ ಇದ್ದೀರಿ ಇದಕ್ಕಿಂತಾ ಹೆಚ್ಚು ಬಿಡುತ್ತಾ ಇರಲಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ ೪೦ ಲಕ್ಷ ಜನ ರೇಷನ್ ಕಾರ್ಡುದಾರರಿಗೆ ಅಕ್ಕಿ ಬೆಲೆ ಇಳಿಸುತ್ತೇವೆ ಎಂದು ಹೇಳಿ ಸುಮಾರು ೨೫ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುವುದಕ್ಕೆ ತಯಾರು ಇದ್ದಾರೆ. ನಿಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ೩ ಲಕ್ಷ ೭೩ ಸಾವಿರ ಜನಕ್ಕೆ ೨೧ ಕೋಟಿ ರೂಪಾಯಿಗಳಷ್ಟು ಇನ್‌ಕ್ರಿಮೆಂಟ್ ಕೊಡುತ್ತಾ ಬಂದಿರಿ, ಹೀಗೆ ನೀವು ಖರ್ಚು ಮಾಡಿದಿರಿ.

೫-ಪಿ ಎಂ.

ರೈತರಿಗೆ ೩೫ ಕೋಟಿ ರೂಪಾಯಿಗಳನ್ನು ಬಿಡುವುದಕ್ಕೆ ಏಕೆ ಅಂಜಿಕೊಳ್ಳುತ್ತಾ ಇದ್ದಾರೋ ನನಗೆ ಗೊತ್ತಾಗುತ್ತಾ ಇಲ್ಲ. ರೈತ ಕೊಡಬೇಕಾದಂಥ ಸಾಲಕ್ಕೆ ಅವನನ್ನು ಶೂಲಕ್ಕೆ ಏರಿಸತಕ್ಕ ಪ್ರಯತ್ನ ಮಾಡುತ್ತಾ ಇದ್ದಾರೆ. ಇವತ್ತು ಬೇರೆ ಬೇರೆ ಕಾರ್ಖಾನೆಗಳಿಗೆ ಹಾಕಿದ್ದ ಹಣದಲ್ಲಿ ೮೫ ಕೋಟಿ ರೂಪಾಯಿ ಸಾಲ ಬರಬೇಕು ಎಂದು ಅಕೌಂಟೆಂಟ್ ಜನರಲ್ ಅವರು ಹೇಳಿದ್ದಾರೆ. ಅದನ್ನು ವಸೂಲು ಮಾಡಿದ್ದೀರಾ? ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಹಣವನ್ನು ವಸೂಲು ಮಾಡುವುದಕ್ಕೆ ಆಗದೆ ಸಣ್ಣ ರೈತರಿಗೆ ಕಿರುಕುಳ ಕೊಡತಕ್ಕಂಥದ್ದು ಅಸಹನೀಯವಾಗಿ ಕಾಣುತ್ತಾ ಇದೆ. ಈ ದೃಷ್ಟಿಯಿಂದ ಹೇಳುವುದಾದರೆ, ರೈತನ ಸಮಸ್ಯೆಗಳನ್ನು ಬಗೆಹರಿಸುವಂಥ ಪ್ರಯತ್ನ ಸಾಕಷ್ಟು ನಡೆದಿಲ್ಲ ಎಂದು ಹೇಳಬೇಕಾಗಿದೆ. ನಿಮಗೆ ನಿಜವಾಗಿ ಕೊಡಬೇಕು ಎನ್ನುವ ಮನಸ್ಸು ಇರುವುದಾದರೆ ಕಂಡೀಷನ್ಸ್ ಏನು ಹಾಕಿದ್ದೀರಿ ಆ ಕಂಡೀಷನ್ಸ್‌ನ್ನು ರದ್ದು ಮಾಡಿ. ಒಂದು ವರ್ಷದ ಅವಧಿಯಲ್ಲಿ ಸಾಲ ತೀರಿಸಿದವರಿಗೆ ಇಷ್ಟು ಹಣ ರಿಯಾಯಿತಿ ಮಾಡಿದ್ದೇವೆ ಎನ್ನತಕ್ಕಂಥ ಮಾರ್ಗಸೂಚಿ ಇರಬೇಕೇ ಹೊರತಾಗಿ ಜನರಿಗೆ ಹಣ ಸಲ್ಲದಂತೆ ಮಾಡುವ ಮಾರ್ಗಸೂಚಿಯನ್ನು ಅಧಿಕಾರಶಾಹಿ ನಿರ್ಮಾಣ ಮಾಡಿದರೆ ಅದನ್ನು ಸ್ವಾಗತ ಮಾಡಲಿಕ್ಕೆ ತಯಾರಿಲ್ಲ. ಅದಕ್ಕೋಸ್ಕರ ಸರ್ಕಾರ ಅದರತ್ತ ಗಮನಹರಿಸಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಹಿಂಜರಿಯುತ್ತಾ ಇಲ್ಲ

ಇನ್ನು ಆಯವ್ಯಯದಲ್ಲಿ ಕೆಲವು ಪ್ರಮುಖ ಅಂಶಗಳನ್ನು ತಾವು ಪ್ರಸ್ತಾಪ ಮಾಡಿದಿರಿ. ನಾವು ಆರ್ಥಿಕ ಸಮೀಕ್ಷೆಯಲ್ಲಿ ನೋಡುತ್ತಾ ಹೋದರೆ ೧೯೮೦-೮೧ರವರೆಗೆ ಸರ್ಕಾರ ನಡೆದು ಬಂದ ರೀತಿಯನ್ನು ನೋಡಿದರೆ ದೈವದತ್ತವಾದ ಸಂಪತ್ತು ಏನಿದೆ, ನೈಸರ್ಗಿಕವಾದ ಸಂಪತ್ತು ಏನಿದೆ ಅದರಿಂದ ಕೂಡ ಅಧಿಕ ಉತ್ಪನ್ನ ಮಾಡುವಂಥ ಕಾರ್ಯ ನಡೆಯಲಿಲ್ಲ. ಕಬ್ಬಿಣ, ಕಾಗದ ಸಕ್ಕರೆ, ಸಾಬೂನು, ವನಸ್ಪತಿ ಮುಂತಾದುವುಗಳನ್ನು ತೆಗೆದುಕೊಂಡರೆ ಕಾಗದದೊಳಗೆ ಸ್ವಲ್ಪ ಹೆಚ್ಚಿನ ಉತ್ಪನ್ನವಿದೆ, ಸಕ್ಕರೆಯೊಳಗೆ ಹೆಚ್ಚಿನ ಉತ್ಪನ್ನವಿದೆ, ಕಬ್ಬಿಣದ ಅದಿರಿನಲ್ಲಿ ಸ್ವಲ್ಪ ಉತ್ಪನ್ನವಿದೆ. ನೂರಕ್ಕೆ ೧೦ ಪರ್ಸೆಂಟ್ ನಿಸರ್ಗದತ್ತವಾದ ಸಂಪತ್ತಿನಿಂದ ಅಧಿಕ ಉತ್ಪನ್ನ ಮಾಡತಕ್ಕಂಥ ದಿಕ್ಕಿನಲ್ಲಿ ಸರ್ಕಾರ ಮಾರ್ಗಸೂಚಿಯನ್ನು ಅನುಸರಿಸಿಲ್ಲ ಎನ್ನುವ ವಿಷಯ ಈ ಒಂದು ಆರ್ಥಿಕ ಸಮೀಕ್ಷೆಯಲ್ಲಿ ಕಾಣುತ್ತಾ ಇದೆ. ಇವತ್ತಿನ ದಿವಸ ನಾವು ಆದಾಯ ವೆಚ್ಚಗಳನ್ನು ಸರಿದೂಗಿಸಲು ನಮ್ಮಲ್ಲಿರತಕ್ಕಂಥ ನಿಸರ್ಗದತ್ತವಾದ ಸಂಪತ್ತನ್ನು ಅಭಿವೃದ್ಧಿಗೊಳಿಸತಕ್ಕ ರೀತಿಯಲ್ಲಿ ನಾವು ಪ್ರಯತ್ನ ಮಾಡಬೇಕಾಗಿದೆ,

ಕೊನೆಯದಾಗಿ ಒಂದೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸ್ವಚ್ಛ. ದಕ್ಷ, ಪರಿಣಾಮಕಾರಿ ಆಡಳಿತವನ್ನು ಕೊಡುತ್ತೇವೆಂದು ಹೇಳಿದರು. ಯಾವರೀತಿ ಮಾಡುತ್ತೀರಿ ಹೇಗೆ ಮಾಡುತ್ತೀರಿ ಎಂದು ಒಂದೆರಡು ಕಡೆ ಇದೆ. ಸರ್ಕಾರದವರು ಮಾರ್ಗಸೂಚಿಯಲ್ಲಿ ಹೇಳಿದ್ದಾರೆ. ನಾವು ನೇರವಾಗಿ ಹಣಪಾವತಿ ಮಾಡಿದರೆ, ಡ್ರಾಫ್ಟ್ ಪಾವತಿ ಮಾಡಿದರೆ ಆರ್.ಟಿ.ಒ. ಆಫೀಸಿನಲ್ಲಿ ಲೈಸನ್ಸ್ ನವೀಕರಣ ಆದಂತೆ ಪರಿಗಣಿಸತಕ್ಕದ್ದು, ಇದರಿಂದ ಆರ್. ಟಿ ಒ. ಆಫೀಸಿನಲ್ಲಿ ಭ್ರಷ್ಟಾಚಾರವನ್ನು ಸ್ವಲ್ಪಮಟ್ಟಿಗೆ ತಪ್ಪಿಸಿದಹಾಗೆ ಆಗುತ್ತದೆ ಎಂದು ಹೇಳಿದ್ದಾರೆ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನಡೆಯುತ್ತಿರುವುದು ತಪ್ಪಿದೆಯೇ, ತಾಲ್ಲೂಕು ಆಫೀಸಿನಲ್ಲಿ ತಪ್ಪಿದೆಯೇ, ಸಣ್ಣ ವ್ಯವಹಾರಗಳಲ್ಲಿ ತಪ್ಪಲಿಲ್ಲ ? ಏಕೆ ತಪ್ಪಲಿಲ್ಲ ಆಡಳಿತವನ್ನು ಜನತಾಪಕ್ಷದ ಸರ್ಕಾರ ಮಾಡಿದರೂ ಆಡಳಿತ ಜನತೆಯ ಕೈಗೆ ಸಿಗುವಂಥ ವ್ಯವಸ್ಥೆಯಾಗಲಿಲ್ಲ. ಯಾವನೇ ಒಬ್ಬ ಅಧಿಕಾರಿ ಜನತೆಯ ಅಭೀಷ್ಟೆಗೆ ವಿರುದ್ಧವಾಗಿ ಅವನ ಪ್ರಾರ್ಥನೆಯನ್ನು ತುಚ್ಛೀಕರಿಸತಕ್ಕ ಸಂದರ್ಭ ಬಂದಲ್ಲಿ ಸಾಮಾನ್ಯ ಜನತೆ ಏನು ಕಾರ್ಯವನ್ನು ಮಾಡಲಿಕ್ಕೆ ತಯಾರಿದೆ? ಅವನನ್ನು ಒಂದು ಹೆಚ್ಚು ಮಾತನಾಡಿದರೆ ಐ.ಪಿ.ಸಿ. ೩೫೨ ನೇ ಸೆಕ್ಷನ್ ಬರುತ್ತದೆ. ಜಾಮೀನುರಹಿತ ಅಪರಾಧ ಮಾಡಿದಂತಾಗುತ್ತದೆ. ಬ್ರಿಟಿಷ್ ಸರ್ಕಾರ ಮಾಡಿದ ಶಾಸನಗಳಲ್ಲಿ ಅಧಿಕಾರಿಗೆ ಏನು ಒಂದು ಅವಕಾಶ ಕೊಟ್ಟಿದ್ದಾರೆ ಅದೇ ಅವಕಾಶ ನಿಮ್ಮ ಶಾಸನದಲ್ಲಿದೆ. ಸರ್ಕಾರದ ಅಧಿಕಾರಿ ಮಾಡಿದ ತಪ್ಪುಗಳನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡತಕ್ಕ ಹಕ್ಕು ಪ್ರಜೆಗಳಿಗೆ ಇಲ್ಲ, ಇದು ನ್ಯಾಯವೇ? ಯಾರಾದರೂ ಸರ್ಕಾರದ ಅಧಿಕಾರಿ ಬಳಿಗೆ ಹೋಗಿ ಈ ಕಾರ್ಯವನ್ನು ಮಾಡಿಕೊಡು ಎಂದು ಕೇಳಿದರೆ, ಅವನು ಲಂಚ ಕೇಳಿ ಕಾರ್ಯವನ್ನು ವಿಳಂಬ ಮಾಡಿದರೆ ಸಾರ್ವಜನಿಕರು ಏನು ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ? ವಿಜಿಲೆನ್ಸ್ ಕಮಿಷನ್‌ಗೆ ಕಳಿಸಬೇಕು. ಇವತ್ತು ವ್ಯವಸಾಯ ಕ್ಷೇತ್ರದಲ್ಲಿ, ಕೈಗಾರಿಕ ಕ್ಷೇತ್ರದಲ್ಲಿ ಆಡಳಿತ ಕ್ಷೇತ್ರದಲ್ಲಿ ಜನರು ಪಾಲ್ಗೊಳ್ಳುವಂಥ ವ್ಯವಸ್ಥೆ ಆಗಬೇಕಾಗಿತ್ತು. ಈಗ ಸಾರ್ವಜನಿಕರಿಗೆ ಆ ಒಂದು ವ್ಯವಸ್ಥೆಯಿಲ್ಲ; ಏಕೆ ಸಾಧ್ಯವಾಗುವುದಿಲ್ಲ? ಯಾರಾದರೂ ಲೈಸನ್ಸ್ ಬೇಕು ಎಂದು ಅರ್ಜಿ ಹಾಕಿದರೆ ಆ ಅಧಿಕಾರಿ ಒಂದು ತಿಂಗಳೊಳಗೆ ಕೊಡಬೇಕು. ಕೊಡಲಿಕ್ಕೆ ಆಗಲಿಲ್ಲ ಅಂದರೆ ಅವನನ್ನು ಅಪರಾಧಿ ಎಂದು ಪರಿಗಣಿಸಿ, ಅವನ ಮೇಲೆ ನ್ಯಾಯಾಲಯಕ್ಕೆ ಹೋಗುವ ಅವಕಾಶ ಮಾಡಿಕೊಟ್ಟಿದೆಯೇ? ಕಾನೂನನ್ನು ಏನು ರಚನೆ ಮಾಡುತ್ತೀರಿ, ಇದಕ್ಕೆ ಬದಲಾಗಿ ರಕ್ಷಣೆ ಕೊಡತಕ್ಕ ಅಧಿನಿಯಮಗಳನ್ನು ಶಾಸನದಲ್ಲಿ ಒಳಪಡಿಸುವ ಪದ್ಧತಿಯನ್ನು ರದ್ದುಮಾಡಿ ಸಾರ್ವಜನಿಕರ ಹಕ್ಕು ಬಾಧ್ಯತೆಗಳನ್ನು ನ್ಯಾಯಾಲಯದ ಮೂಲಕ ಸ್ಥಾಪಿಸುವಂತೆ ವ್ಯವಸ್ಥೆ ಆಡಳಿತದಲ್ಲಿ ಬರಬೇಕಾದಂಥ ಅವಶ್ಯಕತೆಯಿದೆ ಆ ದೃಷ್ಟಿಯಿಂದ ಆಯವ್ಯಯದಲ್ಲಿ ವ್ಯವಸ್ಥೆ ಮಾಡುವುದಕ್ಕೆ ಬದಲಾಗಿ ಸರ್ಕಾರದ ಸೇವೆಗೆ ೧೭೮ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಯಾವುದಾದರೂ ಲೈಸನ್ಸಿಗೆ ಅರ್ಜಿ ಹಾಕಿದರೆ ಅದು ಎಷ್ಟರಮಟ್ಟಿಗೆ ಸರಿಯಾದ ಕಾಲದಲ್ಲಿ ಸಿಕ್ಕಿದೆ? ಇಲ್ಲಸಲ್ಲದ ನೆಪಗಳನ್ನು ಅಧಿಕಾರಶಾಹಿ ಒಡ್ಡುತ್ತಿದೆಯೆ ಹೊರತಾಗಿ ಅಧಿಕಾರಶಾಹಿ ಇರತಕ್ಕಂಥಾದ್ದು ಜನರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥಾದ್ದಕ್ಕೆ ಎಂಬ ಆಡಳಿತ ಮಾರ್ಗದರ್ಶನ ಇದರಲ್ಲಿ ಇಲ್ಲ. ಇವತ್ತು ಎರಡು ತಿಂಗಳ ಅವಧಿಯಲ್ಲಿ ಸಮಗ್ರವಾಗಿ ಮಾಡಿಬಿಟ್ಟಿದ್ದೀರಿ ಎನ್ನತಕ್ಕ ಭಾವನೆಯಿಂದ ಮಾಡಬೇಕಾದ ಕೆಲಸ ಬಹಳ ಇದೆ ನಡೆಯಬೇಕಾದ ದಾರಿ ಬಹಳ ಇದೆ. ಆ ದಾರಿಯ ಮಧ್ಯದಲ್ಲಿ ಕಾಲು ಮುರಿಯುವಂಥ ಕುತಂತ್ರ ನಡೆಯುತ್ತಿದೆ. ಎಚ್ಚರದಿಂದ ಆ ರೀತಿ ಆಗದ ರೀತಿಯಲ್ಲಿ ಜನತೆಯನ್ನು ನೀವು ಕೈಗೆ ತೆಗೆದುಕೊಳ್ಳುವಂಥ ರೀತಿನೀತಿಗಳನ್ನು ಇದರಲ್ಲಿ ಅಳವಡಿಸಬೇಕಾಗಿತ್ತು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೆನೆ. ಈ ಆಯವ್ಯಯದಲ್ಲಿ ಸಮಗ್ರವಾದಂಥ ಕ್ರಾಂತಿಯುತ ಮಾರ್ಗ ಇಲ್ಲದೇ ಹೋದರೂ ಕೂಡ ನಾವು ಆ ಕಾರ್ಯವನ್ನು ಮಾಡುತ್ತೇವೆ ಎನ್ನುವ ಸ್ವಾಭಿಮಾನವಾದರೂ ಇದೆಯಲ್ಲ ಆ ಸ್ವಾಭಿಮಾನಿ ದೃಷ್ಟಿಯನ್ನಿಟ್ಟುಕೊಂಡು ಆಶಾದಾಯಕವಾಗಿ ಆಯವ್ಯಯವನ್ನು ಮಂಡನೆ ಮಾಡಿದ್ದೀರಿ ಅದಕ್ಕೋಸ್ಕರ ಇದನ್ನು ಸ್ವಾಗತ ಮಾಡುತ್ತಾ ಇದ್ದೇನೆ. ರೈತರಿಗೆ ಸಮಗ್ರವಾದಂಥ ನೀತಿಯನ್ನು ರೂಪಿಸಬೇಕು ಎಂಬ ಸೂಚನೆಯನ್ನು ಕೊಟ್ಟು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ನನ್ನಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಸಭೆಯ ವೇಳೆ ಮುಗಿದಿದ್ದರಿಂದ ಸಭೆಯ ಕಾರ್ಯಕಲಾಪಗಳನ್ನು ನಾಳೆ ೧೧ ಗಂಟೆಗೆ ಮುಂದುವರಿಸಲಾಗಿದೆ.

(ಸಭೆಯು ಸಂಜೆ ೬ ಗಂಟೆ ೧೦ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೨ನೇ ಮಾರ್ಚಿ ೧೯೮೩, ಮಂಗಳವಾರದಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು).

WD 7237